ಮಂಗಳವಾರ, ನವೆಂಬರ್ 25, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಯಾನ್ಸೆನ್ ಮಿಂಚು



ದಕ್ಷಿಣ ಆಫ್ರಿಕಾ ತಂಡದ ಮಾರ್ಕೊ ಯಾನ್ಸೆನ್ ಅವರು ಗುವಾಹಟಿಯಲ್ಲಿ ಭಾರತ ವಿರುದ್ಧ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದಲ್ಲಿ ಆರು ವಿಕೆಟ್ ಗೊಂಚಲು ಪಡೆದರು

ಚಳಿ...ಚಳಿ...



ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯಲ್ಲಿ ಸೋಮವಾರ ಮುಂಜಾನೆ ತೀವ್ರ ಚಳಿಯಿದ್ದ ಕಾರಣ ಮಕ್ಕಳಿಬ್ಬರು ಹೊದಿಕೆ ಹೊದ್ದುಕೊಂಡು ಕುಳಿತಿದ್ದರು

ಚಿಟಿಕೆ ಸುದ್ದಿ

77 ಅಡಿ ಎತ್ತರದ ‘ಶ್ರೀರಾಮ ಪ್ರತಿಮೆ’ 28ಕ್ಕೆ ಅನಾವರಣ



77 ಅಡಿ ಎತ್ತರದ ಶ್ರೀರಾಮನ ಪ್ರತಿಮೆ

ಕಾರವಾರ: ಗೋವಾ ರಾಜ್ಯದ ಕಾಣಕೋಣ ಸಮೀಪದ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠ್ ಆವರಣದಲ್ಲಿ 77 ಅಡಿ ಎತ್ತರದ ಶ್ರೀರಾಮನ ಕಂಚಿನ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ನ. 28ರಂದು ಅನಾವರಣಗೊಳಿಸುವರು.

ನವೆಂಬರ್ 27ರಂದು ಪ್ರತಿಮೆಯ ಪ್ರಾಣಪ್ರತಿಷ್ಠೆ ಕಾರ್ಯಕ್ರಮ ನಡೆಯಲಿದೆ.

‘ಗುಜರಾತ್‌ನಲ್ಲಿ ಸರ್ದಾರ್ ವಲ್ಲಭಬಾಯ್ ಪಟೇಲ್ ಅವರ ಏಕತಾ ಪ್ರತಿಮೆ ನಿರ್ಮಿಸಿರುವ ನೊಯ್ಡಾದ ರಾಮ್‌ಸುತಾರ್ ಅವರ ಮಾರ್ಗದರ್ಶನದಲ್ಲಿ ಪ್ರತಿಮೆ ನಿರ್ಮಾಣವಾಗಿದೆ. ಮೂರು ಪ್ರತ್ಯೇಕ ಭಾಗವಾಗಿಸಿ ಪರ್ತಗಾಳಿಗೆ ಪ್ರತಿಮೆ ತರಲಾಗಿದೆ.

‘ಮಠ ಸ್ಥಾಪನೆಗೊಂಡು 550 ವರ್ಷ ಕಳೆದ ಸ್ಮರಣಾರ್ಥ ರಾಮನ ಪ್ರತಿಮೆ ಸ್ಥಾಪಿಸಲಾಗುತ್ತಿದೆ’ ಎಂದು ಪೀಠಾಧಿಪತಿ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿ ಅವರು ತಿಳಿಸಿದ್ದಾರೆ.

ಕುಕ್ಕೆ: 110 ಭಕ್ತರಿಂದ ಎಡೆ ಸ್ನಾನ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆ ಸುಬ್ರಹ್ಮಣ್ಯ ಚಂಪಾ ಷಷ್ಠಿ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ದೇವಳದ ಹೊರಾಂಗಣದಲ್ಲಿ 110 ಸೇವಾರ್ಥಿಗಳು ಎಡೆಸ್ನಾನ ಉರುಳು ಸೇವೆ ನೆರವೇರಿಸಿದರು.

ಹೊರಾಂಗಣದಲ್ಲಿ ಸುತ್ತಲೂ ಹಾಕಿದ್ದ ಬಾಳೆ ಎಲೆ, ಅದಕ್ಕೆ ಬಡಿಸಿದ್ದ ದೇವರ ನೈವೇದ್ಯವನ್ನು ಗೋವುಗಳಿಂದ ತಿನ್ನಿಸಿ ಬಳಿಕ ಹರಕೆ ಹೊತ್ತವರು ಉರುಳು ಸೇವೆ ನೆರವೇರಿಸಿದರು. ಅದಕ್ಕೂ ಮೊದಲು ಸೇವೆ ಮಾಡುವ ಭಕ್ತರು ದರ್ಪಣ ತೀರ್ಥದಲ್ಲಿ ಮಿಂದು ಅಲ್ಲಿಂದ ಸರತಿ ಸಾಲಿನಲ್ಲಿ ಬಂದು ಎಡೆ ಸೇವೆ ನೆರವೇರಿಸಿದರು.

ಹುಲಿ ದಾಳಿಗೆ ಮಹಿಳೆ ಸಾವು

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಿರುವ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಸೋಮವಾರ ಹುಲಿ ದಾಳಿಗೆ ಮಹಿಳೆ ಮೃತಪಟ್ಟಿದ್ದಾರೆ.



ನಾಗಿಯಮ್ಮ

ತಮಿಳುನಾಡಿನ ನೀಲಗಿರಿ (ಊಟಿ) ಜಿಲ್ಲೆಯ ಗೂಡ್ಲೂರು ತಾಲ್ಲೂಕಿನ ಮಾವನಹಳ್ಳ ಗ್ರಾಮದ ನಾಗಿಯಮ್ಮ (61) ಮೃತರು. ಮೇಕೆ ಮೇಯಿಸುವಾಗ ಹುಲಿ ಮಹಿಳೆಯನ್ನು ಎಳೆದೊಯ್ದಿದೆ.

ಇದೇ ಸ್ಥಳದಲ್ಲಿ 5 ತಿಂಗಳ ಹಿಂದೆ 2 ಹಸುಗಳನ್ನು ಹುಲಿ ಕೊಂದಿತ್ತು.

‘ವರಿಷ್ಠರು ಹೇಳಿದಂತೆ ನಡೆಯುವೆ’

ಮತ್ತೆ ಹೈಕಮಾಂಡ್‌ನತ್ತ ಕೈ ತೋರಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ (ಶಿಡ್ಲಘಟ್ಟ): ‘ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ವರಿಷ್ಠರ ತೀರ್ಮಾನದಂತೆ ನಡೆಯುತ್ತೇವೆ. ನನ್ನನ್ನೇ ಮುಂದುವರಿಯಿರಿ ಎಂದರೆ ಮುಂದುವರಿಯುವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಇಲ್ಲಿ ಹೇಳಿದರು.

‘ಇದು, ಹೈಕಮಾಂಡ್‌ನ ನಿರ್ಧಾರಕ್ಕೆ ಬಿಟ್ಟಿದ್ದು. ಅವರು ಕೈಗೊಳ್ಳುವ ನಿರ್ಧಾರಕ್ಕೆ ನಾನು ಮತ್ತು ಡಿ.ಕೆ. ಶಿವಕುಮಾರ್ ಬದ್ಧವಾಗಿರಬೇಕು’ ಎಂದು ಇಲ್ಲಿ ಪುನರುಚ್ಚರಿಸಿದರು.

‘ಐದು ತಿಂಗಳ ಹಿಂದೆ ವರಿಷ್ಠರನ್ನು ಭೇಟಿಯಾಗಿದ್ದೆ. ಆಗ, ಸಂಪುಟ ಪುನರ್ ರಚಿಸಲು ಸೂಚಿಸಿದ್ದರು. ಸರ್ಕಾರಕ್ಕೆ ಎರಡೂವರೆ ವರ್ಷವಾದ ನಂತರ ಮಾಡೋಣ ಎಂದಿದ್ದೆ. ಈಗ ಏನು ಸೂಚನೆ ನೀಡುವರೊ ಹಾಗೇ ನಡೆಯುತ್ತೇವೆ’ ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘ಸುಳ್ಳು ಹೇಳುವುದರಲ್ಲಿ ಬಿಜೆಪಿಯವರು ನಿಸ್ಸೀಮರು. ಗ್ಯಾರಂಟಿ ಯೋಜನೆಗಳಿಗೆ ಹಣ ಇಲ್ಲ ಎಂದು ಸುಳ್ಳು ಹೇಳಿದರು. ಆದರೆ, ನಾವು ಗ್ಯಾರಂಟಿ ಯೋಜನೆ ಜಾರಿಗೊಳಿಸುವ ಜತೆಗೆ ಅಭಿವೃದ್ಧಿ ಕಾಮಗಾರಿಗಳನ್ನೂ ನಡೆಸುತ್ತಿದ್ದೇವೆ. ಶಿಡ್ಲಘಟ್ಟ ಕ್ಷೇತ್ರದಲ್ಲಿ ₹2 ಸಾವಿರ ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಇಂದು ಚಾಲನೆ ನೀಡುತ್ತಿದ್ದೇವೆ. ಇದು ನಮ್ಮ ಸಂಕಲ್ಪ ಮತ್ತು ಅಭಿವೃದ್ಧಿ’ ಎಂದು ಪ್ರತಿಪಾದಿಸಿದರು.

2026ರ ಜನವರಿಯಿಂದ ಅನ್ನಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ಇಂದಿರಾ ಕಿಟ್‌ಗಳನ್ನು ವಿತರಿಸಲಾಗುವುದು ಎಂದು ಮುಖ್ಯಮಂತ್ರಿ ಇದೇ ಸಂದರ್ಭದಲ್ಲಿ ತಿಳಿಸಿದರು.

ಮುಖ್ಯಾಂಶಗಳು

- ‘ಸುಳ್ಳಿನಲ್ಲಿ ಬಿಜೆಪಿ ಅವರು ನಿಸ್ಸೀಮರು’
- ‘ಗ್ಯಾರಂಟಿ ಜತೆಗೆ ಅಭಿವೃದ್ಧಿ ಕಾಮಗಾರಿ’

‘ಶಾಸಕರ ಖರೀದಿ ಬಿಜೆಪಿ ಸಂಸ್ಕೃತಿ’

‘ಶಾಸಕರ ಖರೀದಿ ಸಂಸ್ಕೃತಿ ಬಿಜೆಪಿಯವರದ್ದು.ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಟೀಕಿಸಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿ.ಎಂ ಆಗಬೇಕಾದರೆ ಎಷ್ಟು ಸಾವಿರ ಕೋಟಿ ಕೊಡಬೇಕು ಎಂದು ಅವರೇ ಈ ಹಿಂದೆ ಹೇಳಿದ್ದಾರೆ. ಎಷ್ಟು ಕೋಟಿ ಕೊಟ್ಟು ಶಾಸಕರ ಖರೀದಿಸಿದ್ದಾರೆ ಎಂಬ ದಾಖಲೆಗಳೇ ಇವೆ’ ಎಂದರು.



ಶಿಡ್ಲಘಟ್ಟದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತುಕತೆ

‘ಎಐಸಿಸಿ ಪ್ರತಿನಿಧಿಯಾಗಿ ಭೇಟಿ ಆಗಿಲ್ಲ’



ಯಾದಗಿರಿ: ‘ಕಾಂಗ್ರೆಸ್‌ನ ಶಾಸಕರು ಒಂದೇ ಕುಟುಂಬದ ಸದಸ್ಯರಿದ್ದಂತೆ. ನಮ್ಮಲ್ಲಿ ಬಂಡಾಯವೇ ಇಲ್ಲ. ಇನ್ನು ಶಮನದ ಮಾತು ಎಲ್ಲಿಂದ ಬಂತು’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಸೋಮವಾರ ಹೇಳಿದರು.

‘ನಾನು ಮುಖ್ಯಮಂತ್ರಿ ಅವರನ್ನು ಎಐಸಿಸಿ ಪ್ರತಿನಿಧಿಯಾಗಿಯೂ ಅವರನ್ನು ಭೇಟಿಯಾಗಿಲ್ಲ. ವೈಯಕ್ತಿಕವಾಗಿ ಆಗಾಗ ಭೇಟಿ ಆಗುತ್ತಿರುತ್ತೇವೆ. ಎಐಸಿಸಿ ಯಾವುದೇ ವಿಚಾರ ಒಪ್ಪಿಸಿಲ್ಲ, ಅದರ ಜವಾಬ್ದಾರಿಯೂ ನನಗಿಲ್ಲ’ ಎಂದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಕುರಿತ ಪ್ರಶ್ನೆಗೆ ‘ಅವರ ಜೊತೆಗೆ 40 ವರ್ಷಗಳ ಪರಿಚಯ ಇದ್ದು, ಬೆಂಗಳೂರು ನಗರಪಾಲಿಕೆ ಚುನಾವಣೆ ಬಗ್ಗೆ ಚರ್ಚಿಸಿದೆ’ ಎಂದು ಹೇಳಿದರು. ‘ಶಾಸಕರನ್ನು ಖರೀದಿಸಲಾಗುತ್ತಿದೆ ಎಂಬ ಬಗ್ಗೆ ಛಲವಾದಿ ನಾರಾಯಣಸ್ವಾಮಿ ಅವರು ಸಾಕ್ಷಿ, ಆಧಾರ ಇದ್ದರೆ ಕೊಡಲಿ. ಆಪರೇಷನ್ ಕಮಲ ಮಾಡಿ, ದುಡ್ಡು ಕೊಟ್ಟವರು ಯಾರು’ ಎಂದು ಪ್ರಶ್ನಿಸಿದರು.



ಪಕ್ಷದಲ್ಲಿ ನಾನಿನ್ನೂ ಒಂದು ವರ್ಷದ ಮಗು. ನನಗೆ ಯಾವ ಬಣವೂ ಇಲ್ಲ. ನಾಯಕತ್ವ ಬದಲಾವಣೆ ಕುರಿತ ಚರ್ಚೆ ನನಗೆ ಗೊತ್ತಿಲ್ಲ

ಸಿ.ಪಿ.ಯೋಗೇಶ್ವರ್, ಕಾಂಗ್ರೆಸ್ ಶಾಸಕ




ಮುಖ್ಯಮಂತ್ರಿ ಆಗುವ ಆಸೆ ಎಲ್ಲ ಜನಪ್ರತಿನಿಧಿಗಳಿಗೆ ಇರುತ್ತದೆ. ಆದರೆ, ಶಾಸಕರ ಮತ್ತು ಹೈಕಮಾಂಡ್ ಬೆಂಬಲ ಬೇಕಾಗುತ್ತದೆ

ಶರಣಬಸಪ್ಪ ದರ್ಶನಾಪುರ, ಸಚಿವ



ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಕುರ್ಚಿಗೆ ಯಾರ ಪರವಾಗಿಯೂ ಸಹಿ ಸಂಗ್ರಹ ನಡೆದಿಲ್ಲ. ಈ ಎಲ್ಲವೂ ಬಿಜೆಪಿ ಸೃಷ್ಟಿಸುತ್ತಿರುವ ಕಟ್ಟುಕಥೆ

ಶಿವರಾಜ ತಂಗಡಗಿ, ಸಚಿವ



ರೆಬೆಲ್ ಸಿದ್ದರಾಮಯ್ಯ –ಕಾಂಪ್ರಮೈಸ್ ಸಿದ್ದರಾಮಯ್ಯ ನಡುವಿನ ಹೋರಾಟ ಶುರುವಾಗಿದೆ. ಮೊದಲಿನಂತೆ ರೆಬೆಲ್ ಸಿದ್ದರಾಮಯ್ಯ ಯಾವುದೇ ಕಾರಣಕ್ಕೂ ಅಧಿಕಾರ ಬಿಟ್ಟು ಕೊಡುವುದಿಲ್ಲ

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ



ಡಿ.ಕೆ.ಶಿವಕುಮಾರ್ ಅವರೊಂದಿಗೆ ಸೇರಿ ಸರ್ಕಾರ ರಚಿಸುವ ಯಾವ ಪ್ರಸ್ತಾವ ಬಿಜೆಪಿ ಬಳಿ ಇಲ್ಲ. ಶಾಸಕರ ಖರೀದಿ ಜೋರಿದೆ. ವ್ಯವಹಾರ ₹50 ಕೋಟಿ, ₹75 ಕೋಟಿವರೆಗೆ ತಲುಪಿದೆ.

ಗೋವಿಂದ ಕಾರಜೋಳ, ಬಿಜೆಪಿ ಸಂಸದ

ಸುದ್ದಿ 2 ನಿಮಿಷ

‘ಡಿಕೆಶಿ–ಬಿವೈವಿ ಹೊಂದಾಣಿಕೆ’

ಬಾಗಲಕೋಟೆ: ‘ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನಡುವೆ ಮೊದಲಿನಿಂದ ಹೊಂದಾಣಿಕೆ ಇದೆ. ಸರ್ಕಾರ ರಚನೆಗೆ ಬೆಂಬಲ ಕೋರಿಯೇ ಇತ್ತೀಚೆಗೆ ಅಮಿತ್ ಶಾ ಅವರನ್ನು ವಿಜಯೇಂದ್ರ ಭೇಟಿಯಾಗಿದ್ದರು’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.



‘ಆದರೆ, ಬಿಜೆಪಿಯ ಬಹುತೇಕ ಶಾಸಕರು ಇದಕ್ಕೆ ಒಪ್ಪಲ್ಲ. ಇಂತಹದ್ದನ್ನು ಒಪ್ಪುವುದಿಲ್ಲ ಎಂದೇ ನನ್ನನ್ನು ಹೊರ ಹಾಕಲಾಗಿದೆ’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.‘ಡಿ. ಕೆ.ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಬಿಜೆಪಿ ಭಾಗಿಯಾಗಲ್ಲ ಎಂಬ ಸಂದೇಶ ಬಿಜೆಪಿ ಹೈಕಮಾಂಡ್ ನೀಡಿದೆ ಎಂಬುದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಮಾತುಗಳಿಂದ ಸ್ಪಷ್ಟವಾಗುತ್ತದೆ. ಇದರದಲ್ಲಿ ಮಧ್ಯಪ್ರವೇಶಿಸಲು ಬಿಜೆಪಿ ಸಿದ್ಧವಿಲ್ಲ’ ಎಂದರು.

‘ದಲಿತ ಸಿ.ಎಂ: ಕಾಂಗ್ರೆಸ್ ವರಿಷ್ಠರಿಗೆ ಹಕ್ಕೊತ್ತಾಯ’

ಬೆಂಗಳೂರು: ನಾಯಕತ್ವ ಬದಲಾವಣೆ ವೇಳೆ ಪರಿಶಿಷ್ಟ ಜಾತಿಗೆ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಲು ಕರ್ನಾಟಕ ರಾಜ್ಯ ಛಲವಾದಿ ಕ್ಷೇಮಾಭಿವೃದ್ಧಿ ಸಂಘ ಮತ್ತು ಕೆಲವು ದಲಿತ ಸಂಘಟನೆಗಳ ನಾಯಕರು ನಿರ್ಧರಿಸಿದ್ದಾರೆ.

ಈ ಕುರಿತು ಮಾತನಾಡಿದ ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವಸ್ವಾಮಿ ಎಂ. ಚಿದರವಳ್ಳಿ, ‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಈಗಾಗಲೇ ನಾವು ಮನವಿ ಸಲ್ಲಿಸಿದ್ದೇವೆ. ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ನಾಯಕರಾದ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನೂ ಭೇಟಿ ಮಾಡಿ ಹಕ್ಕೊತ್ತಾಯ ಮಂಡಿಸುತ್ತೇವೆ. ಕಾಂಗ್ರೆಸ್ 2013ರಲ್ಲಿ ಅಧಿಕಾರಕ್ಕೆ ಬರಲು ಜಿ. ಪರಮೇಶ್ವರ ಅವರೂ ಕಾರಣರು. ಸಿದ್ದರಾಮಯ್ಯ ಅವರಿಂದ ತೆರವಾಗುವ ಸ್ಥಾನವನ್ನು ಪರಮೇಶ್ವರ ಅವರಿಗೆ ನೀಡುವುದು ಸೂಕ್ತ. ಎಚ್.ಸಿ. ಮಹದೇವಪ್ಪ ಅವರಿಗೂ ಸಿ.ಎಂ ಆಗುವ ಅರ್ಹತೆ ಇದೆ’ ಎಂದಿದ್ದಾರೆ.

ಈವರೆಗೆ ₹6.55 ಕೋಟಿ ನಗದು ಜಪ್ತಿ, ಬಂಧಿತರ ಸಂಖ್ಯೆ 9ಕ್ಕೆ ಏರಿಕೆ

ಹಣ ದರೋಡೆ: ಮತ್ತೆ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಟಿಎಂ ಕೇಂದ್ರಕ್ಕೆ ಹಣ ತುಂಬಿಸಲು ಹೋಗುತ್ತಿದ್ದ ಸಿಎಂಎಸ್ ಏಜೆನ್ಸಿ ವಾಹನ ಅಡ್ಡಗಟ್ಟಿ ₹7.11 ಕೋಟಿ ನಗದು ದರೋಡೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಿಬ್ಬರು ಆರೋಪಿಗಳನ್ನು ದಕ್ಷಿಣ ವಿಭಾಗದ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಬಂಧಿತರ ಸಂಖ್ಯೆ 9ಕ್ಕೆ ಏರಿದೆ.

ಪ್ರಕರಣ ಸಂಬಂಧ ಈವರೆಗೆ ₹6.55 ಕೋಟಿ ನಗದು ಜಪ್ತಿ ಮಾಡಲಾಗಿದ್ದು, ಬಾಕಿ ₹56 ಲಕ್ಷ ನಗದು ಪತ್ತೆ ಕಾರ್ಯ ಮುಂದುವರಿದಿದೆ.

ಭಾನುವಾರ ತಡರಾತ್ರಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಬೆಂಗಳೂರಿನಲ್ಲಿ ದಿನೇಶ್ ಹಾಗೂ ಚೆನ್ನೈನಲ್ಲಿ ಜಿನೇಶ್ ಅವರನ್ನು ಬಂಧಿಸಿದ್ದಾರೆ. ದರೋಡೆ ಸಂಚಿನಲ್ಲಿ ಭಾಗಿಯಾಗಿದ್ದ ಇಬ್ಬರನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದ್ದು, ಅವರ ಪಾತ್ರದ ಕುರಿತು ಮಾಹಿತಿ ಕಲೆ ಹಾಕುತ್ತಿದ್ದಾರೆ. ಈ ಇಬ್ಬರಿಂದ ₹26 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ.

ಪ್ರಕರಣದಲ್ಲಿ ಇನ್ನೂ ಯಾರಾದರೂ ಭಾಗಿಯಾಗಿದ್ದಾರೆಯೇ ಎಂಬುದರ ಬಗ್ಗೆ ವಿಶೇಷ ತಂಡಗಳು ಕಾರ್ಯಾಚರಣೆ ಮುಂದುವರಿಸಿದ್ದು, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ರಾಜ್ಯಗಳಲ್ಲಿ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಈಗಾಗಲೇ ಏಳು ಆರೋಪಿಗಳನ್ನು ಕಸ್ಟಡಿಗೆ ಪಡೆದುಕೊಂಡಿರುವ ಪೊಲೀಸರು, ತೀವ್ರ ವಿಚಾರಣೆಗೆ ಒಳಪಡಿಸಿದ್ದಾರೆ. ಡಿಸಿಪಿ, ಎಸಿಪಿ ನೇತೃತ್ವದಲ್ಲಿ ಪ್ರತ್ಯೇಕ ವಿಚಾರಣೆ ನಡೆಸಿ, ಹೇಳಿಕೆಗಳನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ.

ಸಂಚಿನ ಸೂತ್ರಧಾರ ಯಾರು?: ಪ್ರಮುಖ ಆರೋಪಿಗಳ ಜತೆ ನಿಮಗೆ ಹಣಕಾಸಿನ ವ್ಯವಹಾರವಿತ್ತಾ? ಎಷ್ಟು ದಿನಗಳಿಂದ ಪರಿಚಯ? ದರೋಡೆ ಮಾಡಲು ಕಾರಣವೇನು? ಉಳಿದ ಹಣ ಎಲ್ಲಿ ಬಚ್ಚಿಡಲಾಗಿದೆ ಎಂಬ ಪ್ರಶ್ನೆಗಳನ್ನು ಪ್ರತ್ಯೇಕವಾಗಿ ಕೇಳಿ, ಹೇಳಿಕೆ ದಾಖಲಿಸಿಕೊಳ್ಳಲಾಗುತ್ತಿದೆ. ಆರೋಪಿಗಳು ಕರೆ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈವರೆಗೂ 30ಕ್ಕೂ ಅಧಿಕ ಜನರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ, ಕಳುಹಿಸಲಾಗಿದೆ. ಪ್ರಮುಖ ಆರೋಪಿ ರವಿ ಅವರ ಪತ್ನಿಯ ಹೇಳಿಕೆ ಮಹತ್ವ ಪಡೆದುಕೊಂಡಿದೆ. ಅವರ ಕುಟುಂಬದ ಸದಸ್ಯರನ್ನು ಕರೆಸಿ, ಹೇಳಿಕೆ ಪಡೆದುಕೊಳ್ಳಲಾಗಿದೆ. ಪ್ರಕರಣದಲ್ಲಿ ಸಿಎಂಎಸ್ ಏಜೆನ್ಸಿ ಸಿಬ್ಬಂದಿ ಪಾತ್ರದ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ. ಆರೋಪಿಗಳಿಂದ ಹೇಳಿಕೆ ದಾಖಲಿಸಿಕೊಂಡ ಬಳಿಕ ಸ್ಥಳ ಮಹಜರಿಗೆ ಕರೆದೊಯ್ಯಲಾಗುವುದು ಎಂದು ಮೂಲಗಳು ಹೇಳಿವೆ.

ದರೋಡೆಯಾದ ಹಣದ ನೋಟುಗಳ ಸರಣಿ ಸಂಖ್ಯೆಗಳನ್ನು ಬ್ಯಾಂಕ್‌ನಿಂದ ಪಡೆದುಕೊಂಡಿದ್ದು, ಕಾಣೆಯಾಗಿರುವ ಸಂಖ್ಯೆಗಳ ನೋಟ್‌ಗಳನ್ನು ಪತ್ತೆ ಮಾಡಲು ಪೊಲೀಸರು ಮುಂದಾಗಿದ್ದಾರೆ.

ಘಟನೆ ಬಳಿಕ ಬಳಿಕ ಸಿಎಂಎಸ್ ಕಂಪನಿಯು ಎಚ್ಚರಿಕೆ ವಹಿಸಿದ್ದು, ಮೂರು ಶಾಖೆಗಳಿಗೆ ಬಿಗಿ ಬಂದೋಬಸ್ತ್ ಮಾಡಲಾಗಿದೆ. ಎಟಿಎಂ ಕೇಂದ್ರಗಳಿಗೆ ಹಣ ಸಾಗಿಸುವ ವಾಹನಕ್ಕೆ ಬಿಗಿ ಭದ್ರತೆ ನೀಡಲಾಗಿದ್ದು, ಚಾಲಕ, ಇಬ್ಬರು ಕಸ್ಟೋಡಿಯನ್, ಗನ್‌ಮೆನ್ ಒದಗಿಸಲಾಗಿದೆ.

₹7 ಕೋಟಿ ದೋಚಿ, ₹ 1 ಲಕ್ಷ ಖರ್ಚು

ಸಿಎಂಎಸ್ ಏಜೆನ್ಸಿ ವಾಹನ ಅಡ್ಡಗಟ್ಟಿ ಆರೋಪಿಗಳು ದೋಚಿದ್ದ ₹7.11 ಕೋಟಿ ಹಣದಲ್ಲಿ ₹ 1 ಲಕ್ಷ ಖರ್ಚು ಮಾಡಿರುವುದು ಪೊಲೀಸ್ ತನಿಖೆ ವೇಳೆ ಗೊತ್ತಾಗಿದೆ.

ಹಣದಲ್ಲಿ ಎರಡು ಮೊಬೈಲ್ ಖರೀದಿಸಿದ್ದಾರೆ. ಈ ಪೈಕಿ ₹ 40 ಸಾವಿರಕ್ಕೆ ಒನ್ ಪ್ಲಸ್ ಮೊಬೈಲ್, ₹ 20 ಸಾವಿರಕ್ಕೆ ಮತ್ತೊಂದು ಮೊಬೈಲ್ ಖರೀದಿಸಿದ್ದಾರೆ.

ಎರಡು ವಾಹನಗಳಿಗೆ ಪೆಟ್ರೋಲ್, ಎರಡು ದಿನ ಊಟಕ್ಕೆ ಹಾಗೂ ವಾಸ್ತವ್ಯ ಹೂಡಿದ್ದ ಲಾಡ್ಜ್‌ಗಳಿಗೆ ಹಣ ನೀಡಿದ್ದಾರೆ. ಸಹಾಯ ಮಾಡಿದವರಿಗೆ ₹ 5 ಸಾವಿರದಿಂದ ₹10 ಸಾವಿರದವರೆಗೆ ಹಣ ಕೊಟ್ಟಿದ್ದಾರೆ. ಆರೋಪಿಗಳ ವಿಚಾರಣೆ ಮುಂದುವರಿದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿಶೇಷ ತಂಡಗಳು ಸತತ ಕಾರ್ಯಾಚರಣೆ ನಡೆಸಿ, ಪ್ರಕರಣ ಸಂಬಂಧ ಪ್ರಮುಖ ಆರೋಪಿಗಳನ್ನು ಬಂಧಿಸಿವೆ. ಉಳಿದ ಹಣ ಪತ್ತೆಗೆ ಶೋಧ ನಡೆಸಲಾಗುತ್ತಿದೆ

ಸೀಮಾಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ಶಾಸಕರ ಖರೀದಿ ಶಂಕೆ–ಅಶೋಕ

ಪ್ರಜಾವಾಣಿ ವಾರ್ತೆ


ಬೆಂಗಳೂರು: ‘ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಣದ ಶಾಸಕರ ಸಂಖ್ಯೆಯು 70ಕ್ಕೆ ಏರಿಕೆಯಾಗಿದೆ. ಕಾಂಗ್ರೆಸ್ ಒಳಗಿನ ಪ್ರಸ್ತುತ ರಾಜಕೀಯ ಬೆಳವಣಿಗೆ ಗಮನಿಸಿದರೆ ಶಾಸಕರ ಖರೀದಿ ಶಂಕೆ ಮೂಡಿಸುತ್ತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಶಿವಕುಮಾರ್ ಜೊತೆ 10–12 ಶಾಸಕರಿದ್ದರು ಎಂದು ಮಾಧ್ಯಮಗಳಲ್ಲಿ ವರದಿ ಬಂದಿತ್ತು. ಅವರ ಬೆಂಬಲಿಗ ಶಾಸಕರ ಸಂಖ್ಯೆಯಲ್ಲಿ ದಿಢೀರ್ ಹೆಚ್ಚಳವಾಗಿದೆ. ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿರುವ ಶಾಸಕರ ಸಹಿಯನ್ನೂ ಪಡೆದಿದ್ದಾರೆ. ವ್ಯವಹಾರ ಜೋರಾಗಿ ನಡೆಯುತ್ತಿರುವ ಸಾಧ್ಯತೆ ಇದೆ. ಶಿವಕುಮಾರ್ ಅವರಂತೆ ಸಿದ್ದರಾಮಯ್ಯ ಸಹ ಎಟಿಎಂ ನಿರ್ವಹಣೆಯಲ್ಲಿ ಪಳಗಿದ್ದಾರೆ’ ಎಂದರು.

‘ಶಿವಕುಮಾರ್ ವೇಗದಿಂದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಕಾಗಿದ್ದಾರೆ. ಮೆತ್ತಗಾಗಿದ್ದಾರೆ. ಐದು ವರ್ಷ ನಾನೇ ಮುಖ್ಯಮಂತ್ರಿ ಎನ್ನುತ್ತಿದ್ದವರು ಈಗ ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ ಎಂದು ಮಾತು ಬದಲಿಸಿದ್ದಾರೆ. ರಾಜ್ಯದ ಜನರಿಗೆ ಮುಖ್ಯಮಂತ್ರಿ ಯಾರು ಎನ್ನುವುದೇ ಗೊಂದಲವಾಗಿದೆ. ಆಡಳಿತ ಯಂತ್ರ ಸಂಪೂರ್ಣ ಕುಸಿದಿದೆ’ ಎಂದು ದೂರಿದರು.

‘ಮಲ್ಲಿಕಾರ್ಜುನ ಖರ್ಗೆ ಹೆಸರಿಗೆ ಮಾತ್ರ ಎಐಸಿಸಿ ಅಧ್ಯಕ್ಷರಾಗಿದ್ದಾರೆ. ಕರ್ನಾಟಕದವರೇ ಆದರೂ ರಾಜ್ಯದ ಬೆಳವಣಿಗೆಗಳನ್ನು ನಿಯಂತ್ರಿಸುವ ಅಧಿಕಾರ ಅವರಿಗೆ ಇಲ್ಲವಾಗಿದೆ. ಅದಕ್ಕಾಗಿ ಹೈಕಮಾಂಡ್‌ನತ್ತ ಚಿತ್ತ ಹರಿಸಿದ್ದಾರೆ. ಬಿಹಾರ ಚುನಾವಣೆ ಬಳಿಕ ಕಾಂಗ್ರೆಸ್ ಹೈಕಮಾಂಡ್ ಸಂಪೂರ್ಣ ದುರ್ಬಲವಾಗಿದೆ’ ಎಂದು ಹೇಳಿದರು.

27, 28ರಂದು ಬಿಜೆಪಿ ಪ್ರತಿಭಟನೆ



ಬೆಂಗಳೂರು: ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದ ರೈತ ವಿರೋಧಿ ಧೋರಣೆ ವಿರುದ್ಧ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ನ.27, 28ರಂದು ಬಿಜೆಪಿ ರೈತ ಮೋರ್ಚಾ ಹೋರಾಟ ಹಮ್ಮಿಕೊಂಡಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಮುಖ್ಯಮಂತ್ರಿ ಕುರ್ಚಿಗಾಗಿ ಕಿತ್ತಾಟ ನಡೆಯುತ್ತಿದ್ದು, ರೈತರ ಸಮಸ್ಯೆಗಳ ಬಗ್ಗೆ ಸರ್ಕಾರ ಗಮನಹರಿಸುತ್ತಿಲ್ಲ. ಒಬ್ಬ ಸಚಿವರೂ ಸಮಸ್ಯೆ ಆಲಿಸುತ್ತಿಲ್ಲ. ಅತಿವೃಷ್ಟಿಯಿಂದ ಆದ ಬೆಳೆನಷ್ಟಕ್ಕೆ ಪರಿಹಾರ ನೀಡಿಲ್ಲ’ ಎಂದು ದೂರಿದರು. ರೈತರ ಹಲವು ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಿ ವಿಧಾನಸಭಾ ಕ್ಷೇತ್ರವಾರು ಪ್ರತಿಭಟನೆಯ ನಂತರ ಡಿ.1 ಮತ್ತು 2ರಂದು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದರು.



ಮೆಕ್ಕೆಜೋಳ ಖರೀದಿಸಲು ಬೆಂಬಲ ಬೆಲೆ ಯೋಜನೆಯಡಿ ಖರೀದಿ ಕೇಂದ್ರಗಳನ್ನು ಆರಂಭಿಸಲು ಆಗ್ರಹಿಸಿ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ರೈತರು ಅನಿರ್ದಿಷ್ಟಾವಧಿ ಮುಷ್ಕರ ಮುಂದುವರಿಸಿದ್ದಾರೆ. ಸೋಮವಾರ ದೀಡ್ ನಮಸ್ಕಾರ ಹಾಕಿ ಪ್ರತಿಭಟಿಸಿದರು ಪ್ರಜಾವಾಣಿ ಚಿತ್ರ

ಮಹಿಳಾ ನ್ಯಾಯ ಸಮಾವೇಶ ಡಿ.16ಕ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿವೆ ಎನ್ನಲಾದ ಮಹಿಳೆಯರ ಮೇಲಿನ ಎಲ್ಲ ದೌರ್ಜನ್ಯ ಪ್ರಕರಣಗಳನ್ನು ಎಸ್‌ಐಟಿ ವ್ಯಾಪ್ತಿಗೆ ತಂದು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಲು ಡಿ.16ರಂದು ಬೆಳ್ತಂಗಡಿಯಲ್ಲಿ ‘ಮಹಿಳಾ ನ್ಯಾಯ ಸಮಾವೇಶ’ ಹಮ್ಮಿಕೊಳ್ಳಲಾಗಿದೆ ಎಂದು ‘ಕೊಂದವರು ಯಾರು’ ಅಭಿಯಾನದ ಸದಸ್ಯೆ ಮಲ್ಲಿಗೆ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನವದೆಹಲಿಯಲ್ಲಿ ನಿರ್ಭಯಾ ಪ್ರಕರಣ ನಡೆದ ದಿನವಾದ ಡಿ.16ಅನ್ನು ಮಹಿಳಾ ಸಂಘಟನೆಗಳು ‘ಅತ್ಯಾಚಾರ ವಿರೋಧಿ ದಿನ’ವಾಗಿ ಆಚರಿಸುತ್ತಿವೆ. ಅದೇ ದಿನ ಬೆಳ್ತಂಗಡಿಯಲ್ಲಿ ಸಮಾವೇಶ ಆಯೋಜಿಸಲಾಗಿದ್ದು, ರಾಜ್ಯದ ವಿವಿಧ ಮಹಿಳಾ ಸಂಘಟನೆಗಳ ಸದಸ್ಯೆಯರು ಭಾಗವಹಿಸುವರು’ ಎಂದರು.

ಎಸ್‌ಐಟಿ ಒತ್ತಡರಹಿತವಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಬೇಕು. ನಿಷ್ಪಕ್ಷಪಾತ ತನಿಖೆ ನಡೆಯಬೇಕು. ಸಾಕ್ಷಿದಾರರು, ದೂರು ನೀಡಲು ಹೋಗುವವರಿಗೆ ಬೆದರಿಸುವ ಪ್ರಯತ್ನಗಳು ಆಗದಂತೆ ಎಚ್ಚರವಹಿಸಬೇಕು ಎಂದು ಅಭಿಯಾನದ ಸದಸ್ಯೆ ಜ್ಯೋತಿ ಎ. ಅವರು ಹೇಳಿದರು.

ಶಾಲೆಗೆ ಬೀಗ ಹಾಕಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಸುರಪುರ (ಯಾದಗಿರಿ ಜಿಲ್ಲೆ): ‘ಬೇರೆ ಶಾಲೆಗೆ ನಿಯೋಜಿಸಿರುವ ಶಿಕ್ಷಕರನ್ನು ನಮ್ಮ ಶಾಲೆಯಲ್ಲೇ ಮುಂದುವರಿಸಬೇಕು’ ಎಂದು ಒತ್ತಾಯಿಸಿ ತಾಲ್ಲೂಕಿನ ಚಿಕ್ಕನಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳು ಸೋಮವಾರ ಶಾಲೆಗೆ ಬೀಗ ಹಾಕಿ ಪ್ರತಿಭಟಿಸಿದರು.

ಶಾಲೆಯಲ್ಲಿದ್ದ ಗಣಿತ ವಿಷಯದ ಒಬ್ಬ ಶಿಕ್ಷಕರನ್ನು ನೆರೆಯ ಬೋನ್ಹಾಳ ಶಾಲೆಗೆ ನಿಯೋಜಿಸಿದ್ದು, ಗಣಿತ ವಿಷಯದ ತರಗತಿ ಸರಿಯಾಗಿ ನಡೆಯುತ್ತಿಲ್ಲ ಎಂದು ಮಕ್ಕಳು ಆರೋಪಿಸಿದರು.

ಮಕ್ಕಳ ಜೊತೆ ಎಸ್‌ಡಿಎಂಸಿ ಸದಸ್ಯರು, ಪಾಲಕರೂ ಧರಣಿ ಕುಳಿತರು. ಬೇರೆ ಶಾಲೆಗೆ ಶಿಕ್ಷಕರ ನಿಯೋಜನೆ ಕೈಬಿಡುವ ಕುರಿತ ಬಿಇಒ ನೀಡಿದ ಬಳಿಕ ತರಗತಿಗೆ ಮಕ್ಕಳು ಹಾಜರಾದರು.

‘ಅನ್ಯ ವಿಷಯಗಳ ಶಿಕ್ಷಕರ ನೇಮಕಕ್ಕೆ ಮನವಿ ಸಲ್ಲಿಸಲಿದ್ದು, ಬೇಡಿಕೆ ಈಡೇರದಿದ್ದರೆ ಪ್ರತಿಭಟನೆ ನಡೆಸಲಿದ್ದೇವೆ’ ಎಂದು ಎಸ್‌ಡಿಎಂಸಿ ಅಧ್ಯಕ್ಷ ನಿಂಗಪ್ಪ ಶೇಖಸಿಂಧಿ ‘ಪ್ರಜಾವಾಣಿ’ಗೆ ತಿಳಿಸಿದರು.

ಶಾಲೆಯಲ್ಲಿ 1ರಿಂದ 7ನೇ ತರಗತಿವರೆಗಿನ 255 ಮಕ್ಕಳಿದ್ದು, ಮೂವರು ಕಾಯಂ ಹಾಗೂ 6 ಅತಿಥಿ ಶಿಕ್ಷಕರಿದ್ದಾರೆ.



ಸುರಪುರ ತಾಲ್ಲೂಕಿನ ಚಿಕ್ಕನಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸೋಮವಾರ ಮಕ್ಕಳು, ಪೋಷಕರು ಪ್ರತಿಭಟನೆ ನಡೆಸಿದರು

ಕ್ರಮಕ್ಕೆ ಎಎಬಿ ತುರ್ತು ಸಭೆಯಲ್ಲಿ ಠರಾವು ಅಂಗೀಕಾರ

ಕೋರ್ಟ್‌ಗಳಲ್ಲಿ ಭ್ರಷ್ಟಾಚಾರ: ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಮ್ಯಾಜಿಸ್ಟ್ರೇಟ್, ದಿವಾಣಿ ಮತ್ತು ಸೆಷನ್ಸ್ ನ್ಯಾಯಾಲಯಗಳಲ್ಲಿ ಭ್ರಷ್ಟಾಚಾರ ಅನೂಹ್ಯ ರೀತಿಯಲ್ಲಿ ಬೆಳೆಯುತ್ತಿದೆ’ ಎಂದು ಬೆಂಗಳೂರು ವಕೀಲರ ಸಂಘ (ಎಎಬಿ) ಕಳವಳ ವ್ಯಕ್ತಪಡಿಸಿದೆ.

ಈ ಕುರಿತಂತೆ ಸಂಘವು ಇದೇ 18ರಂದು ನಡೆದ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಸರ್ವಾನುಮತದ ಠರಾವು ಅಂಗೀಕರಿಸಿದೆ. ‘ವಿಚಾರಣಾ ನ್ಯಾಯಾಲಯಗಳ ಯಾವುದೇ ನ್ಯಾಯಾಧೀಶರ ವಿರುದ್ಧ ಇಂತಹ ಆರೋಪಗಳು ಕೇಳಿಬಂದಲ್ಲಿ ಹೈಕೋರ್ಟ್ ತತ್‌ಕ್ಷಣವೇ ಕ್ರಮ ಕೈಗೊಳ್ಳಬೇಕು’ ಎಂದು ಬಲವಾಗಿ ಆಗ್ರಹಿಸಿದೆ.

ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ಉಪಾಧ್ಯಕ್ಷ ಸಿ.ಎಸ್.ಗಿರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ, ಖಜಾಂಚಿ ಶ್ವೇತಾ ರವಿಶಂಕರ್ ಮತ್ತು ಹೆಚ್ಚಿನ ಸಂಖ್ಯೆಯ ಸರ್ವ ಸದಸ್ಯರು ಹಾಜರಿದ್ದ ಈ ತುರ್ತು ಸಭೆಯಲ್ಲಿ ಕ್ರಮಕ್ಕೆ ಒತ್ತಾಯಿಸಿದ ಸರ್ವಾನುಮತದ ನಿರ್ಣಯಕ್ಕೆ ಸಹಿ ಹಾಕಲಾಗಿದೆ.

ಪ್ರಮುಖ ನಿರ್ಣಯಗಳು

- ದೀರ್ಘಕಾಲದಿಂದ ಚಾಲ್ತಿಯಲ್ಲಿರುವ ಎಂಟು ವಾರಗಳ ರೋಸ್ಟರ್ ಪದ್ಧತಿಯನ್ನು ಯಥಾಸ್ಥಿತಿಯಲ್ಲೇ ಮುಂದುವರಿಸಬೇಕು ಮತ್ತು ಇದನ್ನು ಯಾವುದೇ ರೀತಿಯಲ್ಲಿ ಬದಲಾವಣೆ ಮಾಡುವುದು ಸಲ್ಲ
- ಕರ್ನಾಟಕ ಹೈಕೋರ್ಟ್‌ಗೆ ಹೊರಗಿನ ರಾಜ್ಯಗಳ ನ್ಯಾಯಮೂರ್ತಿಗಳನ್ನು ಬೇಕಾಬಿಟ್ಟಿಯಾಗಿ ಹೇರುವ ಸುಪ್ರೀಂ ಕೋರ್ಟ್ ಕೊಲಿಜಿಯಂ ನಡೆ ಇಲ್ಲಿಗೇ ಸ್ಥಗಿತಗೊಳ್ಳಬೇಕು. ವರ್ಗಾವಣೆ ನೀತಿಯಿಂದ ಈಗಾಗಲೇ ಕರ್ನಾಟಕ ಹೈಕೋರ್ಟ್‌ಗೆ ಹೇಳಿಕೊಳ್ಳಲಾಗದಷ್ಟು ಅನ್ಯಾಯ ಉಂಟಾಗಿದೆ
- ಕರ್ನಾಟಕ ಹೈಕೋರ್ಟ್ ಕೊಲಿಜಿಯಂನಲ್ಲಿ ಕಡ್ಡಾಯವಾಗಿ ರಾಜ್ಯವನ್ನು ಪ್ರತಿನಿಧಿಸುವ ನ್ಯಾಯಮೂರ್ತಿ ಇರುವಂತೆ ನೋಡಿಕೊಳ್ಳಬೇಕು. ಇದು ಇಂದಿನ ಅಗತ್ಯಗಳಲ್ಲೊಂದು
- ಬಹಳ ವರ್ಷಗಳಿಂದ ಹೈಕೋರ್ಟ್ ನ್ಯಾಯಮೂರ್ತಿ ಸ್ಥಾನಗಳಿಗೆ ವಕೀಲ ವೃಂದದಿಂದ ವಕೀಲರನ್ನು ನೇಮಕ ಮಾಡುವುದೇ ನಿಂತುಹೋಗಿದೆ. ನಿಪುಣ ಮತ್ತು ಸತ್ಯನಿಷ್ಠೆ ಹೊಂದಿರುವ ಮತ್ತು ಎಲ್ಲಾ ವರ್ಗಗಳಿಗೂ ಪ್ರಾತಿನಿಧ್ಯ ನೀಡುವ ಮೂಲಕ ಸಮರ್ಥ ವಕೀಲರನ್ನು ಪದನ್ನೋತಿಗೆ ಶಿಫಾರಸು ಮಾಡಲು ತಡಮಾಡದೆ ಹೆಜ್ಜೆ ಇರಿಸಬೇಕು
- ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಗಳ ಮಂಜೂರಾತಿ ಸಂಖ್ಯೆ ಸದ್ಯ 62 ಇದ್ದು, ಇದನ್ನು 100ಕ್ಕೆ ಏರಿಸಲು ಕೇಂದ್ರ ಸರ್ಕಾರ ಚಿಂತಿಸಬೇಕು. ಹೆಚ್ಚುತ್ತಿರುವ ವ್ಯಾಜ್ಯಗಳ ಸಂಖ್ಯೆ ಮತ್ತು ಧಾರವಾಡ ಕಲಬುರಗಿ ಪೀಠಗಳ ಬೆಳವಣಿಗೆಯನ್ನು ಗಮನದಲ್ಲಿ ಇರಿಸಿಕೊಂಡು ಈ ನಿಟ್ಟಿನಲ್ಲಿ ಮುಂದಡಿ ಇಡಬೇಕು
- ಆಯಾ ದಿನದ ಕಾಸ್‌ಲಿಸ್ಟ್‌ಗಳನ್ನು ಹಿಂದಿನ ದಿನದ ರಾತ್ರಿ 9 ಅಥವಾ 9.30ಕ್ಕೆ ನವೀಕರಿಸಲಾಗುತ್ತಿದೆ. ಇದರಿಂದ ವಕೀಲರಿಗೆ ತೀವ್ರ ತೊಂದರೆಯಾಗುತ್ತಿದೆ. ಇದು ವಕೀಲರ ಆರೋಗ್ಯಗಳ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಹಾಗಾಗಿ, ಅಂತಿಮ ಕಾಸ್‌ಲಿಸ್ಟ್ ಅನ್ನು 6.30ಕ್ಕೇ ನವೀಕರಣ ಮಾಡಬೇಕು. ಈ ನಿಯಮ 2026ರ ಜನವರಿಯಿಂದ ಜಾರಿಗೆ ಬರುವಂತೆ ನೋಡಿಕೊಳ್ಳಬೇಕು
- ತೆರೆದ ನ್ಯಾಯಾಲಯಗಳಲ್ಲಿ ಮೆಮೊ (ಜ್ಞಾಪನಾಪತ್ರ) ಸಲ್ಲಿಸಿದರೂ ಮಾಮಲೆಗಳು (ವ್ಯಾಜ್ಯದಲ್ಲಿರುವ ಪ್ರಕರಣ) ಕಾಸ್ ಲಿಸ್ಟ್‌ಗಳಲ್ಲಿ ನಿಯುಕ್ತಿಗೊಳ್ಳುತ್ತಿಲ್ಲ. ಆದ್ದರಿಂದ, ಮೆಮೊ ಸಲ್ಲಿಸಿದ ಎಲ್ಲ ಮಾಮಲೆಗಳೂ ಪೋಸ್ಟ್ ಆಗುವಂತೆ ನೋಡಿಕೊಳ್ಳಲು ಮುಖ್ಯ ನ್ಯಾಯಮೂರ್ತಿಗಳು ರಿಜಿಸ್ಟ್ರಿ ಅಧಿಕಾರಿಗಳಿಗೆ ನಿರ್ದೇಶಿಸಬೇಕು

ನ್ಯಾ.ಸಿಂಗ್–ಬ್ಯಾನರ್ಜಿ ನಡವಳಿಕೆಗೆ ವಿರೋಧ

‘ಕರ್ನಾಟಕ ಹೈಕೋರ್ಟ್ ವಕೀಲರು ವಿನಮ್ರ ನಡವಳಿಕೆಗೆ ದೇಶದಲ್ಲೇ ಹೆಸರುವಾಸಿ. ಆದರೆ, ಕೋರ್ಟ್ ಹಾಲ್ 4ರಲ್ಲಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಮೂರ್ತಿ ಜಯಂತ ಬ್ಯಾನರ್ಜಿ ಹಾಗೂ 5ರಲ್ಲಿರುವ ನ್ಯಾಯಮೂರ್ತಿ ಡಿ.ಕೆ.ಸಿಂಗ್ ಅವರು ತೆರೆದ ನ್ಯಾಯಾಲಯದಲ್ಲಿ ವಕೀಲ ವೃಂದದ ಜೊತೆ ಕಲಾಪದಲ್ಲಿ ನಡೆದುಕೊಳ್ಳುವ ವರ್ತನೆ ಆಘಾತಕಾರಿಯಾಗಿದೆ’ ಎಂದು ಸಂಘವು ನಿರ್ಣಯದಲ್ಲಿ ವಿವರಿಸಿದೆ.

ಹೈಕೋರ್ಟ್ ಸ್ಥಳಾಂತರ ಅನಿವಾರ್ಯ

‘ಕರ್ನಾಟಕ ಹೈಕೋರ್ಟ್ ಅನ್ನು ಈಗಿರುವ ಪಾರಂಪರಿಕ ಕಟ್ಟಡದಿಂದ ರೇಸ್ ಕೋರ್ಸ್, ಅರಮನೆ ಮೈದಾನ ಅಥವಾ ಬೆಂಗಳೂರಿನ ಹೃದಯ ಭಾಗದ ಯಾವುದಾದರೂ ಪ್ರಶಸ್ತ ಜಾಗಕ್ಕೆ ಶೀಘ್ರವೇ ಸ್ಥಳಾಂತರ ಮಾಡಬೇಕು’ ಎಂದು ಸಂಘವು ನಿರ್ಣಯಿಸಿದೆ.

ಈಗಿರುವ ಪುರಾತನ ಕಟ್ಟಡ ದಿನೇ ದಿನೇ ಹೆಚ್ಚುತ್ತಿರುವ ಕಾರ್ಯಭಾರಕ್ಕೆ ನಲುಗಿ ಹೋಗಿದೆ. ಆದ್ದರಿಂದ ವಾಹನಗಳ ಪಾರ್ಕಿಂಗ್‌ಗೆ ಯಥೇಚ್ಛವಾದ ಸ್ಥಳ ಹೊಂದಿದ, ವಕೀಲರ ಛೇಂಬರ್‌ಗಳಿಗೆ ಸೂಕ್ತ ಸ್ಥಳಾವಕಾಶ ಕಲ್ಪಿಸುವ ವಕೀಲರು ಕಕ್ಷಿದಾರರಿಗೆ ಮತ್ತು ಅಧಿಕಾರಿಗಳಿಗೆ ಹೆಚ್ಚಿನ ಕ್ಷಮತೆಯಿಂದ ಕೆಲಸ ಮಾಡಲು ಅನುವು ಮಾಡಿಕೊಡುವಂತಹ ಆತ್ಯಾಧುನಿಕ ಸೌಲಭ್ಯಗಳು ಮತ್ತು ಮೂಲ ಸೌಕರ್ಯ ಅಳವಡಿಸಿಕೊಂಡ ಹೊಸ ಕಟ್ಟಡವನ್ನು ನಿರ್ಮಿಸಲು ಮುಖ್ಯಮಂತ್ರಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಗಿದೆ.



‘ಪ್ರಜ್ವಲ್ ಜಾಮೀನಿಗೆ ಅರ್ಹನಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನೆಕೆಲಸದ ಮಹಿಳೆಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿಯಾಗಿರುವ, ಮಾಜಿ ಸಂಸದ ಪ್ರಜ್ವಲ್ ರೇವಣ್ಣ, ಅಧೀನ ನ್ಯಾಯಾಲಯದಲ್ಲಿ ವಿಚಾರಣೆ ಮುಂದುವರಿಯುವುದನ್ನು ತಡೆಯಲು 10ರಿಂದ12 ಬಾರಿ ಪ್ರಯತ್ನ ಮಾಡಿದ್ದರು. ಹೀಗಾಗಿ, ಅವರಿಗೆ ಜಾಮೀನು ನೀಡಬಾರದು’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮನವಿ ಮಾಡಿತು.

‘ನನಗೆ ವಿಧಿಸಿರುವ ಶಿಕ್ಷೆಯನ್ನು ಅಮಾನತಿನಲ್ಲಿ ಇರಿಸಿ ಜಾಮೀನು ಮಂಜೂರು ಮಾಡಬೇಕು’ ಎಂದು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ಎಸ್.ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಶೇಷ ತನಿಖಾ ದಳದ (ಎಸ್‌ಐಟಿ) ಪರ ವಾದ ಮಂಡಿಸಿದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್, ‘ಪ್ರಜ್ವಲ್ ಕೃತ್ಯ ನಡೆಸಿ ದೇಶ ತೊರೆದಿದ್ದರು. ಸಂತ್ರಸ್ತೆಯರ ಜೊತೆಗಿನ ಲೈಂಗಿಕ ಕೃತ್ಯ ಸೆರೆ ಹಿಡಿದಿದ್ದ ಫೋನ್ ಅನ್ನು ತನಿಖಾಧಿಕಾರಿಗಳಿಗೆ ಒಪ್ಪಿಸಿಲ್ಲ. ತನ್ನ ಫೋನ್ ಜರ್ಮನಿಯಲ್ಲಿ ಕಳೆದು ಹೋಗಿದೆ ಎಂದು ಹೇಳಿದ್ದಾರೆ. ಇದು ಅವರ ನಡತೆಗೆ ಹಿಡಿದ ಕನ್ನಡಿಯಾಗಿದೆ’ ಎಂದು ಆಕ್ಷೇಪಿಸಿದರು.

‘ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಲಾಢ್ಯರಾಗಿರುವ ಪ್ರಜ್ವಲ್‌ನ ಅಜ್ಜ ಮಾಜಿ ಪ್ರಧಾನಿ. ಚಿಕ್ಕಪ್ಪ ಹಾಲಿ ಕೇಂದ್ರ ಸಚಿವ ಮತ್ತು ಮಾಜಿ ಮುಖ್ಯಮಂತ್ರಿ, ತಂದೆ ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದವರು ಮತ್ತು ಹಾಲಿ ಶಾಸಕ. ಕೃತ್ಯದ ಮಾಹಿತಿ ನೀಡಲು ಬಂದ ಸಂತ್ರಸ್ತೆಗೆ ಅಂದಿನ ಜಿಲ್ಲಾಧಿಕಾರಿ ಸೇರಿದಂತೆ ಯಾರೂಬ್ಬರೂ ಸೂಕ್ತ ನೆರವು ನೀಡಿಲ್ಲ. ಆರೋಪಿ ಅತ್ಯಂತ ಬಲಾಢ್ಯನಾಗಿರುವ ಕಾರಣದಿಂದಲೇ ಸಂತ್ರಸ್ತೆಯ ಧ್ವನಿಯನ್ನು ಹತ್ತಿಕ್ಕಲಾಗಿತ್ತು’ ಎಂದರು.

‘ಹಾಲಿ ಪ್ರಕರಣದಲ್ಲಿ ಪ್ರಜ್ವಲ್‌ಗೆ ಜಾಮೀನು ಮಂಜೂರು ಮಾಡಿದರೆ ಸಂತ್ರಸ್ತೆಯನ್ನು ಅಪಹರಿಸಿದ ಆರೋಪದ ಪ್ರಕರಣ ಎದುರಿಸುತ್ತಿರುವ ತಂದೆ ಎಚ್.ಡಿ.ರೇವಣ್ಣ ಮತ್ತು ತಾಯಿ ಭವಾನಿ ಅವರ ಜಾಮೀನು ಕೋರಿಕೆ ಮೇಲೆಯೂ ಪ್ರಭಾವ ಬೀರಲಿದೆ. ಜಾಮೀನು ಮಂಜೂರು ಮಾಡಿ ಸಮಾಜದ ಮುಖ್ಯವಾಹಿನಿಗೆ ಬರಲು ಅವಕಾಶ ಮಾಡಿಕೊಟ್ಟರೆ ಸಮಾಜಕ್ಕೆ ಯಾವ ಸಂದೇಶ ರವಾನೆಯಾಗಲಿದೆ? ಹೀಗಾಗಿ, ಈ ಆರೋಪಿ ಜಾಮೀನಿಗೆ ಅರ್ಹ ಅಸಾಮಿಯಲ್ಲ’ ಎಂದರು. ಆಕ್ಷೇಪಣೆಯನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಮಂಗಳವಾರಕ್ಕೆ (ನ.25) ಮುಂದೂಡಿತು.

f prajavani.net prajavani
ಮಂಗಳವಾರ, ನವೆಂಬರ್ 25, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 325 | ಪುಟ 14
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಪ್ರಾಂಜಲಿಗೆ ಚಿನ್ನ
ಭಾರತದ ಪ್ರಾಂಜಲಿ ಪ್ರಶಾಂತ್ ಧುಮಾಲ್ ಅವರು ಟೋಕಿಯೊದಲ್ಲಿ ನಡೆದ ಡೆಫ್‌ಲಿಂಪಿಕ್ಸ್‌ನ ಮಹಿಳೆಯರ 25 ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಸೋಮವಾರ ಚಿನ್ನಕ್ಕೆ ಗುರಿಯಿಟ್ಟರು



ಐಎನ್‌ಎಸ್ ಮಾಹೆ
ದೇಶಿ ನಿರ್ಮಿತ ಜಲಾಂತರ್ಗಾಮಿ ನಿಗ್ರಹ ಯುದ್ಧನೌಕೆ 'ಐಎನ್‌ಎಸ್ ಮಾಹೆ'ಯು ಭಾರತೀಯ ನೌಕಾಪಡೆಗೆ ಸೋಮವಾರ ಸೇರ್ಪಡೆಗೊಂಡಿತು

ಸೆನ್ಸೆಕ್ಸ್ 84,900 | ನಿಫ್ಟಿ 25,959 | $/₹ 89.16 | ಚಿನ್ನ (Std. 10g) ₹1,28,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,63,700 (ಬೆಂಗಳೂರು)

ಹೊರಗುತ್ತಿಗೆ ನಿಷೇಧಕ್ಕೆ ಕಾಯ್ದೆ

ಬೆಳಗಾವಿ ಅಧಿವೇಶನದಲ್ಲಿ ಮಸೂದೆ ಮಂಡನೆ ಸಂಭವ

• ರಾಜೇಶ್ ರೈ ಚಟ್ಲ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿರುವ ಹೊರಗುತ್ತಿಗೆ ನೇಮಕಾತಿ ವ್ಯವಸ್ಥೆಯನ್ನು 2028ರ ಮಾರ್ಚ್ 31ರ ಒಳಗೆ ಸಂಪೂರ್ಣವಾಗಿ ರದ್ದುಗೊಳಿಸುವ ಉದ್ದೇಶದಿಂದ 'ಸರ್ಕಾರಿ ಸಂಸ್ಥೆಗಳಲ್ಲಿ ಖಾಸಗಿ ಹೊರಗುತ್ತಿಗೆ ನಿಷೇಧ ಮಸೂದೆ– 2025' ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಹೊಸ ಕಾಯ್ದೆ ಜಾರಿಯಾದ ಬಳಿಕ, ನಿಯಮ ಉಲ್ಲಂಘಿಸಿ ಹೊರಗುತ್ತಿಗೆಯಡಿ ನೇಮಕಾತಿ ಮಾಡಿದರೆ ಅಥವಾ ನಿಗದಿತ ಅವಧಿಯನ್ನು ಮೀರಿ ಹೊರಗುತ್ತಿಗೆ ಒಪ್ಪಂದ ಮುಂದುವರಿಸಿದರೆ, ಅಂಥವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ₹5 ಲಕ್ಷ ದಂಡ ವಿಧಿಸಲು ಕೂಡಾ ಈ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಮಸೂದೆಯ ಕರಡು ಸಿದ್ಧವಾಗಿದೆ. ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನದಲ್ಲಿ ಈ ಮಸೂದೆ ಮಂಡನೆಯಾಗುವ ಸಾಧ್ಯತೆಯಿದೆ.

ಸರ್ಕಾರದ ವಿವಿಧ ಇಲಾಖೆಗಳು, ಸಾರ್ವಜನಿಕ ವಲಯದ ನಿಗಮಗಳು, ಮಂಡಳಿಗಳು, ಉದ್ದಿಮೆಗಳು, ಪ್ರಾಧಿಕಾರಗಳು, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಹಾಗೂ ಕಂಪನಿಗಳಲ್ಲಿ ಮಂಜೂರಾಗಿರುವ ಮೂರು ಲಕ್ಷಕ್ಕೂ ಹೆಚ್ಚು ಹುದ್ದೆಗಳನ್ನು ಖಾಸಗಿ ಏಜೆನ್ಸಿಗಳ ಮೂಲಕ ಹೊರಗುತ್ತಿಗೆ ಮತ್ತು ಇತರ ವಿಧಾನಗಳ ಮುಖಾಂತರ ಭರ್ತಿ ಮಾಡಲಾಗಿದೆ. ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ದಿನದಿಂದ ಈ ರೀತಿಯ ಹೊರಗುತ್ತಿಗೆ ಆಧಾರದಲ್ಲಿ ನಡೆಯುವ ಎಲ್ಲ ನೇಮಕಾತಿಗಳು ಸಂಪೂರ್ಣವಾಗಿ ಸ್ಥಗಿತಗೊಳ್ಳಲಿವೆ.

ಹೊರಗುತ್ತಿಗೆ ನಿಷೇಧ ಕಾಯ್ದೆ ಅನುಷ್ಠಾನಕ್ಕೆ ಬಂದ ನಂತರ ಕೆಪಿಎಸ್‌ಸಿ ಅಥವಾ ಯಾವುದೇ ನೇಮಕಾತಿ ಪ್ರಾಧಿಕಾರವು ವಿವಿಧ ಇಲಾಖೆಗಳಲ್ಲಿನ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ವೃಂದದ ಹುದ್ದೆಗಳಿಗೆ ನಡೆಸುವ ಎಲ್ಲ ನೇರ ನೇಮಕಾತಿಗಳಲ್ಲಿ, ಹೊರ ಗುತ್ತಿಗೆ ವ್ಯವಸ್ಥೆಯಡಿ ಕೆಲಸ ಮಾಡಿದವರಿಗೆ ಕೃಪಾಂಕ ನೀಡಿ ಮತ್ತು ವಯೋಮಿತಿ ಸಡಿಲಿಸಿ ಅನುಕೂಲ ಮಾಡಿಕೊಡುವ ಪ್ರಸ್ತಾವವೂ ಈ ಮಸೂದೆಯಲ್ಲಿದೆ.

3 ವರ್ಷ ಜೈಲು, ₹5 ಲಕ್ಷ ದಂಡ

ಖಾಸಗಿ ಹೊರಗುತ್ತಿಗೆ ಸಂಸ್ಥೆಗಳು, ಗುತ್ತಿಗೆದಾರರು ಅಥವಾ ಯಾವುದೇ ಮೂರನೇ ವ್ಯಕ್ತಿಯ ಮಧ್ಯವರ್ತಿಗಳ ಮೂಲಕ ರಾಜ್ಯ ಸರ್ಕಾರದ ವ್ಯಾಪ್ತಿ ಅಥವಾ ನಿಯಂತ್ರಣದಲ್ಲಿರುವ ಇಲಾಖೆಗಳು ಮತ್ತು ಸಂಸ್ಥೆಗಳು ನೇಮಕಾತಿ ಮಾಡಿಕೊಂಡು ಮಾನವ ಸಂಪನ್ಮೂಲ ತೊಡಗಿಸಿಕೊಳ್ಳುವುದನ್ನು ನಿಷೇಧಿಸಲು ಈ ಮಸೂದೆ ತರಲಾಗುತ್ತಿದೆ. ಅಲ್ಲದೆ, ಈ ರೀತಿ ನೇಮಿಸಿಕೊಂಡು ನಡೆಸುವ ಎಲ್ಲ ರೀತಿಯ ಶೋಷಣೆ ಮತ್ತು ಅಮಾನವೀಯ ಪದ್ಧತಿಗಳನ್ನು ಕಾನೂನುಬಾಹಿರವೆಂದು ಘೋಷಿಸುವುದು ಕೂಡಾ ಮಸೂದೆಯ ಉದ್ದೇಶಗಳಲ್ಲಿ ಒಂದಾಗಿದೆ.

ಹೊರಗುತ್ತಿಗೆ ನೌಕರರ ಸೇವಾ ಭದ್ರತೆ ಕುರಿತು ಚರ್ಚಿಸಿ, ಶಿಫಾರಸು ಮಾಡಲು ಕಾನೂನು ಸಚಿವ ಎಚ್.ಕೆ. ಪಾಟೀಲ ನೇತೃತ್ವದಲ್ಲಿ ಸಚಿವ ಸಂಪುಟದ ಉಪಸಮಿತಿಯನ್ನು ಸರ್ಕಾರ ರಚಿಸಿತ್ತು. ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಒದಗಿಸುವ ಬಗ್ಗೆ ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ ಇದೇ ಆಗಸ್ಟ್ 19ರಂದು ನೀಡಿದ್ದ ತೀರ್ಪಿನಲ್ಲಿದ್ದ ಕೆಲವು ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಮಸೂದೆಗೆ ರೂಪು ನೀಡಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ಇಲಾಖೆಯ ಮೂಲಗಳು ತಿಳಿಸಿವೆ.

▸7

ಮುಖ್ಯಾಂಶಗಳು

- 2028ರ ಮಾರ್ಚ್ 31ರ ನಂತರ ಹೊರಗುತ್ತಿಗೆ ರದ್ದು
- ಸಚಿವ ಸಂಪುಟ ಉಪ ಸಮಿತಿ ಶಿಫಾರಸು
- ಹೊರಗುತ್ತಿಗೆ ನೌಕರರಿಗೆ ಕೃಪಾಂಕ, ವಯೋಮಿತಿ ಸಡಿಲಿಕೆ

ಮಸೂದೆಯಲ್ಲಿ ಏನಿದೆ?

ಅಸ್ತಿತ್ವದಲ್ಲಿರುವ ಎಲ್ಲ ಖಾಸಗಿ ಹೊರಗುತ್ತಿಗೆ ಒಪ್ಪಂದಗಳನ್ನು ಹಂತ ಹಂತವಾಗಿ ಕೊನೆಗೊಳಿಸಬೇಕು. 2028ರ ಮಾರ್ಚ್ 31ರ ಒಳಗೆ ಹೊರಗುತ್ತಿಗೆ ವ್ಯವಸ್ಥೆಯನ್ನು ಸಂಪೂರ್ಣವಾಗಿ ರದ್ದುಗೊಳಿಸುವವರೆಗೆ 'ಬೀದರ್ ಮಾದರಿ' ಯಲ್ಲಿ ಜಿಲ್ಲಾಮಟ್ಟದಲ್ಲಿ ಕಾರ್ಮಿಕ ಸೇವೆಗಳ ವಿವಿಧೋದ್ದೇಶ ಸಹಕಾರ ಸಂಘಗಳ ಮೂಲಕ ಗುತ್ತಿಗೆ ವ್ಯವಸ್ಥೆಯನ್ನು ಮುಂದುವರಿಸಬಹುದು. ಅಲ್ಲದೆ, ಹಾಲಿ ಇರುವ ಹೊರಗುತ್ತಿಗೆ ನೌಕರರನ್ನು ಮುಂದುವರಿಸಲು ಕೂಡಾ ಅವಕಾಶ ನೀಡಲಾಗುವುದು. ಜೊತೆಗೆ, ಈ ರೀತಿ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಮೀಸಲಾತಿ ನಿಯಮ ಪಾಲಿಸಲು ಮತ್ತು ಹೀಗೆ ನೇಮಕಗೊಂಡವರಿಗೆ ಕಾನೂನು ಪ್ರಕಾರ ಸಿಗಬೇಕಾದ ಎಲ್ಲ ಸವಲತ್ತುಗಳು ಕಡ್ಡಾಯವಾಗಿ ಸಿಗುವಂತೆ ಮಾಡುವ ಪ್ರಸ್ತಾವ ಈ ಮಸೂದೆಯಲ್ಲಿದೆ.



ಹೊರಗುತ್ತಿಗೆ ವ್ಯವಸ್ಥೆ ಸಂವಿಧಾನದ ಉಲ್ಲಂಘನೆ. ಹೀಗಾಗಿ, ಹಂತ ಹಂತವಾಗಿ ಹೊರಗುತ್ತಿಗೆ ನೌಕರರ ಸೇವಾ ಭದ್ರತೆಗೆ ಕ್ರಮ ಕೈಗೊಳ್ಳಲಾಗುವುದು
ಎಚ್.ಕೆ. ಪಾಟೀಲ, ಕಾನೂನು ಸಚಿವ



ಬಾಲಿವುಡ್ 'ಹೀ ಮ್ಯಾನ್' ಇನ್ನಿಲ್ಲ

1935-2025

ಪ್ರಜಾವಾಣಿ ವಾರ್ತೆ

ಮುಂಬೈ: ಹಿಂದಿ ಚಿತ್ರರಂಗದ ಜನಪ್ರಿಯ ನಟ, 'ಹೀ ಮ್ಯಾನ್' ಎಂದೇ ಖ್ಯಾತಿಯಾಗಿದ್ದ ಧರ್ಮೇಂದ್ರ (89) ಸೋಮವಾರ ದೀರ್ಘ ಕಾಲದ ಅಸ್ವಸ್ಥತೆಯ ನಂತರ ನಿಧನರಾದರು.

ಆರು ದಶಕಗಳಲ್ಲಿ 250ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದ ಅವರು ಸಾಹಸಪ್ರಧಾನ ಚಿತ್ರಗಳಿಂದ ಜನಮನ ಗೆದ್ದಿದ್ದರು.

ಪಂಜಾಬ್‌ನಲ್ಲಿ 1935ರಲ್ಲಿ ಜನಿಸಿದ್ದ ಅವರು, ಬಿಜೆಪಿಯಿಂದ ಸ್ಪರ್ಧಿಸಿ ಚುನಾವಣೆಯಲ್ಲಿ ಗೆದ್ದು, ಬೀಕಾನೇರ್‌ನ ಸಂಸದರಾಗಿಯೂ ಕಾರ್ಯನಿರ್ವಹಿಸಿದ್ದರು.

'ದಿಲ್ ಭಿ ತೇರಾ ಹಮ್ ಭಿ ತೇರೆ' ಸಿನಿಮಾ ಮೂಲಕ ಅಭಿನಯ ಲೋಕಕ್ಕೆ ಕಾಲಿಟ್ಟ ಅವರು, ನೂತನ್, ಮೀನಾ ಕುಮಾರಿ, ಶರ್ಮಿಳಾ ಟ್ಯಾಗೋರ್ ಅವರಂತಹ ನುರಿತ ನಟಿಯರೊಂದಿಗೆ ತೆರೆ ಹಂಚಿಕೊಂಡರು. ಹೇಮಾ ಮಾಲಿನಿ ಹಾಗೂ ಧರ್ಮೇಂದ್ರ ಜೋಡಿ ಅತಿ ಹೆಚ್ಚು ಜನಪ್ರಿಯವಾಗಿತ್ತು. ಮೊದಲೇ ವಿವಾಹ ಬಂಧನದಲ್ಲಿದ್ದರೂ ಅವರು ಆನಂತರ ಹೇಮಾ ಅವರನ್ನು ಮದುವೆಯಾದರು.

'ಬಂದಿನಿ', 'ಅನುಪಮಾ', 'ಚುಪ್ಕೆ ಚುಪ್ಕೆ', 'ಶೋಲೆ', 'ಸೀತಾ ಔರ್ ಗೀತಾ' ಅವರ ಜನಪ್ರಿಯ ಸಿನಿಮಾಗಳ ಸಾಲಿನಲ್ಲಿವೆ. ತಮ್ಮ ಮಕ್ಕಳೊಟ್ಟಿಗೆ 'ಯಮ್ಲಾ ಪಗ್ಲಾ ದೀವಾನಾ' ಎಂಬ ಸರಣಿ ಸಿನಿಮಾಗಳಲ್ಲಿಯೂ ಅವರು ನಟಿಸಿದರು.

ನಿರ್ಮಾಣ ಸಂಸ್ಥೆಯನ್ನೂ ಕಟ್ಟಿದ್ದ ಅವರಿಗೆ ಪದ್ಮಭೂಷಣ ಪ್ರಶಸ್ತಿಯೂ ಸಂದಿತ್ತು. ಅವರ ಪುತ್ರರಾದ ಸನ್ನಿ ಡಿಯೋಲ್ ಹಾಗೂ ಬಾಬಿ ಡಿಯೋಲ್ ಅವರನ್ನು ನಾಯಕರಾಗಿ ಪರಿಚಯಿಸಿದ್ದು ಇದೇ ಸಂಸ್ಥೆಯ ಮೂಲಕ. ಅವರ ಅಭಿನಯದ ಕೊನೆಯ ಸಿನಿಮಾ 'ಇಕ್ಕೀಸ್' ಮುಂದಿನ ತಿಂಗಳು ತೆರೆಕಾಣಲಿದೆ.

ಕಳೆದ ಕೆಲವು ದಿನಗಳಲ್ಲಿ ಅವರು ಪದೇಪದೇ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾಗಿದ್ದರು. ಪವನ್ ಹನ್ಸ್ ಚಿತಾಗಾರದಲ್ಲಿ ಅವರ ಅಂತಿಮ ಸಂಸ್ಕಾರ ನೆರವೇರಿತು.

ಸ್ಫುರದ್ರೂಪಿ ನಟನ ಸಿನಿ ನೆನಪಿನ ಪುಟ ▸9

ಇಂದು ದೆಹಲಿಗೆ ತೆರಳಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ

ರಾಹುಲ್ ಜತೆ ಹರಿಪ್ರಸಾದ್ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ/ಬೆಂಗಳೂರು: ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ನಾಯಕತ್ವ ಗೊಂದಲ ತಾರಕಕ್ಕೇರಿರುವ ನಡುವೆ, ರಾಹುಲ್ ಗಾಂಧಿ ಅವರನ್ನು ದೆಹಲಿಯಲ್ಲಿ ಸೋಮವಾರ ಭೇಟಿ ಮಾಡಿದ ಬಿ.ಕೆ. ಹರಿಪ್ರಸಾದ್ ಅವರು 10 ನಿಮಿಷ ಚರ್ಚೆ ನಡೆಸಿದ್ದಾರೆ.

ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರಾಗಿರುವ ಹರಿಪ್ರಸಾದ್ ಅವರು ಹರಿಯಾಣ ರಾಜ್ಯದ ಎಐಸಿಸಿ ಉಸ್ತುವಾರಿಯಾಗಿದ್ದಾರೆ. ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣದ ನಡುವೆ ನಾಯಕತ್ವಕ್ಕಾಗಿನ ಕಚ್ಚಾಟ ತೀವ್ರವಾಗಿದ್ದು, ಶಾಸಕರ ಬಲ ಕ್ರೋಡೀಕರಣದ ಯತ್ನಗಳು ನಡೆಯುತ್ತಿವೆ. ಈ ಬೆಳವಣಿಗೆಗಳ ಮಧ್ಯೆಯೇ ಲೋಕಸಭೆಯ ವಿರೋಧ ಪಕ್ಷದ ನಾಯಕರಾಗಿರುವ ರಾಹುಲ್ ಅವರನ್ನು ಹರಿಪ್ರಸಾದ್ ಭೇಟಿ ಮಾಡಿ ಸಮಾಲೋಚನೆ ನಡೆಸಿರುವುದು, ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

▸7

ದೆಹಲಿಯಲ್ಲಿ ಡಿಕೆಶಿ ನಿಷ್ಠ ಬಣ

ಶಿವಕುಮಾರ್ ಅವರಿಗೆ ನಿಷ್ಠರಾಗಿರುವ ಆರರಿಂದ ಏಳು ಶಾಸಕರು ದೆಹಲಿಗೆ ಸೋಮವಾರ ಬಂದಿದ್ದು, ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವ ಯತ್ನ ನಡೆಸಿದ್ದು, ಯಶಸ್ಸು ಸಿಕ್ಕಿಲ್ಲ. ಎಚ್.ಸಿ. ಬಾಲಕೃಷ್ಣ, ಕೆ.ಎಂ. ಉದಯ್, ನಯನಾ ಮೋಟಮ್ಮ, ಇಕ್ಬಾಲ್ ಹುಸೇನ್, ಬಸವರಾಜ್ ಶಿವಗಂಗಾ ಮತ್ತಿತರರು ದೆಹಲಿ ಹೋಟೆಲ್‌ಗಳಲ್ಲಿ ಉಳಿದುಕೊಂಡಿದ್ದಾರೆ.

'ಸಿದ್ದರಾಮಯ್ಯ ಮಾತು ವೇದವಾಕ್ಯ'

'ಅಧಿಕಾರ ಹಂಚಿಕೆ ಬಗ್ಗೆ ನಾನಾಗಲಿ ಯಾರೇ ಆಗಲಿ ಮಾತನಾಡಿಲ್ಲ. ಮುಖ್ಯಮಂತ್ರಿಯವರಿಗೆ ಏನು ಗೌರವ ಕೊಡಬೇಕೊ ಕೊಟ್ಟಿದ್ದೇವೆ. ಸಿದ್ದರಾಮಯ್ಯ ಪಕ್ಷಕ್ಕೆ ದೊಡ್ಡ ಆಸ್ತಿ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.



ಶಿವಕುಮಾರ್

'ಹೈಕಮಾಂಡ್ ಹೇಳಿದ್ದನ್ನು ನಾನು, ಶಿವಕುಮಾರ್ ಸೇರಿದಂತೆ ಎಲ್ಲರೂ ಒಪ್ಪಬೇಕು' ಎಂಬ ಸಿದ್ದರಾಮಯ್ಯ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಅವರು ಹೇಳಿದ ಮೇಲೆ ಅದೇ ನಮಗೆ ವೇದವಾಕ್ಯ. ಅವರ ಮಾತಿಗೆ ನಾನು ಗೌರವ ನೀಡುತ್ತೇನೆ. ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ' ಎಂದರು.

'ನಾವೆಲ್ಲರೂ ಹೈಕಮಾಂಡ್ ಮೇಲೆ ಗೌರವ ಇಟ್ಟಿದ್ದೇವೆ. ನನಗೂ ಹಾಗೂ ಯಾರಿಗೂ ಗೊಂದಲಗಳಿಲ್ಲ. ಏನಾದರೂ ಇದ್ದರೆ ನಾನು ಹಾಗೂ ಪಕ್ಷದ ಹೈಕಮಾಂಡ್ ಬಗೆಹರಿಸಿಕೊಳ್ಳುತ್ತೇವೆ. ಏನೇ ತೀರ್ಮಾನ ಆಗಿದ್ದರೂ ಅದು ಒಂದು ಕೊಠಡಿಯ ನಾಲ್ಕು ಗೋಡೆಗಳ ಮಧ್ಯೆ ಆಗಿರುತ್ತದೆ' ಎಂದರು.

ಬಾಲಕೃಷ್ಣ ಸೇರಿದಂತೆ ಕೆಲವರು ದೆಹಲಿಗೆ ಹೋಗಿರುವ ಬಗ್ಗೆ ಕೇಳಿದಾಗ, 'ಮಂತ್ರಿಯಾಗಬೇಕು ಎನ್ನುವ ಆಸೆ ಇರುತ್ತದೆ. ದೆಹಲಿಗೆ ಹೋಗುವವರನ್ನು ಬೇಡ ಎನ್ನಲು ಆಗುತ್ತದೆಯೇ' ಎಂದರು.

▸7

ಐಸಿಡಿಎಸ್ ಪ್ರಚಾರ: ₹ 1 ಸಾವಿರ ಹೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ (ಐಸಿಡಿಎಸ್) ಸುವರ್ಣ ಮಹೋತ್ಸವ ಕಾರ್ಯಕ್ರಮದ ಪ್ರಚಾರಕ್ಕೆ ಬ್ಯಾನರ್ ಅಳವಡಿಸಲು ಅಂಗನವಾಡಿಗಳ ನಿರ್ವಹಣೆ ವೆಚ್ಚದಿಂದ ₹1 ಸಾವಿರ ಭರಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ. ಇಲಾಖೆಯ ಈ ನಡೆಗೆ ಅಂಗನವಾಡಿ ಕಾರ್ಯಕರ್ತೆಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅಧ್ಯಕ್ಷತೆಯಲ್ಲಿ, ಅ.28ರಂದು ನಡೆದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. 'ಐಸಿಡಿಎಸ್ ಯೋಜನೆಯ ಸುವರ್ಣ ಮಹೋತ್ಸವದ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸಬೇಕು. ಇದಕ್ಕಾಗಿ ರಾಜ್ಯದಲ್ಲಿರುವ 69,922 ಅಂಗನವಾಡಿ ಕೇಂದ್ರಗಳಲ್ಲಿ ಬ್ಯಾನರ್ ಅಳವಡಿಸಿ, ಪ್ರಚಾರ ಮಾಡಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಅಂಗನವಾಡಿ ಕೇಂದ್ರಗಳಿಗೆ ಈಗಾಗಲೇ ಕಟ್ಟಡಗಳ ನಿರ್ವಹಣಾ ವೆಚ್ಚದ ಅನುದಾನ ನೀಡಲಾಗಿದೆ. ಇದರಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳಲ್ಲಿ ₹ 1 ಸಾವಿರ ಬಾಕಿ ಉಳಿದಿದೆ? ಎಷ್ಟು ಅಂಗನವಾಡಿ ಕೇಂದ್ರಗಳಲ್ಲಿ ಅನುದಾನ ಇಲ್ಲ? ಅನುದಾನ ಬಾಕಿ ಉಳಿದಿಲ್ಲ ಎಂದಾದರೆ ಯಾವುದಕ್ಕೆ ಖರ್ಚು ಮಾಡಲಾಗಿದೆ ಎಂಬ ಮಾಹಿತಿಯನ್ನು ತಕ್ಷಣ ನೀಡಬೇಕು' ಎಂದು ಅಂಗನವಾಡಿ ಕಾರ್ಯಕರ್ತೆಯರಿಗೆ ಇಲಾಖೆ ಸೂಚಿಸಿದೆ.

'ರಾಜ್ಯದಾದ್ಯಂತ ಏಕರೂಪ ಮಾದರಿ ಅನುಸರಿಸುವ ಉದ್ದೇಶದಿಂದ 6 ಅಡಿ ಅಗಲ, 4 ಅಡಿ ಎತ್ತರದ ಬ್ಯಾನರ್ ಮುದ್ರಿಸಿ ಸರಬರಾಜು ಮಾಡಲು ದರ ಪಟ್ಟಿ ಆಹ್ವಾನಿಸಲಾಗಿತ್ತು. ಇದರಲ್ಲಿ ಝೇಂಕಾರ್ ಅಡ್ವರ್ಟೈಸಿಂಗ್ ಸಂಸ್ಥೆಯು ಕನಿಷ್ಠ ₹996 ದರ ನಿಗದಿಪಡಿಸಿದೆ. ಅಂಗನವಾಡಿಗಳಿಗೆ 2023–24 ಹಾಗೂ 2024–25ನೇ ಸಾಲಿನ ನಿರ್ವಹಣಾ ವೆಚ್ಚವಾಗಿ ಇಲಾಖೆಯು ತಲಾ ₹3 ಸಾವಿರ ಅನುದಾನ ನೀಡಿತ್ತು' ಎಂದು ಆದೇಶದಲ್ಲಿ ಹೇಳಲಾಗಿದೆ.

▸7

ಧರ್ಮಸ್ಥಳ: ಸಾಕ್ಷಿ ದೂರುದಾರನಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಈ ಹಿಂದೆ ಅಪರಾಧ ಕೃತ್ಯಗಳು ನಡೆದಿವೆ ಎಂದು ಆರೋಪಿಸಿರುವ ಪ್ರಕರಣದ ಸಾಕ್ಷಿ ದೂರುದಾರನಿಗೆ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಸೋಮವಾರ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಸಾಕ್ಷಿ ದೂರುದಾರನ ಪರ ವಕೀಲರು ಪ್ರಕರಣದಿಂದ ಹಿಂದೆ ಸರಿದಿದ್ದು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ವಕೀಲರ ಮೂಲಕ ಜಾಮೀನಿಗೆ ಅರ್ಜಿ ಸಲ್ಲಿಸಲಾಗಿತ್ತು.

ಅರ್ಜಿ ಪುರಸ್ಕರಿಸಿದ ನ್ಯಾಯಾಧೀಶರಾದ ಬಸವರಾಜ್, ₹1 ಲಕ್ಷ ಭದ್ರತಾ ಠೇವಣಿ ಇಡಲು ಸೂಚಿಸಿ, ಸಾಕ್ಷಿದೂರುದಾರನಿಗೆ ಜಾಮೀನು ನೀಡಿದ್ದು, ಹಲವು ಷರತ್ತುಗಳನ್ನು ವಿಧಿಸಿದ್ದಾರೆ.

ತಲೆಮರೆಸಿಕೊಳ್ಳಬಾರದು, ಸಾಕ್ಷ್ಯ ತಿರುಚಬಾರದು, ಅನುಮತಿ ಪಡೆಯದೇ ಕೋರ್ಟ್ ವ್ಯಾಪ್ತಿ ಪ್ರದೇಶದಿಂದ ಹೊರಗೆ ಹೋಗಬಾರದು, ಈ ಪ್ರಕರಣದ ಸಂಬಂಧ ಯಾವುದೇ ಹೇಳಿಕೆ ಅಥವಾ ಸಂದರ್ಶನವನ್ನು ನೀಡಬಾರದು ಎಂಬುವು ಈ ಷರತ್ತುಗಳಲ್ಲಿ ಸೇರಿವೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ಮೋಡ ಕವಿದ ವಾತಾವರಣ, ಅಲ್ಲಲ್ಲಿ ಮಳೆ ಸಾಧ್ಯತೆ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

'ಬಾಲಗಂಗಾಧರನಾಥ ಶ್ರೀ ದಾರ್ಶನಿಕ'

ಸಂಸ್ಥಾಪನಾ ದಿನಾಚರಣೆಯಲ್ಲಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಶ್ಲಾಘನೆ



ಬಿಜಿಎಸ್ ಉತ್ಸವ ಮತ್ತು ಸಂಸ್ಥಾಪನಾ ದಿನಾಚರಣೆಯಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಲಗಂಗಾಧರನಾಥ ಸ್ವಾಮೀಜಿ ಅವರು ದೂರದೃಷ್ಟಿ ಇದ್ದ ದಾರ್ಶನಿಕರು' ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಆಯೋಜಿಸಿದ್ದ ಬಿಜಿಎಸ್ ಉತ್ಸವ ಮತ್ತು ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಹಲವಾರು ಸಂಸ್ಥೆ ಕಟ್ಟಿ ಸಮಾಜಕ್ಕೆ ನೀಡಿದ್ದರು. ಭಕ್ತರ ಕಾಣಿಕೆಯನ್ನು ಸಮಾಜ ಮುಖಿ ಕಾರ್ಯಗಳಿಗೆ ಬಳಸಿದ್ದರು. ಸರಳ ಸ್ವಾಮೀಜಿ ಆಗಿದ್ದರು' ಎಂದರು.

ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, 'ನಮ್ಮ ಮಠಕ್ಕೆ ಒಂದೂವರೆ ಸಾವಿರ ವರ್ಷಗಳ ಇತಿಹಾಸ ಇದೆ. ಜ್ಞಾನ, ಅಕ್ಷರ, ಅನ್ನ ದಾಸೋಹ ಮೂಲಕ ಮಠ ಹೆಸರು ಮಾಡಿದೆ. ಮಡುಗಟ್ಟಿದ ಸಮಾಜಕ್ಕೆ ಬಾಲ ಗಂಗಾಧರನಾಥ ಸ್ವಾಮೀಜಿ ಆದರ್ಶ ಪ್ರಾಯರಾಗಿದ್ದರು' ಎಂದು ಹೇಳಿದರು.

> **ಬಿಜಿಎಸ್ ಶಿಕ್ಷಣ ಸಂಸ್ಥೆ ಕೇವಲ ಶಿಕ್ಷಣ ನೀಡುತ್ತಿಲ್ಲ. ಬದಲಾಗಿ ಜೀವನದ ಪಾಠವನ್ನು ಕಲಿಸುತ್ತಿದೆ. ಶಿಕ್ಷಣ ಸಂಸ್ಥೆ, ಆಸ್ಪತ್ರೆ ನಡೆಸುವುದು ಸುಲಭವಲ್ಲ**
> **ಶೋಭಾ ಕರಂದ್ಲಾಜೆ,** ಕೇಂದ್ರ ಸಚಿವೆ

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿ, 'ರಾಜ್ಯ ಸರ್ಕಾರ ತಮ್ಮ ಅಧೀನದಲ್ಲಿರುವ ಸರ್ಕಾರಿ ಶಾಲೆಗಳನ್ನು ನಡೆಸಲು ಕಷ್ಟಪಡುತ್ತಿರುವ ಈ ಕಾಲದಲ್ಲಿ ಮಠವು ಹಲವು ಶಿಕ್ಷಣ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿರುವುದು ಹೆಮ್ಮೆಯ ವಿಚಾರ' ಎಂದು ಶ್ಲಾಘಿಸಿದರು.

ಬಿಜಿಎಸ್ ಟ್ರಸ್ಟ್ ಸಂಸ್ಥಾಪಕ ಬಾಲಗಂಗಾಧರನಾಥ ಸ್ವಾಮೀಜಿ ದೂರದೃಷ್ಟಿಯಿಂದ ಶಿಕ್ಷಣ, ಆರೋಗ್ಯ ಸೇರಿದಂತೆ ಹಲವಾರು ಸಮಾಜ ಮುಖಿ ಕೆಲಸ ಮಾಡಿದ್ದಾರೆ ಎಂದು ಬಿಜಿಎಸ್ ಮತ್ತು ಎಸ್‌ಜೆಬಿ ಸಮೂಹ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ ಹೇಳಿದರು.

ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ನಟಿ ಮಾಲಾಶ್ರೀ, ಆರಾಧನಾ, ಸೌಂದರ್ಯ ಗೌಡ ಭಾಗವಹಿಸಿದ್ದರು. ಬಿಜಿಎಸ್‌ನಲ್ಲಿ ಕರ್ತವ್ಯ ನಿರ್ವಹಿಸಿದ ಸಾಧಕರಾದ ಶ್ರೀಕಲಾ ಜಿ. ಕುಮಾರ್, ಪ್ರಕಾಶ್, ವಿನಯ್, ಗುಂಜನ್ ಸಚ್‌ದೇವ, ಬಾಬು, ಅರವಿಂದ್ ಸಜವಾಲ್ ಅವರಿಗೆ 'ಬಿಜಿಎಸ್ ಸೇವಾ ರತ್ನ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.


ಕ್ಯಾ.ಜಿ.ಆರ್.ಗೋಪಿನಾಥ್ ಅವರನ್ನು ಸನ್ಮಾನಿಸಲಾಯಿತು

'ಬೆಂಗಳೂರಿನ ನಾಲ್ಕೂ ದಿಕ್ಕಿನಲ್ಲಿ ವಿಮಾನ ನಿಲ್ದಾಣ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ನಾಲ್ಕೂ ದಿಕ್ಕಿನಲ್ಲಿ ಹೊಸ ವಿಮಾನ ನಿಲ್ದಾಣಗಳ ಸ್ಥಾಪನೆಗೆ ಈಗಿನಿಂದಲೇ ಯೋಜನೆ ರೂಪಿಸುವ ಅಗತ್ಯವಿದೆ' ಎಂದು ಉದ್ಯಮಿ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಬ್ರಾಹ್ಮಣರ ಅಭಿವೃದ್ಧಿ ಮಂಡಳಿಯಲ್ಲಿ ಸೋಮವಾರ ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇವನಹಳ್ಳಿಯಲ್ಲಿ ಇರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಒಪ್ಪಂದ ಏಳು ವರ್ಷಗಳಲ್ಲಿ ಮುಕ್ತಾಯವಾಗಲಿದೆ. ಆ ಒಪ್ಪಂದ ಮುಗಿಯುವ ಮುನ್ನವೇ ಹೊಸ ವಿಮಾನ ನಿಲ್ದಾಣಗಳ ಸ್ಥಾಪನೆಗೆ ಸರ್ಕಾರ ಪ್ರಯತ್ನಗಳನ್ನು ಚುರುಕುಗೊಳಿಸಬೇಕು' ಎಂದರು.

'ಎಚ್‌ಎಎಲ್ ವಿಮಾನ ನಿಲ್ದಾಣವನ್ನು ಯಾವುದೇ ಕಾರಣಕ್ಕೂ ಮುಚ್ಚಬಾರದು. ಅದಕ್ಕೆ ಮತ್ತಷ್ಟು ಶಕ್ತಿ ತುಂಬಬೇಕು' ಎಂದು ಸಲಹೆ ನೀಡಿದರು

> **ರಕ್ಷಣಾ ವಲಯದ ಸ್ವಾವಲಂಬನೆಯಲ್ಲಿ ಬೇಕಾದಷ್ಟು ಕೆಲಸ ಮಾಡಲು ಬೆಂಗಳೂರು ಅತ್ಯಂತ ಪ್ರಶಸ್ತ ನಗರವಾಗಿದೆ. ಸರ್ಕಾರ ಇಲ್ಲಿ ವಿಮಾನ ತರಬೇತಿ ಶಾಲೆಗಳನ್ನು ಆರಂಭಿಸಬೇಕು**
> **ಕ್ಯಾ.ಜಿ.ಆರ್.ಗೋಪಿನಾಥ್**

'ಮೈಸೂರಿನ ಮಹಾರಾಜರು ದೂರದೃಷ್ಟಿಯಿಂದ ಜಾಗ ಕೊಟ್ಟು ಆರಂಭಿಸಿದ ಸರ್ಕಾರಿ ವಿಮಾನ ತರಬೇತಿ ಶಾಲೆ ಇಂದು ದುರವಸ್ಥೆಯ ತಾಣವಾಗಿದೆ. ತರಬೇತಿ ಶಾಲೆ ಮುಚ್ಚುವಂತೆ ಕಾಣದ ಕೈಗಳು ಒತ್ತಡ ಹಾಕುತ್ತಿವೆ' ಎಂದು ತಿಳಿಸಿದರು.

ಮಂಡಳಿಯ ಅಧ್ಯಕ್ಷ ಅಸಗೋಡು ಜಯಸಿಂಹ, ವ್ಯವಸ್ಥಾಪಕ ನಿರ್ದೇಶಕಿ ಕೆ.ದೀಪಶ್ರೀ, ನಿರ್ದೇಶಕರು ಉಪಸ್ಥಿತರಿದ್ದರು.

ಪರವಾನಗಿ ನವೀಕರಣ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪ್ರಧಾನಮಂತ್ರಿ ಜನೌಷಧಿ ಕೇಂದ್ರದ ಪರವಾನಗಿ ನವೀಕರಣ ಮಾಡಲು ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಔಷಧ ನಿಯಂತ್ರಣ ಇಲಾಖೆಗೆ ನೋಟಿಸ್ ಜಾರಿಗೊಳಿಸುವಂತೆ ಹೈಕೋರ್ಟ್ ಸೋಮವಾರ ಆದೇಶಿಸಿದೆ.

ಈ ಸಂಬಂಧ ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಹಾಗೂ ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಅವರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಔಷಧ ನಿಯಂತ್ರಣ ಇಲಾಖೆ ಔಷಧ ನಿಯಂತ್ರಕ, ಬೆಂಗಳೂರು ದಕ್ಷಿಣ ವಿಭಾಗದ ಸಹಾಯಕ ಔಷಧ ನಿಯಂತ್ರಕ ಮತ್ತು ಪಿಎಂಬಿಐಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಡಿಸೆಂಬರ್ 12ಕ್ಕೆ ಮುಂದೂಡಿತು.

ನೋಟಿಸ್: ಉಡುಪಿ ಜಿಲ್ಲೆ ಕುಂದಾಪುರ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿದ್ದ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರವನ್ನು ಮುಚ್ಚಿಸಿರುವುದನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ 'ಇಂಡಿಯನ್ ರೆಡ್ ಕ್ರಾಸ್ ಸಂಸ್ಥೆ'ಯ ಕುಂದಾಪುರ ತಾಲ್ಲೂಕು ಘಟಕದ ಪ್ರತಿನಿಧಿ ಜಯಕರ್ ಶೆಟ್ಟಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಅನಿರುದ್ಧ ಎ.ಕುಲಕರ್ಣಿ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಡಿಸೆಂಬರ್ 12ಕ್ಕೆ ಮುಂದೂಡಲಾಗಿದೆ.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವ ಹಿನ್ನೆಲೆಯಲ್ಲಿ ಮಹಾಲಕ್ಷ್ಮಿ ಲೇಔಟ್ ಉಪಕೇಂದ್ರ ವ್ಯಾಪ್ತಿಯಲ್ಲಿ ನ.25ರ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ

ಮಂಜುನಾಥ ನಗರ, ತಿಮ್ಮಯ್ಯ ರಸ್ತೆ, ಭೋವಿ ಕಾಲೊನಿ, ಮಹಾಗಣಪತಿ ನಗರ, ಪುಷ್ಪಾಂಜಲಿ ಅಪಾರ್ಟ್‌ಮೆಂಟ್, ಶಿವನಹಳ್ಳಿ ಪಾರ್ಕ್, ಆದರ್ಶ ನಗರ, ಆದರ್ಶ ಲೇಔಟ್, ಯುನಿಕ್ಸ್ ಕಾಲೊನಿ, ಇಂದಿರಾ ನಗರ, ಮಂಜುನಾಥ್ ನಗರ 3ನೇ ಹಂತ 1ನೇ ಬ್ಲಾಕ್, ಬಿ- ನಗರ, ಲಕ್ಷ್ಮೀ ನಗರ, ಎಚ್.ವಿ.ಕೆ ಲೇಔಟ್, ಕರ್ನಾಟಕ ಲೇಔಟ್, ಕಮಲಾ ನಗರ, ವಿ.ಜೆ.ಎಸ್.ಎಸ್ ಲೇಔಟ್, ವಾರ್ಡ್ ಕಚೇರಿ ಸುತ್ತಮುತ್ತ, ನಾಗಪುರ, ಮಹಾಲಕ್ಷ್ಮಿ ಪುರಂ, ಮೋದಿ ಆಸ್ಪತ್ರೆ ರಸ್ತೆ, ಪಂಜಾಬ್ ನ್ಯಾಷನಲ್ ಬ್ಯಾಂಕ್, ಹಂಸಲೇಖ ಹೋಮ್ ಸುತ್ತಮುತ್ತ ವಿದ್ಯುತ್ ಸರಬರಾಜು ಇರುವುದಿಲ್ಲ.

ಶಂಕರಮಾತಾ, ಪೈಪ್‌ಲೈನ್ ರಸ್ತೆ, ಜೆ.ಸಿ.ನಗರ, ಕುರುಬರಹಳ್ಳಿ, ರಾಜಾಜಿನಗರ 2ನೇ ಬ್ಲಾಕ್, ಇ.ಎಸ್.ಐ ಹಾಸ್ಪಿಟಲ್, ಕಮಲಾ ನಗರ ಮುಖ್ಯರಸ್ತೆ, ಗೃಹಲಕ್ಷ್ಮಿ ಲೇಔಟ್ 2ನೇ ಹಂತ, ಭೋವಿ ಪಾಳ್ಯ, ಗೆಳೆಯರ ಬಳಗ, ಮೈಕೋ ಲೇಔಟ್, ಜಿ.ಡಿ.ನಾಯ್ಡು ಹಾಲ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ಮಹಾಲಕ್ಷ್ಮಿ ಲೇಔಟ್, ಇಸ್ಕಾನ್-ಎಫ್.ಎಸ್.ಐ.ಟಿ ರಸ್ತೆ, ಬಿ.ಎನ್.ಇ.ಎಸ್.ಕಾಲೇಜು, ಬಿ.ಇ.ಎಲ್.ಎಸ್.ಕಾಲೇಜು, ಬೆಲ್ ಅಪಾರ್ಟ್‌ಮೆಂಟ್, ಟೊಯೊಟೊ ಶೋ ರೂಂ, ಎಸ್ಟೀಮ್ ಕ್ಲಾಸಿಕ್ ಅಪಾರ್ಟ್‌ಮೆಂಟ್, ಲುಮೋಸ್ ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ವ್ಯತ್ಯಯ ಆಗಲಿದೆ.

ನಾಳೆ ವ್ಯತ್ಯಯ: ತುರ್ತು ನಿರ್ವಹಣಾ ಕಾಮಗಾರಿಯಿಂದಾಗಿ ಆರ್.ಬಿ.ಐ ಮತ್ತು ಆಸ್ಟೀನ್ ಟೌನ್ ಉಪಕೇಂದ್ರ ವ್ಯಾಪ್ತಿಯಲ್ಲಿ ನ.26 ರಂದು ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಆರ್.ಬಿ.ಐ ಲೇಔಟ್, ಕೊತ್ತನೂರು, ಜೆ.ಪಿ.ನಗರ, 5ನೇ ಹಂತ, ಶ್ರೇಯಸ್ ಕಾಲೊನಿ, ಗೌರವ್ ನಗರ, ನಟರಾಜ ಲೇಔಟ್, ನೃಪತುಂಗ ನಗರ, ಜಂಬೂಸವಾರಿ ದಿಣ್ಣೆ, ಚುಂಚಘಟ್ಟ, ಬ್ರಿಗೇಡ್ ಮಿಲೇನಿಯಮ್ ಮತ್ತು ಬ್ರಿಗೇಡ್ ಗಾರ್ಡೇನಿಯ ಅಪಾರ್ಟ್‌ಮೆಂಟ್, ರಿಚ್ಮಂಡ್ ಸರ್ಕಲ್, ಜಾನ್ಸನ್ ಮಾರ್ಕೆಟ್, ನಾರೀಸ್ ರಸ್ತೆ, ಅರಬ್ ಲೇನ್, ವೆಲ್ಲಿಂಗ್ಟನ್ ಸ್ಟ್ರೀಟ್, ಕರ್ಲಿ ಸ್ಟ್ರೀಟ್, ಲಿಯೋನಾರ್ಡ್ ಸ್ಟ್ರೀಟ್, ರಿನಿಯಸ್ ಸ್ಟ್ರೀಟ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಇರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

26ರಿಂದ ಸಂವಿಧಾನ ಸಮರ್ಪಣಾ ದಿನ

ಬೆಂಗಳೂರು: ಬಾಬಾ ಸಾಹೇಬ್ ಡಾ. ಅಂಬೇಡ್ಕರ್ ಚಿಂತಕರ ಒಕ್ಕೂಟದಿಂದ ಇದೇ 26ರಿಂದ 30ರವರೆಗೆ ಜಯನಗರದ ನಾಲ್ಕನೇ ಟಿ ಬ್ಲಾಕ್‌ನ ಚಾಮುಂಡೇಶ್ವರಿ ಆಟದ ಮೈದಾನದಲ್ಲಿ ಭಾರತದ ಸಂವಿಧಾನ ಸಮರ್ಪಣಾ ದಿನಾಚರಣೆ ಆಯೋಜಿಸಲಾಗಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಸಂಚಾಲಕ ಎಂ.ಪಿ. ನಂಜೇಶ್ ಕುಮಾರ್, 'ನ.26ರಂದು ಸಂವಿಧಾನ ಪೀಠಿಕೆ ಓದುವುದು, ನ್ಯಾಯಾಂಗ, 27ರಂದು ಕಾರ್ಯಾಂಗ, 28ರಂದು ಶಾಸಕಾಂಗ, 26ರಂದು ಪತ್ರಿಕಾರಂಗ ಹಾಗೂ 30ರಂದು ಸಂಘಟನಾರಂಗದ ಪ್ರತಿನಿಧಿಗಳನ್ನು ಗೌರವಿಸಲಾಗುವುದು' ಎಂದರು.

ಸಂವಿಧಾನ ದಿನಾಚರಣೆ ನಾಳೆ

ಬೆಂಗಳೂರು: ರಾಜ್ಯ ಸರ್ಕಾರದ ವತಿಯಿಂದ ನವೆಂಬರ್ 26ರಂದು ವಸಂತನಗರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

'ತೆರಿಗೆ ಬಾಕಿ: ಆಸ್ತಿಗಳ ಪಟ್ಟಿ ಮಾಡಿ'

ಎ-ಖಾತಾಗೆ ಪರಿವರ್ತನೆ: ವರ್ಚುವಲ್ ಸಭೆಯಲ್ಲಿ ಮಹೇಶ್ವರ ರಾವ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡಿರುವ ಸ್ವತ್ತುಗಳ ಪಟ್ಟಿ ಮಾಡಿ, ತೆರಿಗೆ ವಸೂಲಿ ಮಾಡಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಸೂಚನೆ ನೀಡಿದರು.


ಮಹೇಶ್ವರ ರಾವ್

ಆಸ್ತಿ ತೆರಿಗೆ ಸಂಗ್ರಹ, 'ಇ' ಖಾತಾ, 'ಬಿ' ಖಾತಾದಿಂದ 'ಎ' ಖಾತಾಗೆ ಪರಿವರ್ತನೆ ಮಾಡುವ ಕುರಿತು ಸೋಮವಾರ ನಡೆದ ವರ್ಚುವಲ್ ಸಭೆಯಲ್ಲಿ ಅವರು ಮಾತನಾಡಿದರು.

'ಆಯಾ ನಗರ ಪಾಲಿಕೆಗಳಲ್ಲಿ ಹೆಚ್ಚು ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರು, ಆಸ್ತಿ ತೆರಿಗೆ ಪರಿಷ್ಕರಣೆ ಪ್ರಕರಣಗಳನ್ನು ಪತ್ತೆ ಹಚ್ಚಬೇಕು. ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದವರನ್ನು ಹುಡುಕಿ, ಅವರನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ತರಬೇಕು' ಎಂದು ಹೇಳಿದರು.

ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಮಾತನಾಡಿ, 'ನಗರದ 5 ನಗರ ಪಾಲಿಕೆಗಳಲ್ಲಿ ₹6,700 ಕೋಟಿ ತೆರಿಗೆ ಸಂಗ್ರಹಿಸುವ ಗುರಿ ಇದೆ. ಈವರೆಗೆ ₹3,533 ಕೋಟಿ ಸಂಗ್ರಹಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಐದು ನಗರ ಪಾಲಿಕೆಗಳಲ್ಲಿ 24 ಸಾವಿರ ಆಸ್ತಿಗಳ ಆಸ್ತಿ ತೆರಿಗೆ ಪರಿಷ್ಕರಣೆ ಪ್ರಕರಣಗಳಿವೆ. ಅದರಿಂದ ಸುಮಾರು ₹170 ಕೋಟಿ ಸಂಗ್ರಹಿಸಬೇಕಿದೆ. ಅಲ್ಲದೆ ಸುಮಾರು 22 ಸಾವಿರ ಸುಸ್ತಿದಾರರಿಂದ ₹598 ಕೋಟಿ ಬಾಕಿ ಇದೆ ಎಂದರು.

ಆಯಾ ನಗರ ಪಾಲಿಕೆಗಳಲ್ಲಿ ವಿಭಾಗವಾರು 100 ಪರಿಷ್ಕರಣೆ ಪ್ರಕರಣಗಳು, 100 ಹೆಚ್ಚು ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರನ್ನು ಪಟ್ಟಿ ಮಾಡಿಕೊಂಡು, ಕಂದಾಯ ಪರಿವೀಕ್ಷಕರು/ ಕಂದಾಯ ವಸೂಲಿಗಾರರಿಗೆ ನಿಗದಿತ ಗುರಿ ನೀಡಿ ವಾಣಿಜ್ಯ ಸ್ವತ್ತುಗಳನ್ನು ಸೀಲ್ ಮಾಡಿ ಬಾಕಿ ಇರುವ ತೆರಿಗೆಯನ್ನು ವಸೂಲಿ ಮಾಡಬೇಕು ಎಂದು ಮುಖ್ಯ ಆಯುಕ್ತರು ಸೂಚನೆ ನೀಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಹೊಸ ಖಾತಾಗಳನ್ನು ಪಡೆಯಲು ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ, ಅವುಗಳಿಗೆ ಕೂಡಲೇ ಖಾತೆ ನೀಡುವ ಕಾರ್ಯವಾಗಬೇಕು. ಇದರಿಂದ ಪಾಲಿಕೆಗೆ ಹೆಚ್ಚು ಆದಾಯ ಬರಲಿದೆ. ಅದಲ್ಲದೆ ಬಿ-ಖಾತಾದಿಂದ ಎ-ಖಾತಾಗೆ ಪರಿವರ್ತನೆಗೆ ಬಂದಿರುವಂತಹ ಅರ್ಜಿಗಳನ್ನು ಪರಿಶೀಲಿಸಿ ಕಾಲಮಿತಿಯೊಳಗಾಗಿ ಎ-ಖಾತಾ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ನಗರ ಪಾಲಿಕೆಗಳ ಆಯುಕ್ತರಾದ ರಾಜೇಂದ್ರ ಚೋಳನ್, ಪೊಮ್ಮಲ ಸುನೀಲ್ ಕುಮಾರ್, ರಮೇಶ್ ಡಿ.ಎಸ್, ರಮೇಶ್ ಕೆ.ಎನ್, ರಾಜೇಂದ್ರ ಕೆ.ವಿ, ವಿವಿಧ ಅಧಿಕಾರಿಗಳು ಪಾಲ್ಗೊಂಡಿದ್ದರು.

'ನೀರು ಸೋರಿಕೆ ಸ್ಥಳ ಪತ್ತೆಹಚ್ಚಿ, ದುರಸ್ತಿ ಮಾಡಿ'

ಜಿಬಿಎ ವ್ಯಾಪ್ತಿಯಲ್ಲಿ ನೀರು ಸೋರಿಕೆಯಾಗುವ ಸ್ಥಳಗಳನ್ನು ಗುರುತಿಸಿ, ದುರಸ್ತಿ ಕಾರ್ಯಗಳನ್ನು ಕೈಗೊಳ್ಳಬೇಕು ಎಂದು ಮುಖ್ಯ ಆಯುಕ್ತ ಮಹೇಶ್ವರ ರಾವ್ ಸೂಚನೆ ನೀಡಿದರು.

ಇಲಾಖೆವಾರು ಸಮನ್ವಯ ಸಾಧಿಸುವ ಉದ್ದೇಶದಿಂದ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ನಗರದ ರಸ್ತೆಗಳಲ್ಲಿ ನೀರು ಸೋರಿಕೆ, ಮ್ಯಾನ್‌ಹೋಲ್ ಚೇಂಬರ್‌ಗಳಿಂದ ನೀರು ಹೊರಬರುವ ಸ್ಥಳಗಳನ್ನು ಗುರುತಿಸಿ, ಆ ಪಟ್ಟಿಯನ್ನು ಜಲಮಂಡಳಿಗೆ ನೀಡಬೇಕು. ಜಲಮಂಡಳಿಯು 'ಮಾರ್ಕ್ಸ್' ತಂತ್ರಾಂಶದ ಮೂಲಕ ರಸ್ತೆ ಕತ್ತರಿಸಲು ಅನುಮತಿ ಪಡೆದು, ದುರಸ್ತಿಯನ್ನು ಕೈಗೊಳ್ಳಬೇಕು ಎಂದು ಹೇಳಿದರು.

ಮುಖ್ಯ ಆಯುಕ್ತರ ಸೂಚನೆಗಳು

- ಬೆಸ್ಕಾಂ ವತಿಯಿಂದ ನೆಲದಡಿ ಕೇಬಲ್‌ಗಳನ್ನು ಅಳವಡಿಸಿರುವ ಕಡೆಗಳಲ್ಲಿ ಬಳಕೆ ಇಲ್ಲದ ಕಂಬಗಳನ್ನು ತೆರವುಗೊಳಿಸಿ
- ಬಳ್ಳಾರಿ ರಸ್ತೆಯಲ್ಲಿ ನಡೆಯುತ್ತಿರುವ ಮೆಟ್ರೊ ನೀಲಿ ಮಾರ್ಗದ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿದ್ದು, ವೇಗ ನೀಡಿ
- ಅನುಪಯುಕ್ತ ವಾಹನಗಳನ್ನು ತೆರವುಗೊಳಿಸಲು ನಗರ ಪಾಲಿಕೆಗಳು ಟೋಯಿಂಗ್ ವಾಹನಗಳನ್ನು ಖರೀದಿಸಬೇಕು. ಟೋಯಿಂಗ್ ಮಾಡಿದ ವಾಹನಗಳನ್ನು ಇರಿಸಲು ಸ್ಥಳ ಗುರುತಿಸಿ
- ನಗರದಲ್ಲಿ ಸಂಚಾರ ದಟ್ಟಣೆಗೆ ಅಡಚಣೆ ಉಂಟುಮಾಡುವ ಬಸ್ ತಂಗುದಾಣಗಳನ್ನು ಸಂಚಾರ ಪೊಲೀಸರು ಗುರುತಿಸಿದ್ದಾರೆ. ಅವುಗಳನ್ನು ಸ್ಥಳಾಂತರಿಸಿ
- ಮಳೆಗಾಲದ ಸಮಯದಲ್ಲಿ ಹಾಳಾಗಿರುವ ರಸ್ತೆಗಳು, ಕೆರೆಗಳು, ರಾಜಕಾಲುವೆಗಳ ದುರಸ್ತಿ ಕಾರ್ಯಗಳಿಗಾಗಿ ವಿಪತ್ತು ನಿರ್ವಹಣೆಯಡಿ ₹200 ಕೋಟಿ ಮೀಸಲಿಡಲಾಗಿದೆ. ಪಾಲಿಕೆವಾರು ದುರಸ್ತಿ ಕಾರ್ಯಗಳ ಪಟ್ಟಿಯನ್ನು ತಯಾರಿಸಿ, ಕಾಮಗಾರಿ ಕೈಗೊಳ್ಳಿ

'ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಲ್ಲಿ ನವೋದ್ಯಮಗಳಿಗೆ ಅವಕಾಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸ್ಕರಿಸಿದ ನೀರಿನ ಸಂಶೋಧನೆ ಮತ್ತು ಮಾರುಕಟ್ಟೆ ವಿಸ್ತರಣೆಗಾಗಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಲ್ಲಿ ಕಾರ್ಯನಿರ್ವಹಿಸಲು ಬೆಂಗಳೂರು ಜಲಮಂಡಳಿಯು ನವೋದ್ಯಮಗಳಿಗೆ ಅವಕಾಶ ನೀಡಿದೆ.

ಈ ಯೋಜನೆಯ ಮೊದಲ ಭಾಗವಾಗಿ, ಕಾಡುಬೀಸನಹಳ್ಳಿ ತ್ಯಾಜ್ಯ ನೀರು ಶುದ್ಧೀಕರಣ ಘಟಕದಲ್ಲಿ ಕಾರ್ಯನಿರ್ವಹಿಸಲು ಬೋಸನ್ ವೈಟ್ ವಾಟರ್ ಸಂಸ್ಥೆಗೆ ಅನುಮತಿ ನೀಡಲಾಗಿದೆ. ಯೋಜನೆಯ ಮೂಲಕ ದಿನಕ್ಕೆ 70,000 ಲೀಟರ್‌ಗಳಷ್ಟು ಗುಣಮಟ್ಟದ ಸಂಸ್ಕರಿಸಿದ ನೀರು ಬಳಕೆಗೆ ಲಭ್ಯವಾಗಲಿದೆ.

'ನವೋದ್ಯಮಗಳಿಗೆ ಕೇವಲ ನೀರು ಒದಗಿಸುವುದಷ್ಟೇ ಅಲ್ಲದೆ, ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಇದೊಂದು ಸುವರ್ಣಾವಕಾಶ. ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯಡಿ ನಗರದ ನೀರಿನ ಸಮಸ್ಯೆಗಳಿಗೆ ಸ್ಥಳೀಯವಾಗಿಯೇ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಜಲಮಂಡಳಿ ಈ ಕ್ರಮ ಕೈಗೊಂಡಿದೆ' ಎಂದು ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಅವರು ತಿಳಿಸಿದ್ದಾರೆ.


ಬೆಂಗಳೂರು ನಗರ ಎದುರಿಸುತ್ತಿರುವ ನೀರಿನ ಸವಾಲುಗಳಿಗೆ ಸ್ಟಾರ್ಟ್‌ಅಪ್‌ಗಳ ಬಳಿ ಪರಿಹಾರವಿದೆ. ನೀರಿನ ಮರುಬಳಕೆ ಕ್ಷೇತ್ರ ಬಲಗೊಳ್ಳಲಿದೆ
ರಾಮಪ್ರಸಾತ್ ಮನೋಹರ್, ಅಧ್ಯಕ್ಷ ಬೆಂಗಳೂರು ಜಲಮಂಡಳಿ

'ಜಲಮಂಡಳಿಯು ಈ ಯೋಜನೆಯಡಿ ಯಾವುದೇ ಬಂಡವಾಳ ಹೂಡಿಕೆ ಮಾಡುವುದಿಲ್ಲ. ಬದಲಿಗೆ, ಬೋಸನ್ ಸಂಸ್ಥೆ ಸ್ವಂತ ವೆಚ್ಚದಲ್ಲಿ ಅಗತ್ಯವಿರುವ ಅತ್ಯಾಧುನಿಕ ಶುದ್ಧೀಕರಣ ಉಪಕರಣಗಳನ್ನು ಅಳವಡಿಸಲಿದೆ. ಜಲಮಂಡಳಿಯು ಕಚ್ಚಾ ವಸ್ತುವಾಗಿ ತ್ಯಾಜ್ಯ ನೀರನ್ನು ಸರಬರಾಜು ಮಾಡಲಿದ್ದು, ಸಂಸ್ಕರಿಸಿದ ನೀರನ್ನು ಮಾರಾಟ ಮಾಡಲು ಮಾರುಕಟ್ಟೆ ಸಂಪರ್ಕ ಒದಗಿಸಲು ಸಹಾಯ ಮಾಡಲಿದೆ' ಎಂದು ಹೇಳಿದ್ದಾರೆ.

ಯಶಸ್ಸಿಗೆ ಸಹಕರಿಸಿದವರಿಗೆ ಗೌರವ ಸಮರ್ಪಣೆ ಮಾಡಿದ ಸಚಿವ ರಾಮಲಿಂಗಾರೆಡ್ಡಿ

ಪರಿಷೆಯಲ್ಲಿ 12.50 ಲಕ್ಷ ಮಂದಿ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಪರಿಷೆ ಮತ್ತು ಕರಗಕ್ಕೆ ಜನ ಸೇರಿದಷ್ಟು ಬೇರೆ ಯಾವುದೇ ಧಾರ್ಮಿಕ ಕಾರ್ಯಕ್ರಮಗಳಿಗೆ ಸೇರುವುದಿಲ್ಲ. ಬಸವನಗುಡಿಯಲ್ಲಿ ಪ್ರತಿವರ್ಷ ಎರಡು ದಿನ ನಡೆಯುತ್ತಿದ್ದ ಕಡಲೆಕಾಯಿ ಪರಿಷೆಯನ್ನು ಈ ಬಾರಿ ಐದು ದಿನಕ್ಕೆ ವಿಸ್ತರಿಸಲಾಗಿತ್ತು. ಒಟ್ಟು 12.50 ಲಕ್ಷ ಜನರು ಭಾಗವಹಿಸಿದ್ದರು' ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಬಸವನಗುಡಿ ದೊಡ್ಡಬಸವೇಶ್ವರ ದೇಗುಲ ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕಡಲೆಕಾಯಿ ಪರಿಷೆಯ ಯಶಸ್ಸಿಗೆ ಕಾರಣರಾದ ವಿವಿಧ ಇಲಾಖೆಗಳ ಅಧಿಕಾರಿ ಹಾಗೂ ಸಿಬ್ಬಂದಿಗೆ ಗೌರವ ಸಮರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪರಿಷೆ ಹಾಗೂ ಕರಗ ಬೆಂಗಳೂರಿನ ಹೆಗ್ಗುರುತು. ಈ ಬಾರಿ ಪರಿಷೆಗೆ ಹೆಚ್ಚಿನ ಭಕ್ತರನ್ನು ಆಕರ್ಷಿಸಲು ದೀಪಾಲಂಕಾರ ಹಾಗೂ ಪುಷ್ಪಾಲಂಕಾರ ಮಾಡಲಾಗಿತ್ತು. ಇದು ಪರಿಷೆಗೆ ಬರುವವರ ಪ್ರಮಾಣವನ್ನು ಹೆಚ್ಚಿಸಿತು' ಎಂದು ವಿವರಿಸಿದರು.


ಕಡಲೆಕಾಯಿ ಪರಿಷೆಯ ಯಶಸ್ಸಿಗೆ ಸಹಕರಿಸಿದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಗೌರವ ಸಮರ್ಪಣೆ ಕಾರ್ಯಕ್ರಮದಲ್ಲಿ ರಾಮಲಿಂಗಾರೆಡ್ಡಿ ಅವರು ಪೌರಕಾರ್ಮಿಕರನ್ನು ಸನ್ಮಾನಿಸಿದರು ಪ್ರಜಾವಾಣಿ ಚಿತ್ರ

'ವ್ಯಾಪಾರಸ್ಥರಿಗೆ ಅನುಕೂಲ ಆಗುವಂತೆ ಕರ ವಸೂಲಿಯನ್ನು ಎರಡು ವರ್ಷದಿಂದ ರದ್ದುಪಡಿಸಲಾಗಿದೆ. ಪ್ಲಾಸ್ಟಿಕ್ ನಿರ್ಬಂಧಿಸಲಾಗಿತ್ತು. ಆದರೂ ಪ್ಲಾಸ್ಟಿಕ್ ಬಳಸಿದ ಅಂಗಡಿಗಳಿಗೆ ದಂಡ ವಿಧಿಸಿ, ಆ ಅಂಗಡಿಗಳ ತೆರವಿಗೆ ಅಧಿಕಾರಿಗಳು ಕ್ರಮಕೈಗೊಂಡಿದ್ದರು' ಎಂದರು.

ಪರಿಷೆ ಮುಗಿದ ಬಳಿಕ ಸ್ವಚ್ಛತಾ ಕಾರ್ಯ ಹಮ್ಮಿಕೊಂಡಾಗ 135 ಟನ್ ಒಣ ಮತ್ತು ಹಸಿ ಕಸ ಸಂಗ್ರಹವಾಗಿತ್ತು. ತ್ಯಾಜ್ಯ ವಿಲೇವಾರಿ ಮಾಡಲಾಗಿದೆ ಎಂದು ಹೇಳಿದರು.

ಬಿಎಂಎಸ್ ಕಾಲೇಜಿನ ಗುತ್ತಿಗೆ ಅವಧಿ ಮುಗಿದಿತ್ತು. ಈಗ ಗುತ್ತಿಗೆ ನವೀಕರಣಗೊಂಡಿದ್ದು ಇನ್ನು ಮುಂದೆ ದೇವಸ್ಥಾನಕ್ಕೆ ಪ್ರತಿ ವರ್ಷ ₹4ರಿಂದ ₹5 ಕೋಟಿ ಆದಾಯ ಬರಲಿದೆ ಎಂದು ತಿಳಿಸಿದರು.

'ಪರಿಷೆಗಾಗಿ 800 ಪೊಲೀಸರು ಕರ್ತವ್ಯ ನಿರ್ವಹಿಸಿದ್ದಾರೆ. ಜತೆಗೆ ಸ್ವಯಂಸೇವಾ ಸಂಘಟನೆಗಳು ಭಾಗವಹಿಸಿ ಪ್ಲಾಸ್ಟಿಕ್ ಬಗ್ಗೆ ಜಾಗೃತಿ ಮೂಡಿಸಿವೆ. ಮುಂದಿನ ವರ್ಷ ದಾಖಲೆಯ ಪ್ರಮಾಣದಲ್ಲಿ ಭಕ್ತರು ಬರುವಂತೆ ನೋಡಿಕೊಳ್ಳಬೇಕಿದೆ' ಎಂದರು.

ಎಐಸಿಸಿ ಕಾರ್ಯದರ್ಶಿ ಯು.ಬಿ. ವೆಂಕಟೇಶ್ ಮಾತನಾಡಿ, 'ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ಈ ಬಾರಿಯ ಪರಿಷೆ ಬಹಳ ವ್ಯವಸ್ಥಿತವಾಗಿ ಹಾಗೂ ಅಚ್ಚುಕಟ್ಟಾಗಿ ಜರುಗಿತು. ಮೂರೂವರೆ ಸಾವಿರ ವ್ಯಾಪಾರಸ್ಥರು ಮಳಿಗೆಗಳನ್ನು ಹಾಕಿದ್ದರು' ಎಂದು ಹೇಳಿದರು.

ಮುಜರಾಯಿ ಇಲಾಖೆಯ ಆಯುಕ್ತ ಶರತ್, ಡಿಸಿಪಿ ಲೋಕೇಶ್ ಬಿ. ಜಗಲಾಸರ್, ಎಸಿಪಿ ಮಂಜುನಾಥ, ಉಮಾಶಂಕರ, ಪಶ್ಚಿಮ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಕೆ.ವಿ., ಎಇಇ ಶಶಿಕಲಾ, ಲೋಹಿತ್, ಸಚಿನ್ ಪಾಟೀಲ, ದೇವಸ್ಥಾನ ಸಿಬ್ಬಂದಿ ಭಾಗವಹಿಸಿದ್ದರು.

ಕರಗಕ್ಕೆ ತಯಾರಿ..

'ಬೆಂಗಳೂರು ಕರಗ 2026ರ ಏಪ್ರಿಲ್ ತಿಂಗಳಲ್ಲಿ ನಡೆಯಬಹುದು. ಆದ್ದರಿಂದ ಜನವರಿ ತಿಂಗಳಿಂದಲೇ ಕರಗದ ರೂಪುರೇಷೆ ತಯಾರಿಸಲಾಗುವುದು' ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

'ಕಳೆದ ಬಾರಿ ಸಾಲು ಸಾಲು ರಜೆಗಳು ಬಂದಿದ್ದರಿಂದ ಹಣ ಬಿಡುಗಡೆಯಲ್ಲಿ ಅನನುಕೂಲವಾಗಿತ್ತು. ಈ ಬಾರಿ ಮುಂಚಿತವಾಗಿಯೇ ಹಣ ಬಿಡುಗಡೆ ಮಾಡಲಾಗುವುದು. ಕರಗಕ್ಕೆ ಬೇರೆ ರಾಜ್ಯದ ಜನರೂ ಬರುವಂತೆ ಮಾಡಲು ಯೋಜನೆ ರೂಪಿಸಲಾಗುವುದು. ಈ ಬಾರಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುವುದು' ಎಂದರು.

ಯಲಹಂಕ: ದಾಖಲೆ ಬರೆದ 'ವಿಜಯ ಜ್ಯೋತಿ ಗಾನ ವೈಭವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ತಾಲ್ಲೂಕಿನ ಜಾಲ ಹೋಬಳಿಯ ಬಾಗಲೂರಿನ ವಿಜಯ ಜ್ಯೋತಿ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ 70ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ 'ವಿಜಯ ಜ್ಯೋತಿ ಗಾನ ವೈಭವ' ಸಮೂಹ ಗಾಯನವು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಹಾಗೂ ಏಷ್ಯಾ ಬುಕ್ ಆಫ್ ರೆಕಾರ್ಡ್ಸ್ ಮಾನ್ಯತೆ ಪಡೆಯಿತು.

ಸಮೂಹ ಗಾಯನದಲ್ಲಿ ಒಂದೇ ಶಿಕ್ಷಣ ಸಂಸ್ಥೆಯ 1,166 ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ವಾದ್ಯವೃಂದದೊಂದಿಗೆ 11 ಕನ್ನಡ ಗೀತೆಗಳನ್ನು ಒಟ್ಟಿಗೆ ಪ್ರಸ್ತುತಪಡಿಸಿದರು.

ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ರಾಮಚಂದ್ರ ಮಾತನಾಡಿ, 'ಇಂತಹ ಐತಿಹಾಸಿಕ ಕಾರ್ಯಕ್ರಮವನ್ನು ವಿಜಯ ಜ್ಯೋತಿ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ನಡೆಸಿರುವುದು ಶ್ಲಾಘನೀಯ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯ ಗೌರವ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಮಂಡ್ಯ ವಿಶ್ವವಿದ್ಯಾಲಯದ ಕುಲಪತಿ ಶಿವ ಚಿತ್ತಪ್ಪ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ವೆಂಕಟೇಶ್, ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಮತ್ತು ಏಷ್ಯಾ ಬುಕ್ ಆಫ್ ರೆಕಾರ್ಡ್ಸ್ ತೀರ್ಪುಗಾರ ಹರೀಶ್, ಉಪನ್ಯಾಸಕಿ ಕವಿತಾ ಮಧುಕುಮಾರ್, ವಿಜಯ ಜ್ಯೋತಿ ಸಂಯುಕ್ತ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಮಧುಕುಮಾರ್, ಇತಿಹಾಸ ಉಪನ್ಯಾಸಕ ಆನಂದ್ ಕುಮಾರ್ ಭಾಗವಹಿಸಿದ್ದರು.


'ವಿಜಯಜ್ಯೋತಿ ಗಾನ ವೈಭವ'ವು ಏಷ್ಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದ್ದು, ಅದರ ಪ್ರಮಾಣಪತ್ರವನ್ನು ಹಸ್ತಾಂತರಿಸಲಾಯಿತು. ವೂಡೇ ಪಿ. ಕೃಷ್ಣ, ಶಿವ ಚಿತ್ತಪ್ಪ, ಹರೀಶ್, ರಾಮಚಂದ್ರ ಉಪಸ್ಥಿತರಿದ್ದರು

ಬೆಂಗಳೂರು ಚಲೋ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲಾ ಜಿಲ್ಲೆ, ತಾಲ್ಲೂಕು ಹಾಗೂ ಮಹಾನಗರ ಪಾಲಿಕೆಗಳಲ್ಲಿ ಕಾರ್ಮಿಕ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ನ.26ರಂದು ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಅಸುರಕ್ಷಿತ ಕಾರ್ಮಿಕ ಐಕ್ಯ ಆಂದೋಲನ ತಿಳಿಸಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಂದೋಲನದ ಪದಾಧಿಕಾರಿ ಗಳಾದ ಸುಷ್ಮಾ ವರ್ಮಾ, ಕಿರಣ್ ಕಮಲ್ ಪ್ರಸಾದ್, ಗುರುರಾಜು, ಕಲೀಮುಲ್ಲಾ, ಸಮೀರ್ ಮಿಂಚ್, 'ಅಸಂಘಟಿತ ಕಾರ್ಮಿಕರಿಗೆ ಪ್ರತ್ಯೇಕ ಸಾಮಾಜಿಕ ಭದ್ರತಾ ಮಂಡಳಿ ಸ್ಥಾಪಿಸಬೇಕು. ಕೆಲಸದ ಅವಧಿ ಎಂಟು ಗಂಟೆ ನಿಗದಿಪಡಿಸಬೇಕು. ಹೆಚ್ಚುವರಿ ಕೆಲಸ ಮಾಡಿದರೆ ಹೆಚ್ಚು ವೇತನ ನೀಡಬೇಕು' ಎಂದು ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು.

'ಅಸಂಘಟಿತ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನಿಗದಿಪಡಿಸಿ, ಅನುಷ್ಠಾನಗೊಳಿಸಬೇಕು. ನರೇಗಾ ಯೋಜನೆಯಡಿ ಹಿಂದುಳಿದ ಎಲ್ಲಾ ತಾಲ್ಲೂಕುಗಳಲ್ಲಿ ವರ್ಷಕ್ಕೆ 200 ದಿನಗಳವರೆಗೆ ಕೆಲಸ ನೀಡಬೇಕು. ಕಾರ್ಮಿಕರನ್ನು ಜೀತಗಾರರಂತೆ ನಡೆಸಿಕೊಳ್ಳುತ್ತಿರುವ ಹೀನ ಪದ್ಧತಿಗೆ ಕಡಿವಾಣ ಹಾಕಬೇಕು. ಮಾಜಿ ಜೀತಗಾರರ ಪುನರ್ವಸತಿ ಯೋಜನೆ ತ್ವರಿತವಾಗಿ ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.

'ಅಂತರ ರಾಜ್ಯ ವಲಸೆ ಕಾರ್ಮಿಕರ ಕಾಯ್ದೆಯಡಿ ಎಲ್ಲಾ ವಲಸೆ ಕಾರ್ಮಿಕರ ನೋಂದಣಿಗೆ ಕ್ರಮ ಕೈಗೊಳ್ಳಬೇಕು. ಅವರ ಮಕ್ಕಳಿಗೆ ಶಿಕ್ಷಣ, ಆರೋಗ್ಯ ಹಾಗೂ ವಸತಿ ಸೌಲಭ್ಯಗಳನ್ನು ಖಾತರಿಪಡಿಸ ಬೇಕು. ಅಂಗನವಾಡಿ, ಬಿಸಿಯೂಟ ಹಾಗೂ ಆಶಾ ಕಾರ್ಯಕರ್ತೆಯರನ್ನು ಕಾರ್ಮಿಕರೆಂದು ಪರಿಗಣಿಸಬೇಕು' ಎಂದು ಆಗ್ರಹಿಸಿದರು.

ಅಂತರರಾಷ್ಟ್ರೀಯ ಸಮ್ಮೇಳನ 27ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ 'ಭಾಷೆ, ಸಂಸ್ಕೃತಿ ಮತ್ತು ಜಾಗತಿಕ ಶಾಂತಿ: ಶಾಂತಿಯುತ ಜಗತ್ತಿಗಾಗಿ ಸಂವಾದ' ಅಂತರ ರಾಷ್ಟ್ರೀಯ ಸಮ್ಮೇಳನ ನ.27 ಮತ್ತು 28ರಂದು ನಡೆಯಲಿದೆ.

ಇವೆಲ್ಯೂ, ಇಂಡಿಯನ್ ಫ್ರೆಂಚ್ ಪ್ರೊಫೆಷನಲ್ಸ್ ಆ್ಯಂಡ್ ರಿಸರ್ಚರ್ಸ್ ಅಸೋಸಿಯೇಷನ್, ಹೋಕ್ಕೈಡೋ ಯುನಿವರ್ಸಿಟಿ ಆಫ್ ಎಡ್ಯುಕೇಷನ್ (ಜಪಾನ್), ಯುನಿವರ್ಸಿಟಿ ಆಫ್ ವೊಲ್ವರ್‌ಹ್ಯಾಂಪ್ಟನ್ (ಯುಕೆ), ಇನ್‌ಸ್ಟಿಟ್ಯೂಟ್ ಫ್ರಾನ್ಸೆ, ಅಸೋಸಿಯೇಷನ್ ಆಫ್ ಟೀಚರ್ಸ್ ಆಫ್ ಯುರೋಪಿಯನ್ ಲ್ಯಾಂಗ್ವೇಜಸ್ ಇನ್ ಇಂಡಿಯಾ, ಲಾಂಗರ್ಸ್ ಮತ್ತು ದಲೈ ಲಾಮಾ ಇನ್‌ಸ್ಟಿಟ್ಯೂಟ್ ಫಾರ್ ಹೈಯರ್ ಎಜುಕೇಶನ್ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಕೇಂದ್ರ ಮತ್ತು ಐಕ್ಯುಎಸಿ ಆಯೋಜಿಸುತ್ತಿದೆ.

ಭಾಷೆ, ಸಂಸ್ಕೃತಿ ಮತ್ತು ಶಾಂತಿ ನಡುವಿನ ಸಂಬಂಧಗಳ ಹಲವು ಆಯಾಮಗಳನ್ನು ಸಮ್ಮೇಳನದಲ್ಲಿ ಚರ್ಚಿಸಲಾಗುತ್ತದೆ. ಜಾಗತಿಕ ಮಟ್ಟದಲ್ಲಿ ಅರಿವು, ಪರಸ್ಪರ ಗೌರವ ಮತ್ತು ಸಹಕಾರವನ್ನು ಹೆಚ್ಚಿಸುವಲ್ಲಿ ಭಾಷಾ ಹಾಗೂ ಸಾಂಸ್ಕೃತಿಕ ವೈವಿಧ್ಯದ ಮಹತ್ವವನ್ನು ಎತ್ತಿಹಿಡಿಯುವುದು ಈ ಸಮ್ಮೇಳನದ ಮುಖ್ಯ ಗುರಿ. ಜಾಗತಿಕ ಮಟ್ಟದ ಸಂಶೋಧಕರು, ಶಿಕ್ಷಕರು, ಶಾಂತಿ ಕಾರ್ಯಕರ್ತರು ಮತ್ತು ಭಾಷಾ ತಜ್ಞರು ಭಾಗವಹಿಸಲಿದ್ದಾರೆ. ಪ್ರಮುಖ ಭಾಷಣಗಳು, ಸಂಶೋಧನಾ ಲೇಖನಗಳ ಪ್ರಸ್ತುತಿ, ಪ್ಯಾನಲ್ ಚರ್ಚೆಗಳು ಹಾಗೂ ಕಾರ್ಯಾಗಾರಗಳು ನಡೆಯಲಿವೆ.

ಸಮ್ಮೇಳನದ ಪ್ರಮುಖ ವಿಷಯಗಳು: ಶಾಂತಿ ಸ್ಥಾಪನೆಯ ಸಾಧನವಾಗಿ ಭಾಷೆ, ಸಂಘರ್ಷ ಪ್ರದೇಶಗಳಲ್ಲಿ ಸಾಂಸ್ಕೃತಿಕ ಪಾಠಶಿಕ್ಷಣ, ಭಾಷಾ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯ, ಬಹುಭಾಷಿತ್ವ ಮತ್ತು ಜಾಗತಿಕ ಆಡಳಿತದಲ್ಲಿ ಅದರ ಪಾತ್ರ ಇವುಗಳ ಬಗ್ಗೆ ಸಮ್ಮೇಳನದಲ್ಲಿ ಚರ್ಚಿಸಲಾಗುತ್ತದೆ ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಕೇಂದ್ರದ ನಿರ್ದೇಶಕಿ ಜ್ಯೋತಿ ವೆಂಕಟೇಶ್ ತಿಳಿಸಿದ್ದಾರೆ.

ನಗರದಲ್ಲಿ ಇಂದು



ಕರ್ನಾಟಕ ರಾಜ್ಯೋತ್ಸವ, ಉಚಿತ ಆರೋಗ್ಯ ತಪಾಸಣಾ ಶಿಬಿರ: ಉದ್ಘಾಟನೆ: ದಿನೇಶ್ ಗುಂಡೂರಾವ್, ಎಸ್. ಟಿ. ಸೋಮಶೇಖರ್, ಅತಿಥಿಗಳು: ಟಿ.ಎನ್. ಜವರಾಯಿಗೌಡ, ಅಧ್ಯಕ್ಷತೆ: ಎಚ್‌.ಎಸ್. ಸುಧೀಂದ್ರಕುಮಾರ್, ಆಯೋಜನೆ: ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶ್ರೀ ಗುರುರಾಜ ಸಭಾ ಭವನ, ರಾಘವೇಂದ್ರಸ್ವಾಮಿ ಮಠದ ಪಕ್ಕ, ಕೆಂಗೇರಿ ಉಪನಗರ, ಬೆಳಿಗ್ಗೆ 9.30ರಿಂದ


ಮಕ್ಕಳ ವಚನ ಮೇಳ: ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

'ಸಂಕಲ್ಪ' ಪದವಿ ಪ್ರದಾನ: ಡಾ. ಶರಣಪ್ರಕಾಶ ಪಾಟೀಲ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆ, ಬೆಳಿಗ್ಗೆ 10.30

ಮಕ್ಕಳ ಸುರಕ್ಷತೆ ಕುರಿತು ಸಂವಾದ: ಅತಿಥಿಗಳು: ಚೈತ್ರಾ, ಎಸ್. ಶಿವರತ್ನಾ, ನಾಗಸಿಂಹ ಜಿ. ರಾವ್, ಟಿ.ಆರ್. ಗೀತಾ ಮಾಲಾ, ಎನ್. ಜಗದೀಶ, ಆಯೋಜನೆ: ಬೆಂಗಳೂರು ನಗರ ಪೊಲೀಸ್, ಪರಿಹಾರ್, ಸ್ಥಳ: ಕಮ್ಯಾಂಡ್ ಸೆಂಟರ್, ಅಲಿ ಅಸ್ಕರ್ ರಸ್ತೆ, ಬೆಳಿಗ್ಗೆ 11

'ರಕ್ತರಾತ್ರಿ' ಪೌರಾಣಿಕ ನಾಟಕ ಪ್ರದರ್ಶನ: ಆಯೋಜನೆ: ಅರುಣೋದಯ ಕಲಾಬಳಗ ಟ್ರಸ್ಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2

ರಾಷ್ಟ್ರಕವಿ ಕುವೆಂಪು ಅವರ ಐದು ದಿನಗಳ ರಾಜ್ಯಮಟ್ಟದ ನಾಟಕೋತ್ಸವ: 'ಸ್ವಪ್ನಸಿದ್ಧಿ' ನಾಟಕ ಪ್ರದರ್ಶನ: ಅಮರೇಶ್ವರ ವಿಜಯ ನಾಟಕ ಮಂಡಳಿ, ಸ್ಥಳ: ಎಚ್. ತಿಮ್ಮೇಗೌಡ ಸಭಾಂಗಣ, ವಿದ್ಯಾ ನಿಕೇತನ ಪಬ್ಲಿಕ್ ಶಾಲೆ, ಸುಂಕದ ಕಟ್ಟೆ, ಮಧ್ಯಾಹ್ನ 1.30



'ಭಾಗವತ ದಶಮ ಸ್ಕಂದ' ಧಾರ್ಮಿಕ ಪ್ರವಚನ: ಪಿ.ಆರ್. ಆನಂದತೀರ್ಥಾಚಾರ್ಯ, ಭಜನೆ: ಲಕ್ಷ್ಮಿ ವೆಂಕಟೇಶ್ವರ ಭಜನಾ ಮಂಡಳಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ರಾಧಾಕೃಷ್ಣ ದೇವಸ್ಥಾನ, ಸಂಜಯನಗರ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

‘ಬಸ್ ಆದ್ಯತಾ ಪಥ’ಕ್ಕೆ ಸದ್ಯಕ್ಕಿಲ್ಲ ಆದ್ಯತೆ

ಹೊರವರ್ತುಲ ರಸ್ತೆಯಲ್ಲಿ ಕಡಿಮೆಯಾಗದ ಸಂಚಾರ ದಟ್ಟಣೆ • ತಪ್ಪದ ಬವಣೆ

• ಬಾಲಕೃಷ್ಣಪಿ.ಎಚ್.

ಬೆಂಗಳೂರು: ಹೊರವರ್ತುಲ ರಸ್ತೆಯಲ್ಲಿ ಮೂರು ವರ್ಷಗಳ ಹಿಂದೆ ಸ್ಥಗಿತ ಗೊಂಡಿರುವ ಬಸ್ ಆದ್ಯತಾ ಪಥವನ್ನು ಮತ್ತೆ ಆರಂಭಿಸಲು ಬಿಎಂಟಿಸಿ ಚಿಂತನೆ ನಡೆಸಿದ್ದರೂ ಸದ್ಯಕ್ಕೆ ಕಾರ್ಯರೂಪಕ್ಕೆ ಬರುವ ಲಕ್ಷಣಗಳು ಕಾಣುತ್ತಿಲ್ಲ. ಆದ್ಯತಾ ಪಥಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಕ್ರಿಯೆಗಳು ಆರಂಭವಾಗಿಲ್ಲ.

ಹೊರವರ್ತುಲ ರಸ್ತೆಯಲ್ಲಿ ಬಿಎಂಟಿಸಿಯ 300ಕ್ಕೂ ಅಧಿಕ ಬಸ್‌ಗಳು ಪ್ರತಿದಿನ 3,300ಕ್ಕೂ ಅಧಿಕ ಬಾರಿ ಸಂಚರಿಸುತ್ತಿವೆ. ಅರ್ಧದಷ್ಟು ಹವಾನಿಯಂತ್ರಿತ ಬಸ್‌ಗಳಾಗಿವೆ. ಅಧಿಕ ವಾಹನದಟ್ಟಣೆಯಿಂದ ಸಂಚಾರವು ನಿಧಾನವಾಗಿದ್ದು ಹೆಚ್ಚು ಇಂಧನ ಖರ್ಚಾಗುತ್ತಿದೆ. 2019ರ ನವೆಂಬರ್‌ನಲ್ಲಿ ಇದೇ ರಸ್ತೆಯಲ್ಲಿ ಕೆ.ಆರ್.ಪುರ ಮತ್ತು ಕೇಂದ್ರ ರೇಷ್ಮೆ ಮಂಡಳಿ ನಡುವೆ 17 ಕಿ.ಮೀ. ಆದ್ಯತಾ ಪಥ ಆರಂಭಿಸಲಾಗಿತ್ತು. ಆಗ ಬಸ್‌ಗಳು 15 ನಿಮಿಷ ಬೇಗ ತಲುಪುತ್ತಿದ್ದವು. ಇಂಧನವೂ ಉಳಿತಾಯವಾಗುತ್ತಿತ್ತು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನಮ್ಮ ಮೆಟ್ರೊ ನೀಲಿ ಮಾರ್ಗದ ಕಾಮಗಾರಿಗಾಗಿ 2022ರಲ್ಲಿ ಬಸ್ ಆದ್ಯತಾ ಪಥ ಸ್ಥಗಿತಗೊಳಿಸಲಾಯಿತು. ಈಗ, ಮೆಟ್ರೊ ನೀಲಿ ಮಾರ್ಗದ ಕಾಮಗಾರಿ ಪೂರ್ಣಗೊಂಡಿದೆ. ನಿಲ್ದಾಣಗಳು ಪೂರ್ಣಗೊಳ್ಳುವ ಹಂತಕ್ಕೆ ಬಂದಿವೆ. ಆದರೂ ಆದ್ಯತಾ ಪಥಕ್ಕೆ ಆದ್ಯತೆ ಸಿಕ್ಕಿಲ್ಲ.

17 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆ (ಒಆರ್‌ಆರ್) ಮತ್ತು ಸರ್ಜಾಪುರ ರಸ್ತೆಯ ಉದ್ದಕ್ಕೂ ‘ಗಾತ್ರ-ಸಾಮರ್ಥ್ಯ’ ಅನುಪಾತವು (ವಿ-ಸಿ) ರಸ್ತೆ ಸಾಮರ್ಥ್ಯಕ್ಕಿಂತ ಎರಡು–ಮೂರು ಪಟ್ಟು ಹೆಚ್ಚಾಗಿದೆ ಎಂಬುದನ್ನು ಬೆಂಗಳೂರು ಸಂಚಾರ ಪೊಲೀಸರು (ಬಿಟಿಪಿ) ನಡೆಸಿದ ಇತ್ತೀಚಿನ ಅಧ್ಯಯನವು ಬಹಿರಂಗಪಡಿಸಿದೆ. ಈ ರಸ್ತೆಯಲ್ಲಿ ವಾಹನ ದಟ್ಟಣೆ ಕಡಿಮೆಯಾಗಬೇಕಿದ್ದರೆ ಐಟಿ ಪಾರ್ಕ್ ಮತ್ತು ಇತರ ಖಾಸಗಿ ಕಂಪನಿಗಳ ಉದ್ಯೋಗಿಗಳು ಬಿಎಂಟಿಸಿ ಬಸ್‌ನಂಥ ಸಾರ್ವಜನಿಕ ಸಾರಿಗೆ ಕಡೆಗೆ ಮುಖ ಮಾಡಬೇಕು. ರಸ್ತೆಯಲ್ಲೇ ಸಮಯ ಕಳೆದು ಹೋಗುವುದನ್ನು ತಪ್ಪಿಸಬೇಕಿದ್ದರೆ ಬಸ್‌ಗಳಿಗೆ ಪ್ರತ್ಯೇಕ ಪಥ ಮಾಡಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮುಖ್ಯಾಂಶಗಳು

- ಒಆರ್‌ಆರ್‌ನಲ್ಲಿ ಬಿಎಂಟಿಸಿಯ 300 ಬಸ್‌ಗಳ ಸಂಚಾರ
- ಕೆ.ಆರ್.ಪುರ, ಸಿಲ್ಕ್ ಬೋರ್ಡ್ ನಡುವೆ 17 ಕಿ.ಮೀ. ಆದ್ಯತಾ ಪಥ



ಮೂರು ವರ್ಷಗಳ ಹಿಂದೆ ಇದ್ದ ಆದ್ಯತಾ ಪಥ

‘ಬಸ್‌ಗಳಿಗೆ ಪ್ರತ್ಯೇಕ ಪಥ ಅಗತ್ಯ’

ಹೊರ ವರ್ತುಲ ರಸ್ತೆಯಲ್ಲಿ ವಾಹನದಟ್ಟಣೆಯಲ್ಲಿ ಸಿಲುಕಿಕೊಳ್ಳುವುದನ್ನು ತಪ್ಪಿಸಲು ಹೆಚ್ಚು ಆಯ್ಕೆಗಳಿಲ್ಲ. ಮೆಟ್ರೊದಲ್ಲಿ ಸಂಚರಿಸುವುದು, ಬಸ್‌ಗಳಿಗೆ ಪ್ರತ್ಯೇಕ ಪಥ ನಿರ್ಮಿಸುವುದು ಎರಡೇ ಪರಿಹಾರ. ಮೆಟ್ರೊ ನೀಲಿ ಮಾರ್ಗದಲ್ಲಿ ರೈಲು ಸಂಚರಿಸಲು ಇನ್ನೂ ಒಂದೂವರೆ ವರ್ಷ ಬೇಕಾಗುತ್ತದೆ. ಕೆ.ಆರ್.ಪುರದಲ್ಲಿ ನೇರಳೆ ಮೆಟ್ರೊ, ಸೆಂಟ್ರಲ್ ಸಿಲ್ಕ್ ಬೋರ್ಡ್‌ನಲ್ಲಿ ಹಳದಿ ಮೆಟ್ರೊ ಈಗಾಗಲೇ ಇದೆ. ಬಸ್ ಆದ್ಯತಾ ಪಥ ಇದ್ದರೆ ಉದ್ಯೋಗಿಗಳು, ಸಾರ್ವಜನಿಕರು ಮೆಟ್ರೊದಲ್ಲಿ ಬಂದು ಬಸ್‌ಗಳಲ್ಲಿ ಸಂಚರಿಸಲಿದ್ದಾರೆ ಎಂದು ನಾಗರಿಕ ಕಾರ್ಯಕರ್ತ ಶ್ರೀನಿವಾಸ ಅಲವಿಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಸುಮಾರು 30 ಕಾರುಗಳಲ್ಲಿ ಸಂಚರಿಸುವವರು ಒಂದೇ ಬಸ್‌ನಲ್ಲಿ ಪ್ರಯಾಣಿಸಲು ಸಾಧ್ಯ. ಆಗ ರಸ್ತೆಯಲ್ಲಿ ವಾಹನಗಳ ಸಂಖ್ಯೆ ಕಡಿಮೆಯಾಗುತ್ತದೆ. ಬಸ್ ಆದ್ಯತಾ ಪಥ ಮಾಡಿದರೆ ಸಾರ್ವಜನಿಕ ಸಾರಿಗೆ ಬಳಸುವವರ ಸಂಖ್ಯೆ ಶೇ 15ರಿಂದ 20ರಷ್ಟು ಹೆಚ್ಚಾಗಲಿದೆ ಎಂದು ತಿಳಿಸಿದರು.

ಬಸ್‌ಗಳಿಗೆ ಪ್ರತ್ಯೇಕ ಪಥ ಮಾಡಬೇಕು. ಈ ಆದ್ಯತಾ ಪಥದಲ್ಲಿ ಖಾಸಗಿ ವಾಹನಗಳು ಸಂಚರಿಸದಂತೆ ಕಟ್ಟುನಿಟ್ಟಾಗಿ ನಿಯಮ ಜಾರಿ ಮಾಡಬೇಕು. ವಿಮಾನ ನಿಲ್ದಾಣಕ್ಕೆ ಉತ್ತಮ ವೋಲ್ವೊ ಬಸ್‌ಗಳು ಸಂಚರಿಸುತ್ತಿವೆ. ಟೆಕ್ ಪಾರ್ಕ್‌ಗಳ ಕಡೆಗೂ ಇಂಥದ್ದೇ ಬಸ್‌ಗಳನ್ನು ನಿಯೋಜಿಸಬೇಕು. ಆಗ ವಾಹನ ದಟ್ಟಣೆ ಕಡಿಮೆ ಆಗಲಿದೆ ಎಂಬುದು ಖಾಸಗಿ ಕಂಪನಿ ಉದ್ಯೋಗಿ ಎನ್. ರೋಶನ್ ಅವರ ಅಭಿಪ್ರಾಯ.

‘ಹೊರವರ್ತುಲ ರಸ್ತೆಯಲ್ಲಿ ಬಸ್ ಆದ್ಯತಾ ಪಥ ಹೇಗೆ ನಿರ್ವಹಿಸುವುದು ಎಂದು ಬಿಎಂಆರ್‌ಸಿಎಲ್, ಬಿಬಿಎಂಪಿ, ಡಲ್ಟ್, ಬೆಂಗಳೂರು ಸಂಚಾರ ಪೊಲೀಸ್ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ಮಾತುಕತೆ ನಡೆಸಲು ಕೆಲವು ತಿಂಗಳ ಹಿಂದೆ ಬಿಎಂಟಿಸಿ ಪತ್ರ ವ್ಯವಹಾರ ನಡೆಸಿತ್ತು. ಬೇರೆ ಯೋಜನೆಗಳಿಂದಾಗಿ ಕನಿಷ್ಠ ಒಂದು ವರ್ಷ ಆದ್ಯತಾ ಪಥ ನಿರ್ಮಾಣ ಕಷ್ಟ ಎಂಬ ಮಾಹಿತಿ ಬಂದಿದ್ದರಿಂದ ಮಾತುಕತೆ ಪ್ರಕ್ರಿಯೆ ಮುಂದುವರಿಯಲಿಲ್ಲ’ ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಸ್ವಲ್ಪ ಸಮಯ ಹಿಡಿಯಲಿದೆ

‘ಹೊರ ವರ್ತುಲ ರಸ್ತೆಯಲ್ಲಿ ಬಸ್ ಆದ್ಯತಾ ಪಥ ಅಗತ್ಯವಿದೆ. ಆದರೆ, ಇಲ್ಲಿ ವಿಶ್ವದರ್ಜೆಯ ರಸ್ತೆಯನ್ನು ನಿರ್ಮಿಸುವ ಯೋಜನೆಯನ್ನು ಜಿಬಿಎ ಹಾಕಿಕೊಂಡಿದೆ ಎಂಬ ಮಾಹಿತಿ ಬಂದಿದೆ. ಈ ಯೋಜನೆ ಜಾರಿಯಾಗುವಾಗ ಆದ್ಯತಾ ಪಥವೂ ಇರಲಿದೆ. ಇದಕ್ಕಾಗಿ ಸ್ವಲ್ಪ ಸಮಯ ಹಿಡಿಯಲಿದೆ’ ಎಂದು ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ಜಿ.ಟಿ. ಪ್ರಭಾಕರ ರೆಡ್ಡಿ ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

‘ನವೀ ಚೇತನಾ 4.0’: ರಾಜ್ಯದ ಐವರು ಮಹಿಳೆಯರು

ಮಂಗಳೂರು: ನವದೆಹಲಿಯಲ್ಲಿ ನ.25ರಿಂದ ಆರಂಭವಾಗಲಿರುವ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಸಂಜೀವಿನಿ ಯೋಜನೆಯ ನವೀ ಚೇತನಾ 4.0 ಅಭಿಯಾನದಲ್ಲಿ ರಾಜ್ಯದ ಐವರು ಮಹಿಳೆಯರು ಭಾಗವಹಿಸಲಿದ್ದಾರೆ. ಲಿಂಗತ್ವ ಸಮುದಾಯ ಕ್ಷೇತ್ರದಲ್ಲಿ ಕೆಲಸ ಮಾಡಿರುವ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಸೌಮ್ಯಾ ಹೊಸಂಗಡಿ, ಹಾವೇರಿಯ ಪ್ರೀತಿ ಕೆ.ಆರ್, ತುಮಕೂರಿನ ಸ್ವರೂಪ ಎಂ.ಡಿ, ಯಾದಗಿರಿಯ ರಾಜೇಶ್ವರಿ ಹಾಗೂ ಶ್ರೀದೇವಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದು, ಸೋಮವಾರ ನವದೆಹಲಿಗೆ ತೆರಳಿದ್ದಾರೆ. ನ.25ರಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅಭಿಯಾನ ಉದ್ಘಾಟಿಸುವರು. ಇದೇ ವೇದಿಕೆಯಲ್ಲಿ ಕರ್ನಾಟಕದ ಪ್ರತಿನಿಧಿಗಳ ಪರವಾಗಿ ಸೌಮ್ಯಾ ಹೊಸಂಗಡಿ ತಮ್ಮ ಅಭಿಪ್ರಾಯ ಮಂಡಿಸಲಿದ್ದಾರೆ. ‘ಮಹಿಳೆಯರ ಆರ್ಥಿಕ ಸಬಲೀಕರಣದ ಮೂಲಕ ಲಿಂಗಾಧಾರಿತ ಭೇದ ಭಾವ ಮತ್ತು ಹಿಂಸಾಚಾರ ನಿವಾರಣೆ’ ಈ ವರ್ಷದ ಧ್ಯೇಯವಾಕ್ಯವಾಗಿದೆ. ಡಿ.23ರವರೆಗೆ ಅಭಿಯಾನ ನಡೆಯಲಿದೆ.


ಸೌಮ್ಯಾ

ಸುದ್ದಿ 2 ನಿಮಿಷ

ಅಗ್ನಿ ಅವಘಡ: ಇಬ್ಬರ ರಕ್ಷಣೆ

ಬೆಂಗಳೂರು: ಜಯನಗರ 4ನೇ ಬ್ಲಾಕ್‌ನಲ್ಲಿರುವ ಪಾಲಿಕೆ ವಾಣಿಜ್ಯ ಸಂಕೀರ್ಣದ 1 ಮತ್ತು 2ನೇ ಮಹಡಿಯಲ್ಲಿ ಅಗ್ನಿ ಅವಘಡದ ವೇಳೆ ಲಿಫ್ಟ್ ಒಳಗೆ ಸಿಲುಕಿದ್ದ ಇಬ್ಬರನ್ನು ಅಗ್ನಿಶಾಮಕ ಸಿಬ್ಬಂದಿ ರಕ್ಷಿಸಿದ್ದಾರೆ.

ಸೋಮವಾರ ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಶಾರ್ಟ್ ಸರ್ಕಿಟ್‌ನಿಂದಾಗಿ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣವೇ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಬಹುಮಹಡಿ ಕಟ್ಟಡದ ವಿದ್ಯುತ್ ಸಂಪರ್ಕ ಕಡಿತಗೊಳಿಸಿದರು. ಲಿಫ್ಟ್‌ನಲ್ಲಿ ಸಿಲುಕಿದ್ದ ಕೃಷ್ಣೇಗೌಡ ಹಾಗೂ ಸಣ್ಣ ನೀರಾವರಿ ಇಲಾಖೆಯ ನೌಕರ ಅರುಣ್ ಪ್ರಸಾದ್ ಅವರನ್ನು ರಕ್ಷಿಸಿ, ಪ್ರಾಥಮಿಕ ಚಿಕಿತ್ಸೆ ನೀಡಿ, ಆಸ್ಪತ್ರೆಗೆ ದಾಖಲಿಸಲಾಯಿತು.

‘ಪ್ರಾಥಮಿಕ ತನಿಖೆ ಬಳಿಕ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡಿರುವ ಸಾಧ್ಯತೆ ಇದೆ. ನಿಖರವಾದ ಕಾರಣ ತಿಳಿಯಲು ತನಿಖೆ ಆರಂಭಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಸ್ಥಳಕ್ಕೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರರಾವ್, ಆಯುಕ್ತ ಕೆ.ಎನ್. ರಮೇಶ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ‘ಕಟ್ಟಡದಲ್ಲಿನ ಎಲ್ಲ ಮಳಿಗೆಗಳು ಹಾಗೂ ಕಚೇರಿಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ’ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದರು.

ಅಪಘಾತ: ನಾಲ್ವರ ಸಾವು



ಕೋಲಾರ: ಮಾಲೂರು ತಾಲ್ಲೂಕಿನ ಅಬ್ಬೇನಹಳ್ಳಿ ಬಳಿ ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಕಾರಿಡಾರ್‌ನಲ್ಲಿ ಸೋಮವಾರ ನಸುಕಿನಲ್ಲಿ ಭೀಕರ ಅಪಘಾತ ಸಂಭವಿಸಿದ್ದು, ಅಯ್ಯಪ್ಪಸ್ವಾಮಿ ಮಾಲಾಧಾರಿ ಸೇರಿದಂತೆ ಕಾರಿನಲ್ಲಿದ್ದ ನಾಲ್ವರು ಮೃತಪಟ್ಟಿದ್ದಾರೆ.

ಗೋಪಿ (38), ಗೌತಮ್ ರಮೇಶ್ (28), ಹರಿಹರನ್ (27), ಜಯಂಕರ್ (30) ಮೃತ ಯುವಕರು. ಮೃತರೆಲ್ಲರೂ ಚೆನ್ನೈ ಮೂಲದವರು. ಹರಿಹರನ್ ಎಂಬುವರು ಅಯ್ಯಪ್ಪಸ್ವಾಮಿ ಮಾಲೆ ಧರಿಸಿದ್ದರು. ನಾಲ್ವರನ್ನು ಕೋಲಾರದ ಆರ್.ಎಲ್.ಜಾಲಪ್ಪ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಅವರು ಮೃತಪಟ್ಟಿದ್ದಾರೆ. ಈ ನಾಲ್ವರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ವಾರಾಂತ್ಯದಲ್ಲಿ ಊರಿಗೆ ತೆರಳಿದ್ದ ಅವರು ಬೆಂಗಳೂರಿಗೆ ಮರಳುತ್ತಿದ್ದರು.

ಪಿ.ಜಿ.ಗೆ ನುಗ್ಗಿ ಸುಲಿಗೆ: ಆರು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಪೇಯಿಂಗ್ ಗೆಸ್ಟ್‌ಗೆ (ಪಿ.ಜಿ) ನುಗ್ಗಿ, ಮೊಬೈಲ್ ಸುಲಿಗೆ ಮಾಡಿದ ಆರು ಆರೋಪಿಗಳನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೇರಳದ ಮುಹಮ್ಮದ್ ನಜಾಶ್ (24), ಸರುಣ್ (38) ಹಾಗೂ ನಗರದ ನಿವಾಸಿಗಳಾದ ವಿಷ್ಣು ಕೆ.ಟಿ (23), ದಿವಾಕರ್ (34), ಮಧುಕುಮಾರ್ (32), ಕಿರಣ್ (29) ಬಂಧಿತ ಆರೋಪಿಗಳು.

ನವೆಂಬರ್ 7ರಂದು ರಾತ್ರಿ ಮಾರತ್‌ಹಳ್ಳಿಯ ಪಿ.ಜಿ.ಗೆ ನುಗ್ಗಿದ್ದ ಆರೋಪಿಗಳು, ಯುವತಿಯರ ಬಳಿಯಿದ್ದ ಮೊಬೈಲ್ ಫೋನ್‌ಗಳನ್ನು ಕಿತ್ತುಕೊಂಡು ಪರಾರಿಯಾಗಿದ್ದರು.

‘ದೂರುದಾರ ಯುವತಿಗೆ ಟೀ ಅಂಗಡಿಯೊಂದರಲ್ಲಿ ಮುಹಮ್ಮದ್ ನಜಾಶ್ ಪರಿಚಯವಾಗಿತ್ತು. ಬಳಿಕ ಸಲುಗೆ ಬೆಳೆದ ಕಾರಣ ಯುವತಿ ನಜಾಶ್ ಜನ್ಮದಿನ ಆಚರಿಸಲು ತನ್ನ ಪಿ.ಜಿ.ಗೆ ಆಹ್ವಾನಿಸಿದ್ದಳು. ಈ ವೇಳೆ, ಆರೋಪಿ ತನ್ನ ಸ್ನೇಹಿತನ ಜತೆ ತೆರಳಿದ್ದ. ಮಧ್ಯರಾತ್ರಿ 2 ಗಂಟೆಗೆ 4–5 ಆರೋಪಿಗಳು ಪಿ.ಜಿ. ಬಾಗಿಲು ತಟ್ಟಿದ್ದರು. ಬಾಗಿಲು ತೆರೆಯುತ್ತಿದ್ದಂತೆ ತಾವು ಪೊಲೀಸರು ಎಂದು ಹೇಳಿ, ಗಾಂಜಾ ಇದೆಯೇ ಎಂದು ಬೆದರಿಸಿ, ತಪಾಸಣೆ ಮಾಡಿದ್ದರು. ಯುವತಿಯರ ಬಳಿಯಿದ್ದ ಎರಡು ಮೊಬೈಲ್ ಫೋನ್‌ಗಳನ್ನು ಕಿತ್ತುಕೊಂಡಿದ್ದರು. ಬಳಿಕ ₹5 ಲಕ್ಷ ನಗದು ನೀಡದಿದ್ದರೆ ಮತ್ತೊಮ್ಮೆ ಬರುವುದಾಗಿ ಬೆದರಿಸಿ ಪರಾರಿಯಾಗಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ಬಳಿಕ ಯುವತಿ ಎಚ್‌ಎಎಲ್ ಠಾಣೆಗೆ ದೂರು ನೀಡಿದ್ದರು. ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಕೃತ್ಯದಲ್ಲಿ ಯುವತಿಯ ಪರಿಚಿತ ನಜಾಶ್‌ನ ಕೈವಾಡ ಇರುವುದು ಗೊತ್ತಾಗಿದೆ. ಹಣಕ್ಕಾಗಿ ಕೃತ್ಯವೆಸಗಿರುವುದಾಗಿ ಆರೋಪಿಗಳು ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾರೆ. ಆರೋಪಿಗಳ ಪೈಕಿ ಸರುಣ್ ಈ ಹಿಂದೆ ಮಧುಬಲೆ ಪ್ರಕರಣವೊಂದರಲ್ಲಿ ಬಂಧಿತನಾಗಿದ್ದ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿ

ಕಾರು ನಿಲುಗಡೆ ಪ್ರಶ್ನಿಸಿದ ವ್ಯಕ್ತಿ ಮೇಲೆ ಹಲ್ಲೆ

ಕಾರು ನಿಲುಗಡೆ ವಿಚಾರದ ಬಗ್ಗೆ ಪ್ರಶ್ನಿಸಿದ್ದಕ್ಕೆ ಖಾಸಗಿ ಕಂಪನಿ ಉದ್ಯೋಗಿ ಮೇಲೆ ಹಲ್ಲೆ ನಡೆಸಿದ ಕೇರಳದ ಮೂವರು ಯುವಕರನ್ನು ಅಶೋಕ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೇರಳದ ಬಸಿಲ್ ವರ್ಗೀಸ್, ತರಸ್ ರಾಜಿ, ಸಂದೀಪ್ ಮಹಾದೇವನ್ ಬಂಧಿತರು. ಆರೋಪಿಗಳು ವಿವಿಧ ಕಾಲೇಜುಗಳಲ್ಲಿ ಪದವಿ ಓದುತ್ತಿದ್ದಾರೆ.

ಅ.22ರಂದು ಈ ಘಟನೆ ನಡೆದಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹರಿದಾಡುತ್ತಿದೆ.

‘ಪ್ರವಾಸಕ್ಕೆ ತೆರಳಲು ಜೂಮ್ ಕಾರ್ ಬುಕ್ ಮಾಡಿದ್ದ ವಿದ್ಯಾರ್ಥಿಗಳು, ಅದನ್ನು ತೆಗೆದುಕೊಂಡು ಹೋಗಲು ಬಂದಿದ್ದರು. ತಮ್ಮ ವಾಹನಗಳನ್ನು ಅಲ್ಲಿಯೇ ನಿಲುಗಡೆ ಮಾಡಿದ್ದರು. ಸಂತ್ರಸ್ತ ಅಜಯ್ ಅಹ್ಮದ್ ಕಾರು ನಿಲುಗಡೆ ಮಾಡಿರುವುದನ್ನು ಪ್ರಶ್ನಿಸಿದ್ದರು. ಇದರಿಂದ ಕೋಪಗೊಂಡ ವಿದ್ಯಾರ್ಥಿಗಳು ಅಹ್ಮದ್ ಅವರೊಂದಿಗೆ ಜಗಳವಾಡಿ, ತೀವ್ರ ಹಲ್ಲೆ ನಡೆಸಿದ್ದರು. ಹಲ್ಲೆ ನಡೆಸಿದ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆ ಹಿಡಿದು ಪೊಲೀಸರಿಗೆ ಮಾಹಿತಿ ನೀಡಿದ್ದರು. ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿದರು’ ಎಂದು ಹಿರಿಯ ಅಧಿಕಾರಿ ತಿಳಿಸಿದರು.

ಯುವತಿ ಕೊಂದು ಪರಾರಿ

ಪೀಣ್ಯ ದಾಸರಹಳ್ಳಿ: ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ತಮ್ಮೇನಹಳ್ಳಿಯಲ್ಲಿ ಯುವತಿಯನ್ನು ಕೊಲೆ ಮಾಡಿರುವ ಘಟನೆ ನಡೆದಿದೆ.

ನಗರದ ಕಾಲೇಜಿನಲ್ಲಿ ಬಿಬಿಎಂ ಮಾಡುತ್ತಿದ್ದ ದೇವಿಶ್ರೀ (21) ಕೊಲೆಯಾದ ವಿದ್ಯಾರ್ಥಿನಿ. ಪೋಷಕರ ದೂರಿನ ಮೇರೆಗೆ ಪೊಲೀಸರು ಪ್ರೇಮವರ್ಧನ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ತಮ್ಮೇನಹಳ್ಳಿಯ ಪಿ.ಜಿ.ಯಲ್ಲಿ ವಾಸವಾಗಿದ್ದ ಆಂಧ್ರಪ್ರದೇಶದ ದೇವಿಶ್ರೀ, ಭಾನುವಾರ ಬೆಳಿಗ್ಗೆ ಪ್ರೇಮವರ್ಧನ್ ಜತೆ ಸ್ನೇಹಿತೆಯ ರೂಮ್‌ಗೆ ತೆರಳಿದ್ದಳು. ರಾತ್ರಿ 8 ಗಂಟೆವರೆಗೂ ಅಲ್ಲಿಯೇ ಇದ್ದರು. ಆದರೆ, ಪ್ರೇಮವರ್ಧನ್ ಒಬ್ಬರೇ ರೂಂನಿಂದ ಹೊರಬಂದಿದ್ದಾರೆ. ಮಗಳು ಕರೆ ಸ್ವೀಕರಿಸದ ಕಾರಣ ಗಾಬರಿಗೊಂಡ ಪೋಷಕರು, ದೇವಿಶ್ರೀ ಸಹೋದರನಿಗೆ ವಿಷಯ ತಿಳಿಸಿದ್ದಾರೆ. ಸಹೋದರ ಪಿ.ಜಿ ಬಳಿ ಬಂದು ವಿಚಾರಿಸಿದಾಗ ಸ್ನೇಹಿತೆಯ ರೂಮ್‌ಗೆ ಹೋಗಿರುವ ವಿಷಯ ತಿಳಿದು, ಅಲ್ಲಿಗೆ ಭೇಟಿ ನೀಡಿದಾಗ ಶವವಾಗಿ ಬಿದ್ದಿರುವುದು ಕಂಡುಬಂದಿದೆ. ಆರೋಪಿ ಬಂಧನಕ್ಕೆ ಕ್ರಮಕೈಗೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಬೈಕ್‌ಗೆ ಬಸ್ ಡಿಕ್ಕಿ ಸವಾರ ಸಾವು

ಬೆಂಗಳೂರು: ದ್ವಿಚಕ್ರ ವಾಹನಕ್ಕೆ ಮಿನಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟ ಘಟನೆ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಬಿಹಾರದ ಸೋನುಕುಮಾರ್ (26) ಮೃತ ಯುವಕ. ನಗರದ ಕಾರ್ಖಾನೆಯೊಂದರಲ್ಲಿ ಉದ್ಯೋಗ ಮಾಡುತ್ತಿದ್ದು, ಕಾಚನಾಯಕನಹಳ್ಳಿಯಲ್ಲಿ ವಾಸವಾಗಿದ್ದರು. ರಾತ್ರಿ 9 ಗಂಟೆ ಸಮಯದಲ್ಲಿ ಕಾರ್ಖಾನೆಯಿಂದ ಕೆಲಸ ಮುಗಿಸಿ ಮನೆಗೆ ಸ್ಕೂಟರ್‌ನಲ್ಲಿ ಹೋಗುತ್ತಿದ್ದಾಗ ಕಾಚನಾಯಕನಹಳ್ಳಿ ಬಳಿ ಬಸ್ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಅವರು, ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟರು. ಸ್ಥಳಕ್ಕೆ ಸಂಚಾರ ವಿಭಾಗದ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಸ್ ವಶಕ್ಕೆ ಪಡೆದು, ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಎಡಪದವು: ಚೂರಿ ಇರಿದು ಕೊಲೆ ಯತ್ನ

ಮಂಗಳೂರು: ಬಜಪೆ ಪೊಲೀಸ್ ಠಾಣೆ ವ್ಯಾಪ್ತಿಯ ಎಡಪದವಿನಲ್ಲಿ ಸೋಮವಾರ ಬೈಕಿನಲ್ಲಿ ಸಾಗುತ್ತಿದ್ದ ನಾಲ್ವರು ಯುವಕರ ಗುಂಪು, ಚೂರಿ ಇರಿದು ಯುವಕನನ್ನು ಕೊಲ್ಲಲು ಯತ್ನಿಸಿದೆ. ಈ ಕೃತ್ಯದಲ್ಲಿ ಭಾಗಿಯಾದ ಒಬ್ಬ ಆರೋಪಿಯನ್ನು ಸ್ಥಳೀಯರೇ ಪೊಲೀಸರಿಗೆ ಒಪ್ಪಿಸಿದ್ದಾರೆ.

ಕೇಟರಿಂಗ್ ವೃತ್ತಿ ಮಾಡುತ್ತಿದ್ದ ಅಖಿಲೇಶ್ (28) ಚೂರಿ ಇರಿತಕ್ಕೆ ಒಳಗಾದ ಯುವಕ.

‘ಒಂದೇ ಬೈಕಿನಲ್ಲಿ ನಾಲ್ವರು ಕುಳಿತು, ಕೈಯಲ್ಲಿ ಚೂರಿ ಹಿಡಿದುಕೊಂಡು ಸಾಗುತ್ತಿದ್ದುದನ್ನು ಅಖಿಲೇಶ್ ನೋಡಿದ್ದರು. ಈ ಕುರಿತು ವಿಡಿಯೊ ಚಿತ್ರೀಕರಿಸಲು ಅವರನ್ನು ಹಿಂಬಾಲಿಸಿದ್ದರು. ಬೈಕಿನಲ್ಲಿ ಸಾಗುತ್ತಿದ್ದ ಕಿಡಿಗೇಡಿಗಳು ಅಖಿಲೇಶ್ ಅವರತ್ತ ಚೂರಿ ಬೀಸಿದ್ದು, ಅವರ ಕೈಗಳಿಗೆ ಗಾಯಗಳಾಗಿವೆ. ಆ ನಾಲ್ವರು ಆರೋಪಿಗಳಲ್ಲಿ ಒಬ್ಬನನ್ನು ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಇನ್ನುಳಿದ ಮೂವರು ಪರಾರಿಯಾಗಿದ್ದಾರೆ’ ಎಂದು ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

‘ನಾಲ್ವರು ಆರೋಪಿಗಳ ಗುರುತು ಪತ್ತೆಯಾಗಿದೆ. ಮುಸ್ಲಿಂ ಸಮುದಾಯಕ್ಕೆ ಸೇರಿದ ಈ ನಾಲ್ವರು ವ್ಯಕ್ತಿಗಳು, ಈ ಘಟನೆಗೂ ಮುನ್ನ ಬಾರ್ ಒಂದರಿಂದ ಹೊರಗೆ ಬರುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ. ಈ ಕೃತ್ಯ ಸಂಬಂಧ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗುತ್ತಿದೆ’ ಎಂದು ಅವರು ತಿಳಿಸಿದ್ದಾರೆ.

ರೈಲಿಗೆ ಸಿಲುಕಿ ವಿದ್ಯಾರ್ಥಿಗಳಿಬ್ಬರ ಆತ್ಮಹತ್ಯೆ

ಬೆಂಗಳೂರು: ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಸಿಲುಕಿ ಕೇರಳದ ಇಬ್ಬರು ನರ್ಸಿಂಗ್ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ಘಟನೆ ಚಿಕ್ಕಬಾಣಾವರ ನಿಲ್ದಾಣದ ಬಳಿ ಭಾನುವಾರ ಸಂಭವಿಸಿದೆ.

ಕೇರಳದ ಪತ್ತನಂತಿಟ್ಟ ನಿವಾಸಿಗಳಾದ ಜಸ್ಟಿನ್ ಜೋಸೆಫ್ (21), ಸ್ಟೆರಿನ್ ಎಲ್ಜಾ ಸಜಿ (19) ಮೃತರು. ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಗ್ರಾಮಾಂತರ ರೈಲ್ವೆ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.


ಸ್ಟೆರಿನ್ ಎಲ್ಜಾ ಸಜಿ, ಜಸ್ಟಿನ್ ಜೋಸೆಫ್

ನಗರದ ನರ್ಸಿಂಗ್ ಕಾಲೇಜಿನಲ್ಲಿ ಬಿಎಸ್‌ಸಿ ನರ್ಸಿಂಗ್ ಎರಡನೇ ಸೆಮಿಸ್ಟರ್‌ನಲ್ಲಿ ಓದುತ್ತಿದ್ದ ಇಬ್ಬರೂ ಸಮೀಪದ ಪೇಯಿಂಗ್ ಗೆಸ್ಟ್‌ನಲ್ಲಿ ವಾಸವಾಗಿದ್ದರು. ಭಾನುವಾರ ಸಂಜೆ ವೇಗವಾಗಿ ರೈಲು ಬರುವಾಗ ಹಳಿಗಳ ಮೇಲೆ ಬಂದ ಪರಿಣಾಮ, ಸ್ಥಳದಲ್ಲೇ ಇಬ್ಬರೂ ಪ್ರಾಣ ಕಳೆದುಕೊಂಡಿದ್ದಾರೆ.

ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮರಣೋತ್ತರ ಪರೀಕ್ಷೆ ಬಳಿಕ ಪೋಷಕರಿಗೆ ಮೃತದೇಹವನ್ನು ಹಸ್ತಾಂತರಿಸಲಾಯಿತು.

‘ರೈಲಿನ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ ಮೇಲ್ನೋಟಕ್ಕೆ ಇಬ್ಬರೂ ಆತ್ಮಹತ್ಯೆ ಮಾಡಿಕೊಂಡಿರುವುದು ಕಂಡು ಬಂದಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸ್ಥಳದಲ್ಲಿ ಮರಣ ಪತ್ರ ಸಿಕ್ಕಿಲ್ಲ. ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ’ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಜ್ವಾಲಾಮುಖಿ ಡಿಜಿಸಿಎ ಸಲಹೆ

ನವದೆಹಲಿ (ಪಿಟಿಐ/ಎಎಫ್‌ಪಿ): ಇಥಿಯೋಪಿಯಾದಲ್ಲಿ ಹೊರಹೊಮ್ಮಿದ ಜ್ವಾಲಾಮುಖಿಯಿಂದ ಉಂಟಾಗಿರುವ ದಟ್ಟ ಹೊಗೆಯು ಭಾರತದ ವಿಮಾನಗಳ ಸಂಚಾರಕ್ಕೆ ಸಮಸ್ಯೆ ಉಂಟು ಮಾಡಬಹುದು. ವಿಮಾನಯಾನ ಸಂಸ್ಥೆಗಳು ಮತ್ತು ವಿಮಾನ ನಿಲ್ದಾಣಗಳು ಎಚ್ಚರಿಕೆ ವಹಿಸುವಂತೆ ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಸೋಮವಾರ ಎಚ್ಚರಿಕೆ ನೀಡಿದೆ.

ಭಾನುವಾರ ಹೊರಹೊಮ್ಮಿರುವ ‘ಹೈಲಿಗುಬ್ಬಿ’ ಜ್ವಾಲಾಮುಖಿಯ ಹೊಗೆಯು ಮೋಡದ ರೀತಿಯಲ್ಲಿ ಭಾರತದ ಪಶ್ಚಿಮ ಭಾಗಕ್ಕೆ ಹಾರಿ ಬಂದಿದ್ದು ವೈಮಾನಿಕ ಕಾರ್ಯಾಚರಣೆ ಮೇಲೆ ಪರಿಣಾಮ ಬೀರಲಿದೆ.

ಕೆಲವು ವಿಮಾನಗಳನ್ನು ರದ್ದುಗೊಳಿಸಿದ್ದಾಗಿ ಆಕಾಸ ಏರ್‌ಲೈನ್ಸ್, ಇಂಡಿಗೊ, ಕೆಎಲ್‌ಎಂ ವಿಮಾನಯಾನ ಸಂಸ್ಥೆಗಳು ಹೇಳಿವೆ. ಅಫಾರ್ ಪ್ರದೇಶದಲ್ಲಿ ‘ಹೈಲಿಗುಬ್ಬಿ’ ಜ್ವಾಲಾಮುಖಿ 12,000 ವರ್ಷದ ನಂತರ ಹೊರಹೊಮ್ಮಿದೆ.



ಹೆಬ್ಬಾಳದಲ್ಲಿರುವ ಐಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ‘ಉದ್ಭವ್–2025’ ನೂತನ ಶೈಕ್ಷಣಿಕ ವರ್ಷದ ತರಗತಿಗಳ ಪ್ರಾರಂಭೋತ್ಸವ ಸಮಾರಂಭದಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು

ಕೌಶಲ ಬೆಳೆಸಿಕೊಳ್ಳಲು ಸಲಹೆ

ಪ್ರಜಾವಾಣಿ ವಾರ್ತೆ

ಯಲಹಂಕ: ‘ಎಂಜಿನಿಯರಿಂಗ್ ತಂತ್ರಗಳನ್ನು ಬಳಸುವ ಮೂಲಕ ನೈಜ ಜೀವನದ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ನೈಪುಣ್ಯವನ್ನು ಬೆಳೆಸಿಕೊಳ್ಳುವುದೇ ಯಶಸ್ಸಿನ ಮೂಲ’ ಎಂದು ಗೂಗಲ್ ಕ್ಲೌಡ್ ಲೀಡರ್ ತಂಡದ ತಾಂತ್ರಿಕ ನಿರ್ದೇಶಕಿ ಶುಭ ಗಿರೀಶ್ ಅಭಿಪ್ರಾಯಪಟ್ಟರು.

ಹೆಬ್ಬಾಳದಲ್ಲಿರುವ ಐಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ‘ಉದ್ಭವ್– 2025’ ನೂತನ ಶೈಕ್ಷಣಿಕ ವರ್ಷದ ತರಗತಿಗಳ ಪ್ರಾರಂಭೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ವಿದ್ಯಾರ್ಥಿಗಳು ಸದಾ ಕುತೂಹಲವುಳ್ಳವರಾಗಿ ಪ್ರಶ್ನಿಸುವ ಮತ್ತು ಸಂಶೋಧನಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಶೈಕ್ಷಣಿಕವಾಗಿ ಉತ್ತಮ ಅಂಕಗಳನ್ನು ಗಳಿಸುವುದರ ಜೊತೆಗೆ ವಾಸ್ತವದಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ರೂಢಿಸಿಕೊಳ್ಳಬೇಕು’ ಎಂದು ಹೇಳಿದರು.

ಆ್ಯಪಲ್ ಸಂಸ್ಥೆಯ (ಕ್ಯಾಲಿಫೋರ್ನಿಯಾ) ಫಿಸಿಕಲ್ ಡಿಸೈನ್ ಎಂಜಿನಿಯರ್ ವಿಕ್ರಮ್ ಪೋಲೆ ಮಾತನಾಡಿ, ‘ವಿಶ್ವದಲ್ಲಿ ಸಾಕಷ್ಟು ಎಂಜಿನಿಯರಿಂಗ್ ಕ್ಲಬ್‌ಗಳಿದ್ದು, ನೀವು ಸಾಧ್ಯವಾದಷ್ಟು ಮಟ್ಟಿಗೆ ಅಲ್ಲಿ ನೋಂದಾಯಿಸಿಕೊಳ್ಳಿರಿ; ಜನರೊಟ್ಟಿಗೆ ಬೆರೆತು, ಜಗತ್ತಿನ ಪ್ರಚಲಿತ ವಿದ್ಯಮಾನಗಳ ಬಗ್ಗೆ ತಿಳಿದುಕೊಳ್ಳಬೇಕು’ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಐಟ್ರಿಯಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸಿ.ಎಸ್.ಸುಂದರ್ ರಾಜು, ಪ್ರಾಂಶುಪಾಲ ರಾಜೇಶ ಎಸ್, ಉಪ ಪ್ರಾಂಶುಪಾಲರಾದ ನಳಿನಾಕ್ಷಿ ಎನ್. ಹಾಗೂ ಶೈಕ್ಷಣಿಕ ವಿಭಾಗದ ಡೀನ್ ರವಿಚಂದ್ರ ಕೆ.ಆರ್. ಉಪಸ್ಥಿತರಿದ್ದರು.

ಥಣಿಸಂದ್ರದಲ್ಲಿ ವಂದೇ ಭಾರತ್ ಸ್ಲೀಪರ್ ರೈಲುಗಳ ನಿರ್ವಹಣೆ

ಡಿಪೊ ನಿರ್ಮಾಣದ ಬಿಡ್ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಥಣಿಸಂದ್ರದಲ್ಲಿ ವಂದೇ ಭಾರತ್ ಸ್ಲೀಪರ್ ರೈಲುಗಳನ್ನು ನಿರ್ವಹಿಸುವ ಡಿಪೊ ನಿರ್ಮಾಣಕ್ಕೆ ಟೆಂಡರ್ ಆಹ್ವಾನಿಸಲಾಗಿದ್ದು, ಬಿಡ್ ಸಲ್ಲಿಸುವ ಅವಧಿಯನ್ನು ನೈರುತ್ಯ ರೈಲ್ವೆ ವಿಸ್ತರಿಸಿದೆ.

ಎಂಜಿನಿಯರಿಂಗ್, ನಿರ್ಮಾಣ ಮತ್ತು ಸಂಗ್ರಹಣೆ (ಇಸಿಪಿ) ಮಾದರಿಯ ಸೌಲಭ್ಯವನ್ನು ಸ್ಥಾಪಿಸಲು ಜುಲೈನಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿತ್ತು. ನ.21ರ ಒಳಗೆ ಬಿಡ್ ಸಲ್ಲಿಸಲು ದಿನಾಂಕ ನಿಗದಿಪಡಿಸಲಾಗಿತ್ತು. ಈಗ ಈ ಅವಧಿಯನ್ನು ಡಿಸೆಂಬರ್ 12ರವರೆಗೆ ವಿಸ್ತರಿಸಲಾಗಿದೆ.

ವಂದೇ ಭಾರತ್ ಸೂಪರ್ ಫಾಸ್ಟ್ ಸೀಟರ್ ರೈಲುಗಳು ಯಶಸ್ವಿಯಾದ ಬಳಿಕ ವಂದೇ ಭಾರತ್ ಸ್ಲೀಪರ್ ರೈಲುಗಳನ್ನು ಹಳಿಗಿಳಿಸಲು ರೈಲ್ವೆ ಇಲಾಖೆ ನಿರ್ಧರಿಸಿತ್ತು. ಸ್ಲೀಪರ್ ರೈಲುಗಳ ತಯಾರಿಯು ಭರದಿಂದ ಸಾಗುತ್ತಿದೆ. ಅವುಗಳ ನಿರ್ವಹಣೆಗಾಗಿ ದೇಶದ ಐದು ಕಡೆಗಳಲ್ಲಿ ಡಿಪೊಗಳನ್ನು ನಿರ್ಮಿಸಲು ರೈಲ್ವೆ ಮಂಡಳಿ ನಿರ್ಧರಿಸಿತ್ತು. ಅದರಲ್ಲಿ ಈಶಾನ್ಯ ಬೆಂಗಳೂರಿನಲ್ಲಿರುವ ಥಣಿಸಂದ್ರವೂ ಒಂದು. ₹ 227.94 ಕೋಟಿ ಅಂದಾಜು ವೆಚ್ಚದಲ್ಲಿ 16 ಬೋಗಿಗಳ ರೈಲು ನಿರ್ವಹಿಸುವ ಡಿಪೊ ಇದಾಗಲಿದೆ.


ವಂದೇ ಭಾರತ್ ಸ್ಲೀಪರ್ ಕೋಚ್ ರೈಲು

ಚನ್ನಸಂದ್ರ ಮತ್ತು ಯಲಹಂಕ ರೈಲು ನಿಲ್ದಾಣಗಳ ನಡುವಿನ ಥಣಿಸಂದ್ರದಲ್ಲಿ ಹಿಂದೆ ರೈಲು ನಿಲ್ದಾಣವಿತ್ತು. ಇದು ದಶಕದ ಹಿಂದೆ ಸ್ಥಗಿತಗೊಂಡಿತ್ತು. ಈ ರೈಲು ನಿಲ್ದಾಣದ ಪಕ್ಕದಲ್ಲಿಯೇ ಡಿಪೊ ನಿರ್ಮಾಣಗೊಳ್ಳಲಿದೆ.

ಬಾಣಸವಾಡಿಯಲ್ಲಿ ಶೆಡ್ ವಿಸ್ತರಣೆ: ವಂದೇ ಭಾರತ್ ಸೀಟರ್ ರೈಲುಗಳ ನಿರ್ವಹಣೆಗಾಗಿ ಬಾಣಸವಾಡಿಯಲ್ಲಿರುವ ಮೆಮು ಶೆಡ್ ಅನ್ನು ₹50 ಕೋಟಿ ವೆಚ್ಚದಲ್ಲಿ ವಿಸ್ತರಿಸಲಾಗುತ್ತಿದೆ. ಅಲ್ಲದೇ ಬೈಯಪ್ಪನಹಳ್ಳಿಯಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ₹123 ಕೋಟಿ ವೆಚ್ಚದಲ್ಲಿ ನಿರ್ವಹಣಾ ಮೂಲಸೌಕರ್ಯವನ್ನು ನವೀಕರಿಸಲಾಗುತ್ತಿದೆ. ನಾಲ್ಕನೇ ಪಿಟ್‌ಲೈನ್ ಇದಾಗಲಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬಾಣಸವಾಡಿಯಲ್ಲಿರುವ ಮೆಮು ಶೆಡ್ ಪ್ರಸ್ತುತ 270 ಮೀಟರ್ ಉದ್ದವಿದೆ. ಇಲ್ಲಿ 8–12 ಬೋಗಿಗಳ ರೈಲುಗಳನ್ನಷ್ಟೇ ನಿರ್ವಹಿಸಲು ಸಾಧ್ಯವಾಗುವಷ್ಟು ಸ್ಥಳಾವಕಾಶವಿದೆ. ಅದಕ್ಕಾಗಿ ಹೆಚ್ಚುವರಿಯಾಗಿ 130 ಮೀಟರ್ ಸೇರಿಸಲಾಗುತ್ತಿದೆ.

ಬಿಇಎಂಎಲ್‌ನ ಚೆನ್ನೈ ಇಂಟಿಗ್ರಲ್ ಕೋಚ್ ಕಾರ್ಖಾನೆಯಲ್ಲಿ (ಐಸಿಎಫ್) ಎರಡು ಪ್ರೊಟೊಟೈಪ್ (ಮೂಲ ಮಾದರಿ) ವಂದೇ ಭಾರತ್ ಸ್ಲೀಪರ್ ರೈಲುಗಳು ತಯಾರಾಗಿದ್ದು, ತಾಂತ್ರಿಕ ಕಾರಣದಿಂದಾಗಿ ಇನ್ನೂ ಬಿಡುಗಡೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ವೇಗವಾಗಿ ನಡೆಯಲಿ’

ಥಣಿಸಂದ್ರದಲ್ಲಿ ವಂದೇ ಭಾರತ್ ನಿರ್ವಹಣಾ ಡಿಪೊ ಆಗುತ್ತಿರುವುದು ಸ್ವಾಗತಾರ್ಹ ವಿಚಾರ. ಆದರೆ, ಟೆಂಡರ್ ಪ್ರಕ್ರಿಯೆಯಲ್ಲಿಯೇ ವಿಳಂಬವಾಗುತ್ತಿದೆ. ಡಿಪೊ ನಿರ್ಮಾಣದಲ್ಲಿ ಮತ್ತೆ ನಿಧಾನವಾಗದಂತೆ ವೇಗವಾಗಿ ಮಾಡಬೇಕು ಎಂದು ಕರ್ನಾಟಕ ರೈಲ್ವೆ ವೇದಿಕೆಯ ಕೆ.ಎನ್. ಕೃಷ್ಣ ಪ್ರಸಾದ್ ಆಶಿಸಿದರು.

ಚಿಟಿಕೆ ಸುದ್ದಿ

ವೀಸಾ ತಿರಸ್ಕೃತ ವೈದ್ಯೆ ಆತ್ಮಹತ್ಯೆ

ಅಮರಾವತಿ/ಹೈದರಾಬಾದ್ (ಪಿಟಿಐ): ಅಮೆರಿಕದ ವೀಸಾ ತಿರಸ್ಕೃತಗೊಂಡಿದ್ದರಿಂದ ಖಿನ್ನತೆಗೆ ಒಳಗಾಗಿದ್ದ ಗುಂಟೂರು ಜಿಲ್ಲೆಯ 38 ವರ್ಷದ ವೈದ್ಯೆ ರೋಹಿಣಿ ಅವರು ತಮ್ಮ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಮೆರಿಕದಲ್ಲಿ ಇಂಟರ್ನಲ್ ಮೆಡಿಸಿನ್ ಓದಬೇಕು ಎಂಬ ಹಂಬಲ ಅವರಿಗಿತ್ತು.

'ಎಷ್ಟೇ ಬಡಿದರೂ ಬಾಗಿಲು ತೆರೆಯುತ್ತಿಲ್ಲ ಎಂದು ಮನೆಗೆಲಸದವರು ರೋಹಿಣಿ ಅವರ ಕುಟುಂಬದವರಿಗೆ ನ.22ರಂದು ತಿಳಿಸಿದರು. ಪಕ್ಕದ ನಗರದಲ್ಲಿ ನೆಲಸಿದ್ದ ಕುಟುಂಬದವರೊಬ್ಬರು ಬಾಗಿಲು ಮುರಿದು ಒಳಹೋಗಿ ನೋಡಿದಾಗ ಮೃತಪಟ್ಟಿರುವುದು ತಿಳಿದುಬಂದಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ರೋಹಿಣಿ ಅವರು ಹೇಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕವೇ ತಿಳಿಯಲಿದೆ. ಅವರ ಮನೆಯಲ್ಲಿ ಮರಣ ಪತ್ರ ದೊರೆತಿದೆ. ವೀಸಾ ತಿರಸ್ಕೃತವಾಗಿದ್ದರಿಂದ ಖಿನ್ನತೆಗೆ ಒಳಪಟಿದ್ದರ ಕುರಿತು ಪತ್ರದಲ್ಲಿ ಬರೆಯಲಾಗಿದೆ' ಎಂದರು.

ಛತ್ತೀಸಗಢದಲ್ಲಿ 15 ನಕ್ಸಲರು ಶರಣಾಗತಿ

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ 15 ನಕ್ಸಲರು ಶರಣಾಗಿದ್ದಾರೆ. ಇವರಲ್ಲಿ ಒಂಬತ್ತು ಮಂದಿ ಬಗ್ಗೆ ಮಾಹಿತಿ ಕೊಟ್ಟವರಿಗೆ ₹ 48 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಪೊಲೀಸ್ ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಐವರು ಮಹಿಳೆಯರು ಮತ್ತು ಪೀಪಲ್ ಲಿಬರೇಷನ್ ಗೆರಿಲ್ಲಾ ಆರ್ಮಿಯ (ಪಿಎಲ್‌ಜಿಎ) ಸದಸ್ಯರು ಶರಣಾದರು ಎಂದು ಸುಕ್ಮಾ ಜಿಲ್ಲಾ ಎಸ್‌ಪಿ ಕಿರಣ್ ಚವಾಣ್ ಮಾಹಿತಿ ನೀಡಿದ್ದಾರೆ.

'ರಾಜ್ಯ ಸರ್ಕಾರ ತಂದಿರುವ 'ನಿಯಾದ್ ನೆಲ್ಲನರ್' (ನಿಮ್ಮ ಉತ್ತಮ ಗ್ರಾಮ) ಯೋಜನೆಯಿಂದ ಪ್ರಭಾವಿತರಾಗಿ ನಕ್ಸಲರು ಶರಣಾಗಿದ್ದಾರೆ. ಕುಗ್ರಾಮಗಳಲ್ಲಿ ಅಭಿವೃದ್ಧಿ, ಶರಣಾದ ನಕ್ಸಲರಿಗೆ ಪುನರ್‌ವಸತಿಯನ್ನು ಈ ಯೋಜನೆಯಡಿ ಕಲ್ಪಿಸಲಾಗಿದೆ. ಇದರಿಂದ ಎಲ್ಲರೂ ಸಶಸ್ತ್ರ ಚಳವಳಿಯ ಪಥ ಬಿಟ್ಟು ಬರುತ್ತಿದ್ದಾರೆ' ಎಂದು ಎಸ್‌ಪಿ ತಿಳಿಸಿದರು.

'ಸಂವಿಧಾನ ದಿನ ಪಂಚಾಯಿತಿಗಳಲ್ಲಿ ಪ್ರಸ್ತಾವನೆ ಓದು'

ನವದೆಹಲಿ (ಪಿಟಿಐ): 'ದೇಶದಾದ್ಯಂತ ಸುಮಾರು 2.63 ಲಕ್ಷ ಪಂಚಾಯಿತಿಗಳಲ್ಲಿ ನ.26ರಂದು ಸಂವಿಧಾನ ದಿನವನ್ನು ಆಚರಿಸಲಾಗುವುದು. ಸ್ಥಳೀಯ ಭಾಷೆಗಳಲ್ಲಿ ಸಂವಿಧಾನದ ಪ್ರಸ್ತಾವನೆ ಓದಲಾಗುವುದು' ಎಂದು ಪಂಚಾಯತ್ ರಾಜ್ ಸಚಿವಾಲಯ ಸೋಮವಾರ ಹೇಳಿದೆ.

'ಸಾಮೂಹಿಕವಾಗಿ ಸಂವಿಧಾನದ ಪ್ರಸ್ತಾವನೆಯನ್ನು ಓದಲಾಗುವುದು. ಸಂವಿಧಾನದ ಕುರಿತು ಚರ್ಚೆ, ವಿಚಾರಸಂಕಿರಣ ಮತ್ತು ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗುವುದು' ಎಂದು ಸಚಿವಾಲಯ ಮಾಹಿತಿ ನೀಡಿದೆ.

ಅಯೋಧ್ಯೆ: ಇಂದು ಧ್ವಜಾರೋಹಣ

ನವದೆಹಲಿ/ಅಯೋಧ್ಯೆ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಯೋಧ್ಯೆ ರಾಮಮಂದಿರಲ್ಲಿ ಮಂಗಳವಾರ ಧ್ವಜಾರೋಹಣ ನೆರವೇರಿಸಲಿದ್ದಾರೆ.

ರಾಮಮಂದಿರದ ಕಾಮಗಾರಿಗಳು ಪೂರ್ಣಗೊಂಡಿರುವುದರ ದ್ಯೋತಕವಾಗಿ ಧ್ವಜಾರೋಹಣ ನೆರವೇರಲಿದೆ. 'ಹತ್ತು ಅಡಿ ಎತ್ತರ ಮತ್ತು 20 ಅಡಿ ಅಗಲವಿರುವ ತ್ರಿಕೋನಾಕೃತಿಯ ಧ್ವಜವು ಭಗವಾನ್ ರಾಮನ ಶೌರ್ಯ ಹಾಗೂ ಶಕ್ತಿಯನ್ನು ಬಿಂಬಿಸುವ ಪ್ರಕಾಶಮಾನ ಸೂರ್ಯನ ಚಿತ್ರವನ್ನು ಹೊಂದಿರಲಿದೆ. ಕೋವಿದಾರ ಮರ ದೊಂದಿಗೆ 'ಓಂ' ಅನ್ನು ಚಿತ್ರಿಸಲಾಗಿದೆ' ಎಂದು ಪ್ರಧಾನಿ ಕಚೇರಿ ತಿಳಿಸಿದೆ.

'ಕಾಮಸೂತ್ರ ಮತ್ತು ಕ್ರಿಸ್‌ಮಸ್': ಚರ್ಚ್ ಖಂಡನೆ

ಪಣಜಿ (ಪಿಟಿಐ): ಮುಂದಿನ ತಿಂಗಳು ಗೋವಾದಲ್ಲಿ ಆಯೋಜಿಸಿರುವ 'ಕಾಮಸೂತ್ರದ ಕತೆಗಳು ಮತ್ತು ಕ್ರಿಸ್‌ಮಸ್ ಸಂಭ್ರಮಾಚರಣೆ' ಕಾರ್ಯಕ್ರಮವನ್ನು ಗೋವಾ ಚರ್ಚ್ ಖಂಡಿಸಿದೆ.

ಕಾರ್ಯಕ್ರಮದ ಕುರಿತ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿರುವ ಜಾಹೀರಾತು ಬೇಜವಾಬ್ದಾರಿತನದಿಂದ ಕೂಡಿದೆ. ಅಶ್ಲೀಲ ಮತ್ತು ಸಂಬಂಧವಿಲ್ಲದ ವಿಷಯಗಳನ್ನು ಒಳಗೊಂಡಿದೆ ಎಂದು ಅದು ಸೋಮವಾರ ಹರಿಹಾಯ್ದಿದೆ.

ಈ ಬೆನ್ನಲ್ಲೇ, ನಾಲ್ಕು ದಿನ ನಿಗದಿಯಾಗಿದ್ದ ಕಾರ್ಯಕ್ರಮವನ್ನು ರದ್ದು ಮಾಡಲು ಪೊಲೀಸರು ಆದೇಶಿಸಿದ್ದಾರೆ. ಭಗವಾನ್ ಶ್ರೀ ರಜನೀಶ್ ಪ್ರತಿಷ್ಠಾನ ಬ್ಯಾನರ್ ಅಡಿಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ನ್ಯಾ. ಸೂರ್ಯ ಕಾಂತ್ ಪ್ರಮಾಣ

'ಸುಪ್ರೀಂ'ನ 53ನೇ ಮುಖ್ಯ ನ್ಯಾಯಮೂರ್ತಿ ರಾಷ್ಟ್ರಪತಿಯಿಂದ ಪ್ರಮಾಣ ಬೋಧನೆ

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಸುಪ್ರೀಂ ಕೋರ್ಟ್‌ನ 53ನೇ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. 2027ರ ಫೆಬ್ರುವರಿ 9ರವರೆಗೆ ಇವರು ಸಿಜೆಐ ಆಗಿ ಮುಂದುವರಿಯಲಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನ್ಯಾ. ಸೂರ್ಯ ಕಾಂತ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಇವರು ದೇವರ ಹೆಸರಿನಲ್ಲಿ ಹಿಂದಿ ಭಾಷೆಯಲ್ಲಿ ಪ್ರಮಾಣ ಸ್ವೀಕರಿಸಿದರು.


ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ನಿರ್ಗಮಿತ ಸಿಜೆಐ ಬಿ.ಆರ್. ಗವಾಯಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಲ್ಲದೆ, ಕೇಂದ್ರ ಸರ್ಕಾರದ ಹಲವು ಪ್ರಮುಖ ಖಾತೆಗಳ ಸಚಿವರು, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಮತ್ತು ಮಾಜಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ನ್ಯಾ. ಸೂರ್ಯ ಕಾಂತ್ ಅವರ ಕುಟುಂಬಸ್ಥರೂ ಇದ್ದರು.

ಬಳಿಕ ಸುಪ್ರೀಂ ಕೋರ್ಟ್‌ಗೆ ತೆರಳಿದ ನೂತನ ಸಿಜೆಐ ಸೂರ್ಯ ಕಾಂತ್ ಅವರು, ಕೋರ್ಟ್ ಆವರಣದಲ್ಲಿ ಇರುವ ಮಹಾತ್ಮ ಗಾಂಧಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಹೂವಿನ ಹಾರ ಹಾಕಿ ಗೌರವ ಸಮರ್ಪಿಸಿದರು.

ಕೊಲಿಜಿಯಂ ಮುಖ್ಯಸ್ಥ: ನ್ಯಾ. ಗವಾಯಿ ಅವರ ಬಳಿಕ ಐವರು ನ್ಯಾಯಮೂರ್ತಿಗಳ ಕೊಲಿಜಿಯಂಗೆ ಈಗ ಸಿಜೆಐ ಸೂರ್ಯ ಕಾಂತ್ ಅವರು ಮುಖ್ಯಸ್ಥರಾಗಿದ್ದಾರೆ. ಕೊಲಿಜಿಯಂನಲ್ಲಿ ಸದ್ಯ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಬಿ.ವಿ. ನಾಗರತ್ನ, ಜೆ.ಕೆ. ಮಾಹೇಶ್ವರಿ ಮತ್ತು ಎಂ.ಎಂ ಸುಂದರೇಶ್ ಇದ್ದಾರೆ.

ಸಿಜೆಐ ಬಗ್ಗೆ...

- ಹರಿಯಾಣದ ಹಿಸ್ಸಾರ್‌ನ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಸಿಜೆಐ ಸೂರ್ಯ ಕಾಂತ್, ತಮ್ಮ ಕುಟುಂಬದಲ್ಲಿಯೇ ಕಾನೂನು ಪದವಿ ಓದಿದ ಮೊದಲಿಗರು. ಸಿಜೆಐ ಹುದ್ದೆಗೇರಿದ ಹರಿಯಾಣ ರಾಜ್ಯದ ಮೊದಲಿಗರೂ ಆಗಿದ್ದಾರೆ
- ತಮ್ಮ 38ನೇ ವಯಸ್ಸಿಗೆ ಹರಿಯಾಣದ ಅತ್ಯಂತ ಕಿರಿಯ ಅಡ್ವೊಕೇಟ್ ಜನರಲ್ ಆಗಿ ನೇಮಕಗೊಂಡವರು
- ಕುರುಕ್ಷೇತ್ರ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಕಾನೂನು ಪದವಿಯಲ್ಲಿ ಉನ್ನತ ಶ್ರೇಣಿಯಲ್ಲಿ (ಶೇ 70 ಅಂಕಕ್ಕೂ ಹೆಚ್ಚು) ತೇರ್ಗಡೆಗೊಂಡವರು



ತುರ್ತು ವಿಚಾರಣೆಗೆ ಅನುಮತಿ: ಬಾಯಿಮಾತು ಸಾಲದು– ಸಿಜೆಐ

'ಯಾವುದೇ ಪ್ರಕರಣವನ್ನು ತುರ್ತು ವಿಚಾರಣೆ ಕೈಗೆತ್ತಿಕೊಳ್ಳುವಂತೆ ಇನ್ನು ಮುಂದೆ ಕಡ್ಡಾಯವಾಗಿ ಲಿಖಿತ ರೂಪದಲ್ಲಿಯೇ ಕೋರಬೇಕು. ವಕೀಲರು ಬಾಯಿಮಾತಿನಲ್ಲಿ ಹೇಳುವಂತಿಲ್ಲ' ಎಂದು ಪ್ರಕರಣವೊಂದರ ವಿಚಾರಣೆ ವೇಳೆ ಸಿಜೆಐ ಸೂಚಿಸಿದರು. ಸಿಜೆಐ ಸೂರ್ಯ ಕಾಂತ್ ಅವರು ಅಧಿಕಾರ ವಹಿಸಿಕೊಂಡ ಮೊದಲ ದಿನ 17 ಪ್ರಕರಣಗಳ ವಿಚಾರಣೆ ನಡೆಸಿದರು.

'ಮರಣ ದಂಡನೆ, ವ್ಯಕ್ತಿ ಸ್ವಾತಂತ್ರ ಕುರಿತ ಪ್ರಕರಣಗಳಿಗೆ ಮಾತ್ರ ವಿನಾಯಿತಿ ಇದೆ. ಲಿಖಿತವಾಗಿ ಸಲ್ಲಿಸಿದ ಪ್ರಕರಣಗಳನ್ನು ವಿಶ್ಲೇಷಿಸಿ ಅವುಗಳನ್ನು ತುರ್ತು ವಿಚಾರಣೆ ಕೈಗೆತ್ತಿಕೊಳ್ಳಬೇಕೇ? ಬೇಡವೇ? ಎಂದು ನಿರ್ಧರಿಸಲಾಗುವುದು' ಎಂದರು.

ಈ ಹಿಂದೆ ಸಿಜೆಐ ಆಗಿದ್ದ ನ್ಯಾ. ಸಂಜೀವ್ ಖನ್ನಾ ಅವರೂ ಇಂಥದ್ದೇ ನಿಯಮ ರೂಪಿಸಿದ್ದರು. ಆದರೆ, ನ್ಯಾ. ಖನ್ನಾ ಅವರ ಬಳಿಕ ಬಂದ ನ್ಯಾ. ಗವಾಯಿ ಅವರು ಈ ನಿಯಮವನ್ನು ಸಡಿಲಗೊಳಿಸಿದ್ದರು.

'ನನ್ನ ಆದ್ಯತೆ ಏನು?'

- ದೇಶದಾದ್ಯಂತ ವಿವಿಧ ಕೋರ್ಟ್‌ಗಳಲ್ಲಿ 5 ಕೋಟಿ ಪ್ರಕರಣಗಳು ಬಾಕಿ ಇವೆ. ಸುಪ್ರೀಂ ಕೋರ್ಟ್‌ನಲ್ಲೇ 90 ಸಾವಿರಕ್ಕೂ ಅಧಿಕ ಪ್ರಕರಣಗಳು ಬಾಕಿ ಉಳಿದಿವೆ. ಇಂಥ ಪ್ರಕರಣಗಳ ವಿಲೇವಾರಿಯೇ ನನ್ನ ಮೊದಲ ಆದ್ಯತೆ. ಪ್ರಕರಣಗಳು ಯಾಕಾಗಿ ಬಾಕಿ ಇವೆ ಎನ್ನುವ ಬಗ್ಗೆ ಹೈಕೋರ್ಟ್ ಮತ್ತು ವಿಚಾರಣಾ ನ್ಯಾಯಾಲಯಗಳಿಂದ ಮಾಹಿತಿ ಪಡೆಯುತ್ತೇನೆ
- ಎರಡನೆಯದ್ದು ಮಧ್ಯಸ್ಥಿಕೆ. ವಿವಾದಗಳನ್ನು ಮಧ್ಯಸ್ಥಿಕೆ ಮೂಲಕ ಸುಲಭವಾಗಿ ಬಗೆಹರಿಸಬಹುದು. ಇದು ನಿಜಕ್ಕೂ ಕ್ರಾಂತಿಕಾರಿ ಹೆಜ್ಜೆಯಾಗಲಿದೆ. ಪ್ರಧಾನಿ ಮೋದಿ ಅವರೂ ಇದನ್ನೇ ಇತ್ತೀಚೆಗೆ ಹೇಳಿದ್ದರು. ಈಗ ಇಡೀ ದೇಶವೇ ಇದರ ಬಗ್ಗೆ ಮಾತನಾಡುತ್ತಿದೆ
- ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾದ ಬಳಿಕ, ಸಿಜೆಐ ಆದ ಬಳಿಕ ಆನ್‌ಲೈನ್ ಟ್ರೋಲಿಂಗ್ ಬಗ್ಗೆ ತಲೆಕೆಡಿಸಿಕೊಳ್ಳಬಾರದು. ನಿಜ ಹೇಳುತ್ತೇನೆ, ಇದು ಸಾಮಾಜಿಕ ಜಾಲತಾಣವಲ್ಲ. ಇದು ಸಮಾಜವೇ ಇಲ್ಲದ ಜಾಲತಾಣ (ಅನ್‌ಸೋಷಿಯಲ್ ಮೀಡಿಯಾ). ಅಲ್ಲಿ ಮಾಡುವ ಕಮೆಂಟ್‌ಗಳಿಂದ ನಾನು ಒತ್ತಡಕ್ಕೆ ಒಳಗಾಗುವುದಿಲ್ಲ. ನ್ಯಾಯಯುತ ವಿಶ್ಲೇಷಣೆ ಮಾತ್ರವೇ ಸ್ವೀಕಾರಾರ್ಹ

ಅಧಿಕೃತ ಕಾರಿನಲ್ಲಿ ಬಂದು ಸ್ವಂತ ಕಾರಿನಲ್ಲಿ ತೆರಳಿದ ನ್ಯಾ. ಗವಾಯಿ

ನಿರ್ಗಮಿತ ಸಿಜೆಐ ಬಿ.ಆರ್. ಗವಾಯಿ ಅವರು ಹೊಸ ಸಂಪ್ರದಾಯವೊಂದಕ್ಕೆ ನಾಂದಿ ಹಾಡಿದ್ದಾರೆ.

ಮರ್ಸಿಡಿಸ್ ಬೆಂಜ್ ಕಾರನ್ನು ಸಿಜೆಐ ಅವರ ಅಧಿಕೃತ ಓಡಾಟಕ್ಕಾಗಿ ನೀಡಲಾಗಿರುತ್ತದೆ. ನ್ಯಾ. ಗವಾಯಿ ಅವರು ಸಮಾರಂಭಕ್ಕೆ ಇದೇ ಕಾರಿನಲ್ಲಿ ಬಂದಿದ್ದರು. ಆದರೆ, ವಾಪಸು ಮನೆಗೆ ಹೋಗುವಾಗ ಬೆಂಜ್ ಕಾರನ್ನು ನೂತನ ಸಿಜೆಐ ಅವರಿಗೆ ನೀಡಿ ತಾವು ತಮ್ಮ ಸ್ವಂತ ಕಾರಿನಲ್ಲಿ ತೆರಳಿದರು.

ಸಚಿವಾಲಯದ ಅಧಿಕಾರಿಯೊಬ್ಬರು ಈ ಮಾಹಿತಿಯನ್ನು ಹಂಚಿಕೊಂಡರು.

> **ನಮ್ಮ ನ್ಯಾಯಾಂಗ ವ್ಯವಸ್ಥೆಯು ನಿರ್ಣಾಯಕ ಘಟ್ಟ ತಲುಪಿರುವಾಗ ನ್ಯಾ. ಸೂರ್ಯ ಕಾಂತ್ ಅವರು 14 ತಿಂಗಳವರೆಗಿನ ತಮ್ಮ ಅಧಿಕಾರಾವಧಿಯನ್ನು ಆರಂಭಿಸುತ್ತಿದ್ದಾರೆ. ಇವರ ನಾಯಕತ್ವದಲ್ಲಿ ಸಾಂವಿಧಾನಿಕ ಮೌಲ್ಯಗಳು, ಸಂಸ್ಥೆಗಳು ಬಲಗೊಳ್ಳುತ್ತವೆ ಎಂಬ ಭರವಸೆ ಇದೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

> **ಸಮಾರಂಭದಲ್ಲಿ ಮೋದಿ ಅವರ ಇಡೀ ಸಂಪುಟವೇ ಭಾಗವಹಿಸಿತ್ತು. ಆದರೆ, ಅವರು (ರಾಹುಲ್ ಗಾಂಧಿ) ಸಮಾರಂಭವನ್ನು ಬಹಿಷ್ಕರಿಸಿದರು. ಅವರು ಯಾವುದೋ ವಿದೇಶಿ ಪ್ರವಾಸದಲ್ಲಿರಬಹುದು ಅಥವಾ ಸಫಾರಿಗೆ ತೆರಳಿರಬಹುದು**
> **ಶೆಹಜಾದ್ ಪೂನಾವಾಲ,** ಬಿಜೆಪಿ ರಾಷ್ಟ್ರೀಯ ವಕ್ತಾರ



ಪ್ರತಿಭಟನಕಾರರು ಭದ್ರತಾ ಸಿಬ್ಬಂದಿ ಜತೆ ಸಂಘರ್ಷಕ್ಕಿಳಿದರು –ಪಿಟಿಐ ಚಿತ್ರ

22 ಪ್ರತಿಭಟನಕಾರರ ಬಂಧನ

ನವದೆಹಲಿ (ಪಿಟಿಐ): ರಾಷ್ಟ್ರದ ರಾಜಧಾನಿಯಲ್ಲಿ ವಾಯು ಮಾಲಿನ್ಯದ ಮಟ್ಟ ಹೆಚ್ಚುತ್ತಿದ್ದರೂ ಸರ್ಕಾರ ಯಾವುದೇ ಕ್ರಮವಹಿಸದಿರುವುದನ್ನು ಖಂಡಿಸಿ ಇಂಡಿಯಾ ಗೇಟ್ ಬಳಿ ಭಾನುವಾರ ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ 22 ಮಂದಿಯನ್ನು ಬಂಧಿಸಲಾಗಿದೆ.

ಮಹಿಳೆಯರ ಗೌರವಕ್ಕೆ ಧಕ್ಕೆ ತರುವುದು ಸೇರಿದಂತೆ ಬಿಎನ್‌ಎಸ್‌ನ ವಿವಿಧ ಕಲಂಗಳಡಿ ಪೊಲೀಸರು ಸಂಸದ್ ಮಾರ್ಗ ಪೊಲೀಸ್ ಠಾಣೆ ಮತ್ತು ಕರ್ತವ್ಯ ಪಥ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ.

'ರಸ್ತೆಯಲ್ಲಿ ನಿಂತು ಪ್ರತಿಭಟನೆ ನಡೆಸುತ್ತಿದ್ದರಿಂದ ಆಂಬುಲೆನ್ಸ್‌ಗಳ ಓಡಾಟ ಮತ್ತು ಆ ರಸ್ತೆಯಲ್ಲಿ ಸಾಗುತ್ತಿದ್ದ ವೈದ್ಯಕೀಯ ಸಿಬ್ಬಂದಿಗೆ ಅಡ್ಡಿ ಉಂಟಾಯಿತು. ಆದ್ದರಿಂದ ಸ್ಥಳವನ್ನು ತೊರೆಯುವಂತೆ ಪ್ರತಿಭಟನಕಾರರಿಗೆ ಸೂಚಿಸಿದೆವು' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದರು.

'ನಂತರ ಪರಿಸ್ಥಿತಿ ಸಂಘರ್ಷಕ್ಕೆ ತಿರುಗಿತು. ಕೆಲವು ಪ್ರತಿಭಟನಕಾರರು ನಮ್ಮ ಸಿಬ್ಬಂದಿ ಮೇಲೆ ಪೆಪ್ಪರ್ ಸ್ಪ್ರೇ ಬಳಸಿದರು. ಪೊಲೀಸರ ಕರ್ತವ್ಯಕ್ಕೆ ಈ ರೀತಿ ಅಡ್ಡಿಪಡಿಸುವುದು ಅಪರೂಪ' ಎಂದು ಹೇಳಿದರು. ಬಂಧಿತರಲ್ಲಿ ಐವರು ವಿದ್ಯಾರ್ಥಿಗಳನ್ನು ಎರಡು ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ನಗರದಲ್ಲಿ ಗಾಳಿಯ ಗುಣಮಟ್ಟ ಹದಗೆಡುತ್ತಿರುವುದು ಸಾರ್ವಜನಿಕ ಆರೋಗ್ಯಕ್ಕೆ 'ಗಂಭೀರ ಅಪಾಯ' ಉಂಟುಮಾಡಿದೆ. ಮಾಲಿನ್ಯದ ಮೂಲ ಕಾರಣಗಳನ್ನು ಪತ್ತೆಹಚ್ಚಿ, ಪರಿಹರಿಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಪ್ರತಿಭಟನೆ ನಡೆಸಿದ 'ದೆಹಲಿ ಕೋ-ಆರ್ಡಿನೇಷನ್ ಕಮಿಟಿ' ಆರೋಪಿಸಿದೆ.

'ಹಿಡ್ಮಾ ಪರ ಘೋಷಣೆ': 'ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕೆಲವರು ಈಚೆಗೆ ಹತ್ಯೆಯಾದ ನಕ್ಸಲ್ ನಾಯಕ ಮಾಡವಿ ಹಿಡ್ಮಾ ಪರ ಘೋಷಣೆಗಳನ್ನು ಕೂಗಿದ್ದಾರೆ' ಎಂದು ದೆಹಲಿ ಪೊಲೀಸರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಪ್ರತಿಭಟನಕಾರರು ಹಿಡ್ಮಾ ಪರ ಘೋಷಣೆ ಕೂಗಿದ ವಿಡಿಯೊವನ್ನು ತನಿಖಾಧಿಕಾರಿ, ಜಿಲ್ಲಾ ಮ್ಯಾಜಿಸ್ಟ್ರೇಟ್ ಅರಿಂದಮ್ ಸಿಂಗ್ ಚೀಮಾ ಅವರಿಗೆ ತೋರಿಸಿದರು.

ಛತ್ತೀಸಗಢದ ಬಸ್ತಾರ್ ವಲಯದ ನಕ್ಸಲ್ ಮುಖಂಡ ಮಾಡವಿ ಹಿಡ್ಮಾ, ಆಂಧ್ರ ಪ್ರದೇಶದ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಈಚೆಗೆ ಮೃತಪಟ್ಟಿದ್ದ.

ಎಸ್‌ಐಆರ್ ಎರಡನೇ ಹಂತ: ಚುನಾವಣಾ ಆಯೋಗ ಹೇಳಿಕೆ

ಶೇ 99ಕ್ಕೂ ಅಧಿಕ ಅರ್ಜಿಗಳ ವಿತರಣೆ

ನವದೆಹಲಿ (ಪಿಟಿಐ): ಒಂಬತ್ತು ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಭಾಗವಾಗಿ ಶೇ 99ಕ್ಕೂ ಹೆಚ್ಚು ಮತದಾರರಿಗೆ ಅರ್ಜಿ ನಮೂನೆಗಳನ್ನು ವಿತರಿಸಲಾಗಿದೆ ಎಂದು ಚುನಾವಣಾ ಆಯೋಗ ಸೋಮವಾರ ತಿಳಿಸಿದೆ.


ಎರಡನೇ ಹಂತದ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಈವರೆಗೆ 50.50 ಕೋಟಿ ಅರ್ಜಿ ನಮೂನೆಗಳನ್ನು ವಿತರಿಸಲಾಗಿದೆ. ಅಂದರೆ, ಒಂಬತ್ತು ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಒಟ್ಟು 50.97 ಕೋಟಿ ಮತದಾರರಲ್ಲಿ ಇದುವರೆಗೆ ಶೇ 99.07ರಷ್ಟು ಮಂದಿಗೆ ಅರ್ಜಿ ನಮೂನೆ ವಿತರಿಸಿದಂತೆ ಆಗಿದೆ ಎಂದು ಹೇಳಿದೆ.

ಮೊದಲ ಹಂತದ ಎಸ್‌ಐಆರ್ ಪ್ರಕ್ರಿಯೆಯನ್ನು ಬಿಹಾರದಲ್ಲಿ ನಡೆಸಲಾಗಿದೆ. ಚುನಾವಣಾ ಆಯೋಗವು ಎರಡನೇ ಹಂತದಲ್ಲಿ ಛತ್ತೀಸಗಢ, ಗೋವಾ, ಗುಜರಾತ್, ಕೇರಳ, ಮಧ್ಯ ಪ್ರದೇಶ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಪುದುಚೇರಿ, ಅಂಡಮಾನ್ ಮತ್ತು ನಿಕೋಬಾರ್ ಹಾಗೂ ಲಕ್ಷದ್ವೀಪದಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸುತ್ತಿದೆ. ಇಲ್ಲಿ ನಮೂನೆ ವಿತರಣೆ ಪ್ರಕ್ರಿಯೆ ನ.4ರಂದು ಆರಂಭವಾಗಿದ್ದು, ಡಿ.4ರವರೆಗೆ ಮುಂದುವರಿಯಲಿದೆ. ಎಸ್‌ಐಆರ್ ಕೈಗೊಂಡಿರುವ ತಮಿಳು ನಾಡು, ಪುದುಚೇರಿ, ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಮುಂದಿನ ವರ್ಷ ವಿಧಾನಸಭಾ ಚುನಾವಣೆ ನಡೆಯಲಿದೆ.

ಕ್ಯಾಂಪ್ ಕಚೇರಿಗೆ ಬೆಂಕಿ– ಟಿಎಂಸಿ ಆರೋಪ (ಕೋಲ್ಕತ್ತ ವರದಿ): ಪಶ್ಚಿಮ ಬಂಗಾಳದ ನಾದಿಯಾ ಜಿಲ್ಲೆಯ ಕಲ್ಯಾಣಿ ಪಟ್ಟಣದಲ್ಲಿ ಪಕ್ಷವು ನಿರ್ಮಿಸಿದ್ದ ಎಸ್‌ಐಆರ್ ಕ್ಯಾಂಪ್ ಕಚೇರಿಗೆ ಬಿಜೆಪಿ ಬೆಂಕಿ ಹಚ್ಚಿದೆ ಎಂದು ತೃಣಮೂಲ ಕಾಂಗ್ರೆಸ್ ಸೋಮವಾರ ಆರೋಪಿಸಿದೆ.

'ಕಲ್ಯಾಣಿ ಪಟ್ಟಣದ ವಾರ್ಡ್ ಸಂಖ್ಯೆ 6ರಲ್ಲಿರುವ ಕಚೇರಿಯನ್ನು ಧ್ವಂಸಗೊಳಿಸಿ, ಸುಟ್ಟುಹಾಕಲಾಗಿದೆ. ಇದು ಬಿಜೆಪಿಯವರ ಕೆಲಸ' ಎಂದು ಟಿಎಂಸಿ ತನ್ನ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದೆ. ಧ್ವಂಸಗೊಂಡ ಕಚೇರಿಯ ವಿಡಿಯೊವನ್ನು ಹಂಚಿಕೊಂಡಿದೆ.

ಹಕೀಂಪುರಕ್ಕೆ ರಾಜ್ಯಪಾಲ ಭೇಟಿ



ಆನಂದ್ ಬೋಸ್

ಕೋಲ್ಕತ್ತ:ಎಸ್‌ಐಆರ್ ಪ್ರಕ್ರಿಯೆ ಕಾರಣದಿಂದ ಬಾಂಗ್ಲಾದೇಶಕ್ಕೆ 'ಮರು ವಲಸೆ' ನಡೆಯುತ್ತಿರುವುದನ್ನು ಪರಿಶೀಲಿಸಲು ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ. ಆನಂದ್ ಬೋಸ್ ಅವರು ಹಕೀಂಪುರದ ಅಂತರರಾಷ್ಟ್ರೀಯ ಗಡಿಗೆ ಸೋಮವಾರ ಭೇಟಿ ನೀಡಿದರು.

'ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ಆರಂಭವಾದ ಬಳಿಕ ಬಾಂಗ್ಲಾದೇಶದ ಅಕ್ರಮ ವಲಸಿಗರು ತಮ್ಮ ದೇಶಕ್ಕೆ ಮರಳಲು ಪ್ರಯತ್ನಿಸುತ್ತಿದ್ದಾರೆ ಎಂಬ ಮಾಧ್ಯಮ ವರದಿಗಳ ಬಗ್ಗೆ ಹಲವು ರೀತಿಯ ವ್ಯಾಖ್ಯಾನಗಳನ್ನು ಮಾಡಲಾಗುತ್ತಿದೆ. ನಾನು ಸ್ಥಳಕ್ಕೆ ತೆರಳಿ ಪರಿಸ್ಥಿತಿಯನ್ನು ಅವಲೋಕಿಸಲು ಬಯಸುತ್ತೇನೆ. ಆ ಬಳಿಕವಷ್ಟೇ ನನ್ನ ಅಭಿಪ್ರಾಯ ತಿಳಿಸಬಹುದು' ಎಂದು ಹಕೀಂ ಪುರಕ್ಕೆ ತೆರಳುವ ಮುನ್ನ ಕೋಲ್ಕತ್ತದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ನೌಕಾಪಡೆಗೆ 'ಮಾಹೆ' ಸೇರ್ಪಡೆ

ಮುಂಬೈ (ಪಿಟಿಐ): ದೇಶಿ ನಿರ್ಮಿತ ಜಲಾಂತರ್ಗಾಮಿ ನಿಗ್ರಹ ಯುದ್ಧನೌಕೆ 'ಐಎನ್‌ಎಸ್ ಮಾಹೆ'ಯು ಭಾರತೀಯ ನೌಕಾಪಡೆಗೆ ಸೋಮವಾರ ಸೇರ್ಪಡೆಗೊಂಡಿತು.

ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಹೊಸ ತಲೆಮಾರಿನ ದೇಶೀಯ ಯುದ್ಧ ನೌಕೆಯನ್ನು ನೌಕಾಪಡೆಗೆ ಸೇರ್ಪಡೆ ಮಾಡಿದರು.

'ಮಾಹೆ'ಯನ್ನು ಕೊಚ್ಚಿನ್ ಶಿಪ್‌ಯಾರ್ಡ್ ಲಿಮಿಟೆಡ್ (ಸಿಎಸ್‌ಎಲ್) ನಿರ್ಮಿಸಿದ್ದು, ನೌಕೆಯ ವಿನ್ಯಾಸ ಹಾಗೂ ನಿರ್ಮಾಣವು ಆತ್ಮನಿರ್ಭರ ಭಾರತ ಉಪಕ್ರಮವನ್ನು ಪ್ರತಿನಿಧಿಸುತ್ತದೆ.

ಕರಾರುವಾಕ್ಕಾದ ಗುರಿ ಮತ್ತು ಚುರುಕುತನದ ಮೂಲಕ ದೇಶದ ಕರಾವಳಿಯಲ್ಲಿ ಪ್ರಾಬಲ್ಯ ಸಾಧಿಸಲು ಬೇಕಾದ ಸಾಮರ್ಥ್ಯವನ್ನು ಮಾಹೆ ಯುದ್ಧ ನೌಕೆ ಹೊಂದಿದೆ. ರಹಸ್ಯ ಕಾರ್ಯಾಚರಣೆ, ಕರಾವಳಿ ಗಸ್ತು, ಜಲಾಂತರ್ಗಾಮಿ ನೌಕೆಗಳ ನಿಗ್ರಹ ಸಾಮರ್ಥ್ಯವನ್ನು ಇದು ಹೊಂದಿದೆ ಎಂದು ನೌಕಾಪಡೆಯು ತಿಳಿಸಿದೆ.

ವೈಶಿಷ್ಟ್ಯವೇನು?

- ಟಾರ್ಪೆಡೊ (ಜಲ ಕ್ಷಿಪಣಿ), ಜಲಾಂತರ್ಗಾಮಿ ನಿಗ್ರಹ ರಾಕೆಟ್‌ಗಳನ್ನು ಒಳಗೊಂಡಿರಲಿದೆ
- ನೌಕೆ ನಿರ್ಮಾಣಕ್ಕೆ ಶೇಕಡ 80ರಷ್ಟು ದೇಶೀಯ ವಸ್ತುಗಳ ಬಳಕೆ
- ಮಾಹೆ ಶ್ರೇಣಿಯ ಮೊದಲ ಜಲಾಂತರ್ಗಾಮಿ ನಿಗ್ರಹ ನೌಕೆ
- ನೌಕೆಗೆ ಮಲಬಾರಿನ ಐತಿಹಾಸಿಕ ಕರಾವಳಿ ನಗರ 'ಮಾಹೆ'ಯ ಹೆಸರನ್ನು ಇಡಲಾಗಿದೆ
- ನೌಕೆಯ ಲಾಂಛನದಲ್ಲಿ ಕಳರಿಪಯಟ್ಟು ಯುದ್ಧ ಕಲೆಯಲ್ಲಿ ಬಳಸುವ ಕತ್ತಿ (ಉರುಮಿ) ಚಿಹ್ನೆ ಬಳಕೆ. ಚುರುಕುತನ, ನಿಖರತೆ, ಕರಾರುವಕ್ಕಾದ ಗುರಿಯ ಸಂಕೇತವಾಗಿ ಬಳಕೆ

ಮಹಿಳೆಯರ ನೆರವಿಗೆ ಹೊಸ ಸಹಾಯವಾಣಿ

ನವದೆಹಲಿ (ಪಿಟಿಐ): ಮಹಿಳೆಯರ ವಿರುದ್ಧದ ಹಿಂಸಾಚಾರ, ದೌರ್ಜನ್ಯ ಮತ್ತು ಯಾವುದೇ ರೀತಿಯ ಅವಮಾನಗಳಾದಾಗ ತುರ್ತು ನೆರವು ನೀಡುವ ಹೊಸ ಸಹಾಯ ವಾಣಿಗೆ ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) ಸೋಮವಾರ ಚಾಲನೆ ನೀಡಿದೆ.

ಹೊಸ 24X7 ಸಹಾಯವಾಣಿಯ ಸಂಖ್ಯೆ 14490ಕ್ಕೆ ಉಚಿತವಾಗಿ ಕರೆ ಮಾಡಬಹುದು ಮತ್ತು ಈ ಸಂಖ್ಯೆಯನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಹುದು ಎಂದು ಎನ್‌ಸಿಡಬ್ಲ್ಯು ತಿಳಿಸಿದೆ.

ಸಹಾಯವಾಣಿಯನ್ನು ಸಂಪರ್ಕಿಸುವವರಿಗೆ ಉಚಿತವಾಗಿ ಮಾರ್ಗದರ್ಶನ ನೀಡಲಾಗುತ್ತದೆ, ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲಾಗುತ್ತದೆ ಮತ್ತು ತುರ್ತು ನೆರವು ನೀಡಲಾಗುತ್ತದೆ ಎಂದು ಹೇಳಿದೆ.

'ಭಾರತ ಪಾಸ್‌ಪೋರ್ಟ್ ಅಸಿಂಧು ಎಂದ ಚೀನಾ'

ಇಟಾನಗರ (ಪಿಟಿಐ): ಚೀನಾದ ಶಾಂಘೈ ವಿಮಾನ ನಿಲ್ದಾಣದಲ್ಲಿ ವಲಸೆ ಅಧಿಕಾರಿಗಳು, ಭಾರತದ ಪಾಸ್‌ಪೋರ್ಟ್ ಅನ್ನು ಪರಿಗಣಿಸಲು ನಿರಾಕರಿಸಿ 18 ತಾಸು ವಶಕ್ಕೆ ಪಡೆದಿದ್ದರು ಎಂದು ಬ್ರಿಟನ್‌ನಲ್ಲಿ ನೆಲಸಿರುವ ಅರುಣಾಚಲ ಪ್ರದೇಶದ ಮಹಿಳೆ ಆರೋಪಿಸಿದ್ದಾರೆ.

ಪ್ರೇಮಾ ವಾಂಗ್‌ಜೊಮ್ ತೊಂಗ್‌ಡಾಕ್ ಅವರು ನವೆಂಬರ್ 21ರಂದು ಲಂಡನ್‌ನಿಂದ ಜಪಾನ್‌ಗೆ ಪ್ರಯಾಣಿಸುತ್ತಿದ್ದರು. ವಿಮಾನ ಬದಲಾವಣೆಗಾಗಿ ಶಾಂಘೈ ವಿಮಾನ ನಿಲ್ದಾಣದಲ್ಲಿ ಇಳಿದಿದ್ದಾಗ ವಲಸೆ ಅಧಿಕಾರಿಗಳು, ಪ್ರೇಮಾ ಅವರ ಪಾಸ್‌ಪೋರ್ಟ್ ಪರಿಶೀಲಿಸಿ, 'ಜನ್ಮಸ್ಥಳವನ್ನು ಅರುಣಾಚಲ ಪ್ರದೇಶ ಎಂದು ದಾಖಲಿಸಲಾಗಿದೆ. ಹೀಗಾಗಿ ಇದನ್ನು ಪರಿಗಣಿಸಲು ಸಾಧ್ಯವಿಲ್ಲ' ಎಂದು ಘೋಷಿಸಿದ್ದರು ಎಂದು ದೂರಿದ್ದಾರೆ.

'ಅರುಣಾಚಲ ಪ್ರದೇಶ ಚೀನಾದ ಭಾಗ ಎಂದು ಒತ್ತಿ ಹೇಳಿದ ಅಧಿಕಾರಿಗಳು, ಅದನ್ನೇ ಒಪ್ಪಿಕೊಳ್ಳುವಂತೆ ಒತ್ತಾಯಿಸಿದರು. ಯಾವುದೇ ವಿವರಣೆ ನೀಡದೆ 18 ತಾಸು ವಶಕ್ಕೆ ಪಡೆದಿದ್ದರು. ಈ ಸಂದರ್ಭದಲ್ಲಿ ಊಟ ಮತ್ತು ಅಗತ್ಯ ಸೌಲಭ್ಯ ಒದಗಿಸಿದ್ದರು' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಸ್ನೇಹಿತರ ಮುಖಾಂತರ ಶಾಂಘೈನಲ್ಲಿರುವ ಭಾರತದ ಕಾನ್ಸುಲೇಟ್ ಕಚೇರಿಯನ್ನು ಸಂಪರ್ಕಿಸಿದೆ. ಬಳಿಕ ಕಾನ್ಸುಲೇಟ್ ಅಧಿಕಾರಿಗಳು ಮಧ್ಯ ಪ್ರವೇಶಿಸಿ ಜಪಾನ್‌ಗೆ ತೆರಳಲು ವಿಮಾನ ಹತ್ತಲು ನೆರವಾದರು' ಎಂದು ಅವರು ತಿಳಿಸಿದ್ದಾರೆ.

ಪ್ರೇಮಾ ಅವರು ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ವಿದ್ಯಾರ್ಥಿ ಆತ್ಮಹತ್ಯೆ: ಪ್ರತಿಭಟನೆ

ನವದೆಹಲಿ (ಪಿಟಿಐ): ಮಾನಸಿಕ ಕಿರುಕುಳದಿಂದ 10ನೇ ತರಗತಿಯ ವಿದ್ಯಾರ್ಥಿ ದೆಹಲಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾದ ಪ್ರಕರಣವು ತೀವ್ರ ಪ್ರತಿಭಟನೆಗೆ ಕಾರಣವಾಯಿತು.

ದೆಹಲಿಯ ಸೇಂಟ್ ಕೊಲಂಬಸ್ ಶಾಲೆಯ ಎದುರು ಜಮಾಯಿಸಿದ್ದ ವಿದ್ಯಾರ್ಥಿಗಳು ಮತ್ತು ಪೋಷಕರು, ದೂರಿನಲ್ಲಿ ಉಲ್ಲೇಖಿಸಲಾಗಿರುವ ಶಿಕ್ಷಕರು ಮತ್ತು ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಮೃತ ವಿದ್ಯಾರ್ಥಿಯ ತಂದೆ ಕೂಡ ಪ್ರತಿಭಟನೆಯಲ್ಲಿ ಭಾಗಿಯಾದರು.

'ಬಾಲಕನಿಗೆ ನ್ಯಾಯ ಸಿಗಲಿ', 'ವಿದ್ಯಾರ್ಥಿಗಳ ಮೇಲೆ ದೌರ್ಜನ್ಯ ಬೇಡ' ಎಂಬ ಫಲಕಗಳನ್ನು ಪ್ರತಿಭಟನಾಕಾರರು ಹಿಡಿದುಕೊಂಡಿದ್ದರು.

'ತುಂಬಾ ದುಃಖಿತನಾಗಿದ್ದ ವಿದ್ಯಾರ್ಥಿಯು ಮನೆಗೆ ಹೋಗಲಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಮೆಟ್ರೊ ನಿಲ್ದಾಣದಲ್ಲಿ ಮರಣಪತ್ರವನ್ನು ಬರೆದಿದ್ದ' ಎಂದು ಮೃತ ವಿದ್ಯಾರ್ಥಿಯ ಸಹಪಾಠಿಯೊಬ್ಬರು ತಿಳಿಸಿದ್ದಾರೆ.

ವಿದ್ಯಾರ್ಥಿಯು ದೆಹಲಿಯ ರಾಜೇಂದ್ರ ಪ್ಲೇಸ್ ಮೆಟ್ರೊ ನಿಲ್ದಾಣದ ಪ್ಲಾಟ್‌ಫಾರ್ಮ್‌ನಿಂದ ನವೆಂಬರ್ 18ರಂದು ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸಾವಿಗೂ ಮುನ್ನ ಮರಣಪತ್ರವನ್ನು ಬರೆದಿರುವ ವಿದ್ಯಾರ್ಥಿ, ತನಗೆ ಮಾನಸಿಕ ಹಿಂಸೆ ನೀಡಲಾಗಿದೆ ಎಂದು ಹಲವು ಶಿಕ್ಷಕರ ಹೆಸರನ್ನು ಉಲ್ಲೇಖಿಸಿದ್ದಾನೆ.

ಮೂವರು ಶಿಕ್ಷಕರಿಗೆ ಸಮನ್ಸ್: ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಸೈಂಟ್ ಕೊಲಂಬಸ್ ಶಾಲೆಯ ಮೂವರು ಶಿಕ್ಷಕರಿಗೆ ಸೋಮವಾರ ಸಮನ್ಸ್ ನೀಡಲಾಗಿದೆ.

ರಾಜಕೀಯ ಪಕ್ಷಗಳು ನಗದು ರೂಪದಲ್ಲಿ ಪಡೆದ ದೇಣಿಗೆಗೆ ಸಂಬಂಧಿಸಿದ ಅರ್ಜಿ

ಕೇಂದ್ರದ ಪ್ರತಿಕ್ರಿಯೆ ಕೋರಿದ 'ಸುಪ್ರೀಂ'

ನವದೆಹಲಿ (ಪಿಟಿಐ): ರಾಜಕೀಯ ಪಕ್ಷಗಳು 'ಅನಾಮಧೇಯ' ಮೂಲಗಳಿಂದ ₹2,000ಕ್ಕಿಂತ ಕಡಿಮೆ ನಗದು ದೇಣಿಗೆ ಸ್ವೀಕರಿಸಲು ಅನುಮತಿಸುವ ಆದಾಯ ತೆರಿಗೆ ಕಾಯ್ದೆಯ ನಿಬಂಧನೆಯ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯ ಕುರಿತು ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರ ಮತ್ತು ಇತರರ ಪ್ರತಿಕ್ರಿಯೆ ಕೋರಿದೆ.

'ದೇಣಿಗೆಯ ಮೂಲವನ್ನು ಬಹಿರಂಗಪಡಿಸದೇ ಇರುವುದರಿಂದ ಮತದಾರರಿಗೆ ರಾಜಕೀಯ ಪಕ್ಷಗಳ ಬಳಿಯಿರುವ ನಿಧಿಯ ಮೂಲದ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಈ ಪಾರದರ್ಶಕತೆಯ ಕೊರತೆಯು ಚುನಾವಣಾ ಪ್ರಕ್ರಿಯೆಯ ಪರಿಶುದ್ಧತೆಯನ್ನು ಹಾಳು ಮಾಡುತ್ತದೆ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ನ್ಯಾಯಮೂರ್ತಿಗಳಾದ ವಿಕ್ರಮ ನಾಥ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠವು, ಅರ್ಜಿಯನ್ನು ನಾಲ್ಕು ವಾರಗಳ ಬಳಿಕ ವಿಚಾರಣೆಗೆ ಪಟ್ಟಿ ಮಾಡುವುದಾಗಿ ಸೋಮವಾರ ತಿಳಿಸಿತು.

'ನೀವು ಆರಂಭದಲ್ಲಿ ಹೈಕೋರ್ಟ್‌ಗೆ ಏಕೆ ಅರ್ಜಿ ಸಲ್ಲಿಸಲಿಲ್ಲ' ಎಂದು ಅರ್ಜಿದಾರರಾದ ಖೇಮ್ ಸಿಂಗ್ ಭಾಟಿ ಮತ್ತು ಸ್ನೇಹಾ ಕಲಿತಾ ಅವರ ಪರ ಹಾಜರಾದ ಹಿರಿಯ ವಕೀಲ ವಿಜಯ್ ಹಂಸಾರಿಯಾ ಅವರಲ್ಲಿ ಪೀಠವು ಕೇಳಿತು.

'ಈ ಅರ್ಜಿಯು ದೇಶದಾದ್ಯಂತ ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ಅವುಗಳು ಪಡೆಯುವ ದೇಣಿಗೆಗೆ ಸಂಬಂಧಿಸಿದ್ದಾಗಿದೆ' ಎಂದು ಹಂಸಾರಿಯಾ ಪೀಠಕ್ಕೆ ತಿಳಿಸಿದರು.

ಅರ್ಜಿಯ ವಿಚಾರಣೆಗೆ ಒಪ್ಪಿಕೊಂಡ ಪೀಠವು ಚುನಾವಣಾ ಆಯೋಗ, ಕೇಂದ್ರ ಸರ್ಕಾರ ಮತ್ತು ಬಿಜೆಪಿ ಹಾಗೂ ಕಾಂಗ್ರೆಸ್ ಸೇರಿದಂತೆ ಹಲವು ರಾಜಕೀಯ ಪಕ್ಷಗಳು ಮತ್ತು ಸಂಬಂಧಪಟ್ಟ ಇತರ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿತು.

'ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯ ದುರುಪಯೋಗ ಕಳವಳಕಾರಿ'

ವಿಫಲವಾದ ಅಥವಾ ಮುರಿದುಬಿದ್ದ ಸಂಬಂಧಗಳಿಗೆ ಕೊನೆಗೊಂದು ದಿನ ಅತ್ಯಾಚಾರದಂತಹ ಅಪರಾಧದ ಬಣ್ಣವನ್ನು ನೀಡುವ 'ಆತಂಕಕಾರಿ ಪ್ರವೃತ್ತಿ'ಯನ್ನು ಸುಪ್ರೀಂ ಕೋರ್ಟ್ ಗಂಭೀರವಾಗಿ ಪರಿಗಣಿಸಿದೆ.

'ಈ ವಿಚಾರದಲ್ಲಿ ಅಪರಾಧಿಕ ನ್ಯಾಯದಾನ ವ್ಯವಸ್ಥೆಯ ದುರುಪಯೋಗವು ಕಳವಳಕಾರಿ ಮತ್ತು ಖಂಡನಾರ್ಹ' ಎಂದು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಆರ್.ಮಹಾದೇವನ್ ಅವರಿದ್ದ ಪೀಠವು ಸೋಮವಾರ ತಿಳಿಸಿದೆ.

ಅತ್ಯಾಚಾರ ಪ್ರಕರಣವೊಂದರ ಎಫ್‌ಐಆರ್ ರದ್ದುಗೊಳಿಸಿದ ಸುಪ್ರೀಂ ಕೋರ್ಟ್, 'ಮುರಿದುಬಿದ್ದ ಪ್ರತಿಯೊಂದು ಸಂಬಂಧವನ್ನು ಅತ್ಯಾಚಾರದ ಅಪರಾಧವಾಗಿ ಪರಿವರ್ತಿಸುವುದು ಅಪರಾಧದ ಗಂಭೀರತೆಯನ್ನು ಲಘುವಾಗಿ ಕಾಣುವಂತೆ ಮಾಡುವುದಲ್ಲದೆ, ಆರೋಪಿಯ ಮೇಲೆ ಅಳಿಸಲಾಗದ ಕಳಂಕವನ್ನು ಉಂಟುಮಾಡುತ್ತದೆ' ಎಂದಿದೆ.

ನಿಜವಾದ ಲೈಂಗಿಕ ದೌರ್ಜನ್ಯ, ಬಲವಂತ ನಡೆದಿರುವ ಅಥವಾ ಪರಸ್ಪರ ಸಮ್ಮತಿಯಿಲ್ಲದ ಪ್ರಕರಣಗಳಿಗೆ ಮಾತ್ರ ಅತ್ಯಾಚಾರದ ಅಪರಾಧವನ್ನು ಅನ್ವಯಿಸಹುದು ಎಂದು ಪೀಠವು ಹೇಳಿತು. 2025ರ ಮಾರ್ಚ್‌ನಲ್ಲಿ ಬಾಂಬೆ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ವ್ಯಕ್ತಿಯೊಬ್ಬರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ತನ್ನ ತೀರ್ಪು ನೀಡಿದೆ.



ಚಳಿಗಾಲದ ದಮ್ಮು-ಕೆಮ್ಮುಗಳು

● ಡಾ.ವಿಜಯಲಕ್ಷ್ಮಿ ಪಿ.

ದೀಪಾವಳಿ, ತುಳಸಿ ಹಬ್ಬಗಳು ಮುಗಿಯಿತು ಎಂದರೆ ಬಿಸಿಲು–ಮಳೆಗಳು ಚಳಿರಾಯ ಬರುವ ಕಾಲ ಹತ್ತಿರ ಬಂದಿದೆ ಎಂದು ಅರ್ಥ. ಚಳಿಗಾಲದಲ್ಲಿ ವಾತಾವರಣದ ತಂಪಿನಿಂದಾಗಿ ಕಫ–ವಾತಗಳೆರಡೂ ಏಕಕಾಲದಲ್ಲಿ ಹೆಚ್ಚಾಗುವುದರಿಂದ ಅವರವರ ದೇಹಸ್ವಭಾವಕ್ಕೆ ಅನುಗುಣವಾಗಿ ಕೆಲವರಲ್ಲಿ ಗಂಟುನೋವು ಪ್ರಾರಂಭವಾದರೆ, ಕೆಲವರಲ್ಲಿ ಚರ್ಮರೋಗಗಳು, ಮೈಕೈ ನವೆ, ದದ್ದುಗಳು, ಅನೇಕರಿಗೆ, ಕೆಮ್ಮು, ದಮ್ಮು, ನೆಗಡಿ ಹೆಚ್ಚಾಗುತ್ತವೆ.

ಕೆಮ್ಮು, ದಮ್ಮು, ನೆಗಡಿಗಳಿಗೆ ದೀಪಾವಳಿಯವರೆಗೆ ಇದ್ದ ಮಳೆ-ಬಿಸಿಲಿನ ಆಟದ ಕಾರಣದಿಂದ ಉತ್ಪನ್ನವಾದ ಪಿತ್ತದ ಅಂಶದೊಂದಿಗೆ, ಚಳಿಗಾಲದ ತಂಪಿನಿಂದಾಗಿ ಹೆಚ್ಚಾಗುವ ಕಫವು ಸೇರಿ ಉರಿಶೀತದ ಉಪಟಳ ಆರಂಭವಾಗುತ್ತವೆ. ಪಿತ್ತದ ಉರಿಯೂ, ಕಫದ ಶೀತವೂ ಸೇರಿ, ಉಸಿರಾಟದ ವ್ಯವಸ್ಥೆಯನ್ನು ಹಾಳುಮಾಡುತ್ತದೆ. ಆಗ ಕೆಮ್ಮಿನೊಡನೆ ಕಫ ಬರುತ್ತದೆ ಮತ್ತು ಗಂಟಲು ಮತ್ತು ಮೂಗಿನಲ್ಲಿ ಉರಿಯಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಖಾರ ಕರಿದ ಪದಾರ್ಥಗಳ ಸೇವನೆಯನ್ನು ನಿಲ್ಲಿಸಬೇಕು, ಕಲ್ಲುಸಕ್ಕರೆಯನ್ನು ಚಪ್ಪರಿಸುವುದು, ದನಿಯಾ ಪುಡಿಗೆ ಸಕ್ಕರೆ ಮತ್ತು ತುಪ್ಪವನ್ನು ಬೆರೆಸಿ ಸೇವಿಸುವುದರಿಂದ ಕೆಮ್ಮಿದಾಗ ಉತ್ಪನ್ನವಾಗುವ ಉರಿಯು ಕಡಿಮೆಯಾಗುತ್ತದೆ. ತುಳಸಿಹಬ್ಬದಲ್ಲಿ ನೆಲ್ಲಿಕಾಯನ್ನು ತಿನ್ನಲು ಹೇಳುವುದು, ನೆಲ್ಲಿ ಮರದ ಕೆಳಗೆ ಧಾತ್ರಿ ಹವನ ಇತ್ಯಾದಿ ಸಂಪ್ರದಾಯಗಳ ಮೂಲಕ ನೆಲ್ಲಿಕಾಯಿಯ ಸೇವನೆಯನ್ನು ವಿಧಿಸಿರುವುದು ದೇಹದಲ್ಲಿ ಪಿತ್ತದ ಅಂಶ ಕಡಿಮೆಯಾಗಲೆಂದೇ.

ಅತಿ ಶೀತ ಪದಾರ್ಥಗಳ ನಿರಂತರ ಸೇವನೆ, ತಂಗಳು ಆಹಾರದ ಸೇವನೆ, ಬೆಳಗಿನ ಜಾವದಲ್ಲಿ ವಾಯುವಿಹಾರ, ಅತಿಯಾದ ನಿದ್ದೆ ಇವುಗಳಿಂದಾಗಿ ಹೆಚ್ಚಾದ ಕಫದಿಂದಾಗಿ ಎದೆಗೂಡು, ಪಕ್ಕೆಲುಬುಗಳಲ್ಲಿ ನೋವು ಜಿಗುಟಾದ ಕಫದಿಂದ ಕೂಡಿರುವ ಕೆಮ್ಮು ಉಂಟಾಗುತ್ತದೆ. ಬಿಸಿ ಪದಾರ್ಥಗಳ ಸೇವನೆ, ದೇಹವನ್ನು ಬೆಚ್ಚಗಿಡುವುದು, ಬಿಸಿನೀರಿಗೆ ತುಪ್ಪ ಬೆರೆಸಿ ಸೇವಿಸುವುದು, ತುಳಸಿ, ಶುಂಠಿರಸಗಳಿಗೆ ಜೇನು ಬೆರೆಸಿ ಸೇವಿಸುವುದು, ಅರ್ಧ ಚಮಚ ಅರಿಶಿನ ಮತ್ತು ಒಂದೆರಡು ಕಾಳುಮೆಣಸನ್ನು ಪುಡಿ ಮಾಡಿ, ಅರ್ಧಲೋಟ ಹಾಲು ಮತ್ತು ನೀರಿನೊಂದಿಗೆ ಬೆರೆಸಿ, ಹಾಲು ಮಾತ್ರ ಇಂಗುವಷ್ಟು ಕುದಿಸಿ, ದಿನಕ್ಕೆರಡು ಬಾರಿ ಸೇವಿಸುವುದರಿಂದ ಕೆಮ್ಮು-ನೆಗಡಿಗಳು ಕಡಿಮೆಯಾಗುತ್ತವೆ. ಹುಳಿ ಪದಾರ್ಥಗಳ, ಜೀರ್ಣಿಸಲು ಕಷ್ಟವಾಗುವ ಪದಾರ್ಥಗಳ ಸೇವನೆಯನ್ನು ನಿಲ್ಲಿಸಬೇಕು.

> ಚಳಿಗಾಲದ ವಾತಾವರಣದಿಂದ ಎದುರಾಗುವ ಹಲವು ಆರೋಗ್ಯ ಸಮಸ್ಯೆಗಳ ಪರಿಹಾರಕ್ಕೆ ಮನೆಮದ್ದು ಸಹಕಾರಿ

ಅತಿಯಾದ ತಂಪು ನೀರನ್ನು ಮಂಜುಗಡ್ಡೆಯಾಗಿ ಪರಿವರ್ತಿಸುವಂತೆ, ನಿರಂತರವಾಗಿ ತಂಪಾದ ವಾತಾವರಣದಲ್ಲಿ ಇರುವಾಗ ಪುಪ್ಪುಸದಲ್ಲಿ ಕಫವು ಒಣಗಿ ಹಿಡಿದು, ಹಿಡಿದು ಕೆಮ್ಮು ಬರುತ್ತದೆ. ಕಫವು ಹೊರಗೆ ಬರುವುದಿಲ್ಲ. ಬಿಸಿನೀರಿನ ಸೇವನೆ, ಬಿಸಿ ಬಿಸಿ ಆಹಾರದ ಸೇವನೆ, ಕೇವಲ ಜೀರಿಗೆ ಪುಡಿಗೆ ತುಪ್ಪ ಬೆರೆಸಿ ಸೇವಿಸುವುದು, ಅಥವಾ ದ್ರಾಕ್ಷಿ ಮತ್ತು ಜೀರಿಗೆಯನ್ನು ಬೆರೆಸಿ ಉಂಡೆ ಮಾಡಿ ಬಾಯಿಯಲ್ಲಿ ಇಟ್ಟು ಚಪ್ಪರಿಸುವುದರಿಂದ, ಎದೆಭಾಗಕ್ಕೆ ಒಗ್ಗರಣೆ ಎಣ್ಣೆ ಹಚ್ಚಿ ಶಾಖ ಕೊಡುವುದರಿಂದ ಕಫವು ಕರಗಿ ಕೆಮ್ಮು ಕಡಿಮೆಯಾಗುತ್ತದೆ.

ತಂಪಾದ ವಾತಾವರಣದಲ್ಲಿ ಕೆಲಸ ಮಾಡುವುದರ ಜೊತೆಗೆ, ವಿರುದ್ಧ ಆಹಾರಗಳಾದ ಹಾಲು ಮಜ್ಜಿಗೆ ಅಥವಾ ಮೊಸರನ್ನು, ಹಣ್ಣುಗಳನ್ನು ಬೆರೆಸಿ ಮಿಲ್ಕ್ ಶೇಕ್, ಸ್ಮೂದಿ ಇತ್ಯಾದಿ ಆಹಾರಗಳನ್ನು ನಿರಂತರವಾಗಿ ಸೇವನೆ, ಹಣ್ಣು ಮತ್ತು ಐಸ್ಕ್ರೀಂಗಳ ಮಿಶ್ರಣವನ್ನು ಸೇವನೆ – ಇವು ಎದೆಭಾಗದ ಮತ್ತು ಶ್ವಾಸಕೋಶದ ಮಾಂಸಖಂಡಗಳ ಸಂಕೋಚನವನ್ನು ಮಾಡಿ ದಮ್ಮನ್ನು ಉತ್ಪತ್ತಿ ಮಾಡುತ್ತದೆ. ಇಂತಹ ಆಹಾರ ಪದಾರ್ಥಗಳು ಜೀರ್ಣಶಕ್ತಿಯನ್ನೂ ಕುಂದಿಸುತ್ತವೆ, ಕೆಲವೊಮ್ಮೆ ಮಲಬದ್ಧತೆಯನ್ನೂ ಉಂಟುಮಾಡಬಹುದು. ಹಾಗಾಗಿ ಜೀರ್ಣ ಶಕ್ತಿಯನ್ನು ಹೆಚ್ಚಿಸುವ ಆಹಾರಗಳ ಸೇವನೆ, ಎಂದರೆ ಮೆಣಸಿನ ಸಾರು, ಹಿಪ್ಪಲಿಯನ್ನು ಜೇನಿನಲ್ಲಿ ಬೆರೆಸಿ ಸೇವಿಸುವುದು, ಸೈಂದುಪ್ಪು ಮತ್ತು ಕೊಬ್ಬರಿ ಎಣ್ಣೆ ಅಥವಾ ಎಳ್ಳೆಣ್ಣೆಯನ್ನು ಚೆನ್ನಾಗಿ ರಂಗಳಿಸಿ ಎದೆಯ ಭಾಗಕ್ಕೆ ಚೆನ್ನಾಗಿ ಉಜ್ಜಿ ಶಾಖ ಕೊಡುವುದರಿಂದ ಶ್ವಾಸಕೋಶದಲ್ಲಿರುವ ಕಫವು ಕರಗಿ ಹೊರಬರುತ್ತದೆ. ಇದರಿಂದ ದಮ್ಮು ಕಡಿಮೆ ಆಗುತ್ತದೆ. ಮಲ ಪ್ರವೃತ್ತಿ ಸರಿಯಾಗಿ ಆಗದಿದ್ದ ರಾತ್ರಿ ಮಲಗುವಾಗ ಬಿಸಿನೀರಿಗೆ ತುಪ್ಪವನ್ನು ಬೆರೆಸಿ ಸೇವಿಸುವುದರಿಂದ ದಮ್ಮು ಕಡಿಮೆಯಾಗುತ್ತದೆ.

ತಂಪಾದ ವಾತಾವರಣದಲ್ಲಿ ನಿರಂತರವಾಗಿ ಕೆಲಸ ಮಾಡುವುದು, ತಣ್ಣೀರಿನಲ್ಲಿ ಸ್ನಾನ ಮಾಡುವುದು, ಹಿಮದಲ್ಲಿ ಓಡಾಡುವುದು, ರಾತ್ರಿ ಹೊತ್ತಿನಲ್ಲಿ ತಂಪಾದ ಆಹಾರ ಪದಾರ್ಥಗಳನ್ನು ಸೇವಿಸುವುದು, ಇನ್ನಿತರ ಕಾರಣಗಳಿಂದ ತಲೆಯ ಭಾಗದಲ್ಲಿ ಕಫ ಸೇರುತ್ತದೆ. ವಿಪರೀತ ಖಾರವಾದ, ಮಸಾಲೆಯಿಂದ ಕೂಡಿರುವ ಆಹಾರ ಮತ್ತು ತಂಪಾದ ಆಹಾರಗಳನ್ನು ಒಟ್ಟಿಗೆ ಸೇವನೆ ಮಾಡುವುರಿಂದ, ಅಜೀರ್ಣ, ಹೊಟ್ಟೆಯುಬ್ಬರ, ಬಾಯಿರುಚಿ ಹಾಳಾಗುವುದರೊಂದಿಗೆ ನೆಗಡಿ ಶುರುವಾಗುತ್ತದೆ. ಹಾಗಾದಾಗ ಹಿತಕರವಾದ ಆಹಾರಸೇವನೆ ಅಗತ್ಯ. ಜೊತೆಗೆ ತುಳಸಿರಸದಿಂದ ತಯಾರಿಸಿದ ಎಣ್ಣೆಯನ್ನು ತಲೆಗೆ ಹಚ್ಚುವುದರಿಂದ ತಲೆಯಲ್ಲಿ ಸಂಚಿತವಾಗಿರುವ ಕಫವು ಕರಗಿ ನೆಗಡಿಯನ್ನು ಕಡಿಮೆಯಾಗುತ್ತದೆ. ಅರಿಶಿನದ ಕೊಂಬನ್ನು ತುಪ್ಪದಲ್ಲಿ ಅದ್ದಿ, ಸುಟ್ಟು ಅದರ ಧೂಪವನ್ನು ಸೇವಿಸುವುದರಿಂದ ನೆಗಡಿ ಕಡಿಮೆಯಾಗುತ್ತದೆ.

ನೆಗಡಿ, ಕೆಮ್ಮು, ದಮ್ಮು ಇವುಗಳ ಜೊತೆಗೆ ಮೈಕೈ ನೋವು, ತಲೆನೋವುಗಳು ಸಾಮಾನ್ಯ. ಅಗ ಜೀರ್ಣಕ್ಕೆ ಸುಲಭವಾಗುವ, ಅಲ್ಪಾಹಾರ ಸೇವನೆ, ಸಮಯಕ್ಕೆ ಸರಿಯಾಗಿ ಸುಖವಾದ ನಿದ್ರೆ, ಬಿಸಿನೀರನ್ನು ಆಗಾಗ ಕುಡಿಯುವುದು, ಹೀಗೆ ನಮ್ಮ ದಿನಚರಿಯನ್ನು ಸರಿಮಾಡಿಕೊಂಡಾಗ ಆ ಎಲ್ಲಾ ರೋಗಗಳೂ ಹತೋಟಿಯಲ್ಲಿರುತ್ತವೆ. ಅತಿಯಾದಾಗ ಸೂಕ್ತ ವೈದ್ಯರ ಸಲಹೆಯನ್ನು ಪಾಲಿಸಿ.

ಚಳಿಗಾಲ ಬಂತೆಂದರೆ ಅನೇಕರಿಗೆ ಗಂಟುನೋವು ಪ್ರಾರಂಭವಾಗುತ್ತದೆ. ತಂಪಿನ ವಾತಾವರಣದಿಂದಾಗಿ ಗಂಟುಗಳಲ್ಲಿ ಕಫವು ಗಟ್ಟಿಯಾಗಿ, ಗಂಟುಗಳ ಚಲನೆಗೆ ತೊಂದರೆ ಕೊಡುತ್ತದೆ. ಚಳಿಗಾಲದಲ್ಲಿ ಬರುವ ಗಂಟು ನೋವಿಗೆ ಎಣ್ಣೆ ಹಚ್ಚಿ ವ್ಯಾಯಾಮವನ್ನು ನಿರಂತರವಾಗಿ ಮಾಡುವುದರಿಂದ ತಡೆಗಟ್ಟಬಹುದು. ಅಲ್ಲದೆ ಶುಂಠಿಯನ್ನು ಅರೆದು ಗಂಟುಗಳಿಗೆ ಲೇಪ ಹಾಕುವುದರಿಂದಲೂ, ಗಂಟುಗಳಿಗೆ ಬಿಸಿನೀರ ಶಾಖ ಕೊಡುವುದರಿಂದಲೂ ಗಂಟುನೋವು ಕಡಿಮೆ ಆಗುತ್ತದೆ.

ಇವೆಲ್ಲ ಮನೆಯಲ್ಲಿಯೇ ಮಾಡಬಹುದಾದ ಪ್ರಥಮ ಚಿಕಿತ್ಸೆಗಳಾದರೂ, ತೊಂದರೆ ಹೆಚ್ಚಾದಾಗ ವೈದ್ಯರ ಸಲಹೆಯಂತೆ ಮುಂದುವರಿಯಬೇಕು. ❖

ಚರ್ಮದ ಬ್ಯಾಕ್ಟೀರಿಯಾ ಸೋಂಕುಗಳು

● ಡಾ. ಬಿ.ಆರ್. ಸುಹಾಸ್

ಚರ್ಮದ ಹಲವು ಕಾಯಿಲೆಗಳಲ್ಲಿ ಸೋಂಕು ರೋಗಗಳೂ ಒಂದು. ಸೋಂಕು ರೋಗಗಳು ರೋಗಾಣುಗಳೆಂಬ ಸಣ್ಣ ಸಣ್ಣ ಜೀವಿಗಳಿಂದ ಉಂಟಾಗುವುದರಿಂದ ಇವು ಒಬ್ಬರಿಂದೊಬ್ಬರಿಗೆ ಸ್ಪರ್ಶದ ಮೂಲಕ ಹರಡುತ್ತವೆ. ಹಾಗಾಗಿ ಇವನ್ನು ಅಂಟುರೋಗಗಳೆಂದೂ ಕರೆಯಲಾಗುತ್ತದೆ. ಇತರ ಅಂಗಾಂಗಗಳಿಗೆ ಉಂಟಾಗುವಂತೆ, ಚರ್ಮಕ್ಕೂ ಬ್ಯಾಕ್ಟೀರಿಯಾ, ವೈರಾಣು, ಶಿಲೀಂಧ್ರ, ಮತ್ತು ಪರಾವಲಂಬಿಗಳಿಂದ ಸೋಂಕು ರೋಗಗಳು ಉಂಟಾಗುತ್ತವೆ. ಈಗ ಚರ್ಮಕ್ಕೆ ಬ್ಯಾಕ್ಟೀರಿಯಾಗಳಿಂದ ಉಂಟಾಗುವ ಕೆಲವು ಸಾಮಾನ್ಯ ರೋಗಗಳ ಬಗ್ಗೆ ತಿಳಿದುಕೊಳ್ಳೋಣ.

ಸಾಮಾನ್ಯವಾಗಿ ಬ್ಯಾಕ್ಟೀರಿಯಾಗಳಿಂದ ಉಂಟಾಗುವ ರೋಗಗಳಿಗೆ 'ಪಯೋಡರ್ಮ' (Pyoderma) ಎನ್ನುತ್ತಾರೆ. ಗ್ರೀಕ್ ಪದಗಳಾದ 'ಪಯೋ' ಎಂದರೆ 'ಪಸ್' ಅಥವಾ 'ಕೀವು' ಮತ್ತು 'ಡರ್ಮ' ಎಂದರೆ ಚರ್ಮ.

ಬ್ಯಾಕ್ಟೀರಿಯಾ ರೋಗಗಳಿಂದ ಚರ್ಮದಲ್ಲಿ ಕೀವು ಉಂಟಾಗುವುದರಿಂದ ಈ ಹೆಸರು ಬಂದಿದೆ. ಬ್ಯಾಕ್ಟೀರಿಯಾಗಳು ದೇಹದ ಮೇಲೆ ದಾಳಿ ಮಾಡಿದಾಗ, ರಕ್ತದಲ್ಲಿನ ಬಿಳಿ ರಕ್ತಕಣಗಳು ಅವುಗಳನ್ನು ಕೊಂದು ತಾವೂ ಸಾಯುತ್ತವೆ. ಸತ್ತ ಬ್ಯಾಕ್ಟೀರಿಯಾಗಳು ಮತ್ತು ಬಿಳಿ ರಕ್ತಕಣಗಳ ಮಿಶ್ರಿತ ಗಟ್ಟಿಯಾದ ಹಳದಿ ದ್ರವವೇ ಕೀವು. ಈ ಪಯೋಡರ್ಮದಲ್ಲಿ ಪ್ರಾಥಮಿಕ ಪಯೋಡರ್ಮ (Primary Pyoderma) ಮತ್ತು ದ್ವಿತೀಯ ಪಯೋಡರ್ಮ (Secondary Pyoderma) ಎಂಬ ಎರಡು ಮುಖ್ಯ ವಿಧಗಳಿವೆ. ಪ್ರಾಥಮಿಕ ಪಯೋಡರ್ಮ, ಯಾವುದೇ ಪೂರ್ವ ಕಾರಣವಿಲ್ಲದೆ ಚರ್ಮದ ಮೇಲೆ ನೇರವಾಗಿ ಕಾಣಿಸಿಕೊಳ್ಳುತ್ತದೆ. ಇದರಲ್ಲಿಯೂ ಅನೇಕ ರೋಗಗಳಿವೆ.



ಇಂಪೆಟಿಗೋ (Impetigo) : ಇದು ಚಿಕ್ಕ ಮಕ್ಕಳಲ್ಲಿ ಬರುವ ಸಾಮಾನ್ಯ ತೊಂದರೆ; ಹೆಚ್ಚಾಗಿ 'ಸಟಫೈಲೋಕಾಕಸ್', ಇಲ್ಲವೇ 'ಸ್ಟ್ರೆಪ್ಟೋಕಾಕಸ್' ಎಂಬ ಬ್ಯಾಕ್ಟೀರಿಯಾಗಳಿಂದ ಉಂಟಾಗುತ್ತದೆ. ಇದರಲ್ಲಿ 'ಬುಲ್ಲಸ್' (Bullous) ಮತ್ತು 'ನಾನ್ ಬುಲ್ಲಸ್' (Nonbullous) ಎಂಬ ಬಗೆಗಳಿವೆ. ಬುಲ್ಲಸ್ ಬಗೆಯಲ್ಲಿ ದೊಡ್ಡ ನೀರ್ಗುಳ್ಳೆಗಳಾಗುತ್ತವೆ; ಅವು ಒಡೆದು ಚರ್ಮ ಕಿತ್ತು, ನೋಯುತ್ತವೆ. ಇದು ಕಂಕುಳು, ತೊಡೆ ಸಂದು, ಬೆರಳುಗಳ ಮಧ್ಯೆ, ಸ್ತನಗಳ ಕೆಳಗೆ, ಹಾಗೂ ಪೃಷ್ಠಗಳಲ್ಲಾಗುತ್ತದೆ. ನವಜಾತ ಶಿಶುಗಳಲ್ಲಿ, ಪುಟ್ಟ ಮಕ್ಕಳಲ್ಲಿ, ಹಾಗೂ ರೋಗನಿರೋಧಕಶಕ್ತಿ ಬಹಳ ಕಡಿಮೆಯಿರುವ ಮತ್ತು ಮೂತ್ರಪಿಂಡ ವೈಫಲ್ಯವಿರುವ ವಯಸ್ಕರಲ್ಲಿ ಇದು ತೀವ್ರಸ್ವರೂಪ ಪಡೆದುಕೊಂಡಾಗ ದೊಡ್ಡ ಪ್ರಮಾಣದಲ್ಲಿ ಚರ್ಮ ಕಿತ್ತು ಬರುತ್ತದೆ. ಇದನ್ನು 'ಸ್ಟಫೈಲೋಕಾಕಲ್ ಸ್ಕಾಲ್ಡೆಡ್ ಸ್ಕಿನ್ ಸಿಂಡ್ರೋಮ್' (Staphylococcal Scalded Skin Syndrome) ಎನ್ನುತ್ತಾರೆ. ಇದೂ ಸೇರಿದಂತೆ ಬುಲ್ಲಸ್ ಇಂಪೆಟಿಗೋ ಕಡಿಮೆ ಪ್ರಮಾಣದಲ್ಲಿ ಆಗುತ್ತದೆ. ನಾನ್ ಬುಲ್ಲಸ್ ಇಂಪೆಟಿಗೋ ಹೆಚ್ಚಿನ ಪ್ರಮಾಣದಲ್ಲಿ ಉಂಟಾಗುತ್ತದೆ. ಇದರಲ್ಲಿ ಮೊದಲು ಸಣ್ಣ ನೀರ್ಗುಳ್ಳೆಗಳೂ ಕೀವು ಗುಳ್ಳೆಗಳಾಗಿ ಬೇಗನೆ ಒಡೆದು ಹಳದಿ, ಜೇನು ಬಣ್ಣದ ಹಕ್ಕಳೆಗಳಾಗುತ್ತವೆ. ಇದು ಹೆಚ್ಚಾಗಿ ಮೂಗು ಮತ್ತು ಬಾಯಿಯ ಬಳಿ, ಹಾಗೂ ಕೈಕಾಲುಗಳಲ್ಲಿ ಉಂಟಾಗುತ್ತದೆ. ನೋವು ಮತ್ತು ತುರಿಕೆಗಳಿರುತ್ತವೆ. ಇದು ಬಹಳ ಬೇಗನೆ ಅಂಟುವ ರೋಗ.

ಫಾಲಿಕ್ಯುಲೈಟಿಸ್ (Folliculitis): ರೋಮಕೂಪದ (Hair Follicle) ಮೇಲ್ಭಾಗದಲ್ಲಿ 'ಸ್ಟಫೈಲೋಕಾಕಸ್' ಬ್ಯಾಕ್ಟೀರಿಯಾ ಸೋಂಕಾದರೆ ಈ ತೊಂದರೆಯಾಗುತ್ತದೆ. ಸಣ್ಣ ಸಣ್ಣ ಕೀವು ಗುಳ್ಳೆಗಳಾಗುತ್ತವೆ. ಗಂಡಸರು ಗಡ್ಡ ಬೋಳಿಸುವಾಗ ರೋಮಕೂಪಗಳಿಗೆ ಗಾಯವಾಗಿ ಈ ಸೋಂಕಾಗಬಹುದು. ಮಧುಮೇಹ, ಕುಂದಿದ ರೋಗನಿರೋಧಕ ಶಕ್ತಿಯಂಥ ಕಾರಣಗಳಿಂದ ಪದೇ ಪದೇ ಆಗಬಹುದು.

ಫರಂಕಲ್ (Furuncle): ಸಾಮಾನ್ಯವಾಗಿ ಬಿಸಿಗುಳ್ಳೆ ಎಂದು ಕರೆಯಲಾಗುವ ಇದು, ರೋಮಕೂಪದ ಪೂರ್ಣ ಸೋಂಕಾಗಿರುತ್ತದೆ. ಕೆಂಪು ಗುಳ್ಳೆಯಾಗಿ, ಕ್ರಮೇಣ ಕೀವಿನಿಂದ ತುಂಬಿ ದಪ್ಪವಾಗುತ್ತದೆ. ಬಹಳ ನೋಯುತ್ತದೆ. ಅದು ಒಡೆದು ಕೀವು ಹೊರಬರಬಹುದು. ಇದೂ ಮಧುಮೇಹ, ರೋಗನಿರೋಧಕ ಶಕ್ತಿ ಕುಂದಿದ್ದರೆ, ಊಟ–ನಿದ್ರೆಗಳಲ್ಲಿ ವ್ಯತ್ಯಾಸ ಉಂಟಾದರೆ, ಮಾನಸಿಕ ಒತ್ತಡದಿಂದಲೂ ಉಂಟಾಗಬಹುದು.

ಕಾರ್ಬಂಕಲ್ (Carbuncle) : ಹಲವಾರು ರೋಮಕೂಪಗಳು ಒಟ್ಟಿಗೆ ಸೋಂಕಿಗೀಡಾದಾಗ ಈ ತೊಂದರೆಯಾಗುತ್ತದೆ. ದೊಡ್ಡ ಊತ ಉಂಟಾಗಿ ಕೀವು ಸೂಸುವ ಹಲವಾರು ರಂಧ್ರಗಳಾಗುತ್ತವೆ. ಮುಖ್ಯವಾಗಿ ಈ ತೊಂದರೆಯು ಮಧುಮೇಹ, ಕ್ಯಾನ್ಸರ್, ಏಡ್ಸ್ ರೋಗಿಗಳಲ್ಲಿ ಹಾಗೂ ಆಹಾರಕೊರತೆ, ಅಪೌಷ್ಟಿಕತೆಯಿಂದ ಬಳಲುತ್ತಿರುವವರಲ್ಲಿ ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಕುತ್ತಿಗೆ, ಬೆನ್ನುಗಳಲ್ಲಿ ಕಂಡುಬರುತ್ತದೆ. ನೋಡಲು ಕಲ್ಲಿದ್ದಲಿನಂತಿರುತ್ತದೆ. 'ಕಾರ್ಬಂಕಲ್' ಪದದ ಅರ್ಥ ಕಲ್ಲಿದ್ದಲು ಎಂದು.

ಹೈಡ್ರಡಿನೈಟಿಸ್ ಸಪ್ಪುರಟಿವ (Hydradenitis suppurativa) : ಬೊಜ್ಜು, ಅನುವಂಶಿಕ ಕಾರಣಗಳು, ಹಾರ್ಮೋನ್ ವ್ಯತ್ಯಾಸಗಳಿಂದ ಕಂಕುಳು ಚರ್ಮದಲ್ಲಿ ಕಂಡುಬರುತ್ತವೆ. ಇವೇ ಕೀವು ಸೂಸುವ ಗುಳ್ಳೆಗಳಾಗುತ್ತ, ವಾಸಿಯಾದಂತೆ ಒರಟು ಕಲೆಗಳಾಗುತ್ತವೆ. ಇದು ಹೆಚ್ಚಾಗಿ ಬೊಜ್ಜಿರುವ ಮಹಿಳೆಯರಲ್ಲಿ ಕಾಣಿಸಿಕೊಳ್ಳಬಹುದು.

ಕುರ ಅಥವಾ ಅಬ್ಸೆಸ್ (Abscess): ಮಧುಮೇಹ, ರೋಗನಿರೋಧಕ ಶಕ್ತಿಯ ಕುಂದುವಿಕೆ, ಕ್ಯಾನ್ಸರ್ ಚಿಕಿತ್ಸೆ, ಅಶುಚಿತ್ವ ಕಾರಣಗಳಿಂದ ಬ್ಯಾಕ್ಟೀರಿಯಾ ಸೋಂಕು ವಾಸಿಯಾಗದೇ ಕುರವಾಗಬಹುದು. ಕುರವೆಂದರೆ ಕೀವು ತುಂಬಿದ ಊತ. ಸೂಜಿಯಿಂದ ಚುಚ್ಚಿ ಕೀವನ್ನು ತೆಗೆಯಬೇಕಾಗುತ್ತದೆ.

ಎರಿಸಿಪಿಲಸ್ (Erysipelas) ಮತ್ತು ಸೆಲ್ಯುಲೈಟಿಸ್ (Cellulitis): ಎರಿಸಿಪಿಲಸ್ ಚರ್ಮದ ಮೇಲ್ಪದರಗಳನ್ನು ಬಾಧಿಸುವ ಬ್ಯಾಕ್ಟೀರಿಯಾ ಸೋಂಕಾಗಿದ್ದು, ನಿರ್ದಿಷ್ಟ ಅಂಚುಗಳ ಕೆಂಪು ಊತ ಇರುತ್ತದೆ. ಸೆಲ್ಯುಲೈಟಿಸ್ ಚರ್ಮದ ಒಳಭಾಗ ಮತ್ತು ಅಡಿಭಾಗಗಳನ್ನು ಬಾಧಿಸುವ ಬ್ಯಾಕ್ಟೀರಿಯಾ ಸೋಂಕಾಗಿದ್ದು, ಚಿಕಿತ್ಸೆ ಮಾಡದಿದ್ದರೆ ಮೈ ಎಲ್ಲ ಹರಡುತ್ತದೆ.

ದ್ವಿತೀಯ ಪಯೋಡರ್ಮ: ಚರ್ಮಕ್ಕೆ ಕಜ್ಜಿ, ಇಸುಬು, ಮೊದಲಾಗಿ ಬೇರೆ ಯಾವುದಾದರೂ ತೊಂದರೆಯಿದ್ದು ಅವುಗಳ ತುರಿಕೆಯಿಂದ ಗಾಯಗಳಾಗಿ ಇಲ್ಲವೇ ಏಟು ಬಿದ್ದು ಗಾಯಗಳಾಗಿ ಅವುಗಳಿಗೆ ಬ್ಯಾಕ್ಟೀರಿಯಾ ಸೋಂಕಾದರೆ ಅದನ್ನು ದ್ವಿತೀಯ ಪಯೋಡರ್ಮ ಎನ್ನುತ್ತಾರೆ. ❖

ಚಿಕಿತ್ಸೆ ಹೇಗೆ?

ಚರ್ಮದ ಬ್ಯಾಕ್ಟೀರಿಯಾ ಸೋಂಕುಗಳಿಗೆ ಮುಖ್ಯ ಚಿಕಿತ್ಸೆ ಎಂದರೆ ಆ್ಯಂಟಿ ಬಯಾಟಿಕ್‌ಗಳು (ಜೀವನಿರೋಧಕ ಔಷಧಗಳು).

ಅಮಾಕ್ಸಿಸಿಲಿನ್, ಸೆಫಲೋಸ್ಪೋರಿನಂಥ ಮಾತ್ರೆ– ಸಿರಪ್‌ಗಳು. ಚರ್ಮಕ್ಕೆ ಸವರಲು ಫ್ಯುಸಿಡಿಕ್ ಆಮ್ಲ, ಮ್ಯುಪಿರೋಸಿನಂಥ ಮುಲಾಮುಗಳು ದೊರೆಯುತ್ತವೆ. ಇವನ್ನು ಚರ್ಮವೈದ್ಯರ ನಿರ್ದೇಶನದಲ್ಲಿ ಬಳಸಬೇಕು. ಜ್ವರವಿದ್ದರೆ ಪ್ಯಾರಾಸಿಟಮಾಲ್ ಹಾಗೂ ನೋವಿದ್ದರೆ ನೋವುನಿವಾರಕ ಔಷಧಗಳನ್ನು ನೀಡಲಾಗುತ್ತದೆ. ಫರಂಕಲ್‌ಗಳಿಗೆ ಬಿಸಿ ನೀರಿನಲ್ಲಿ ಅದ್ದಿದ ಬಟ್ಟೆಯ ಶಾಖ ಕೊಡಬಹುದು. ಕೆಲವೊಮ್ಮೆ ಫರಂಕಲ್ ಮತ್ತು ಕುರಗಳಲ್ಲಿ ಸೂಜಿಯಿಂದ ಸಣ್ಣ ಛೇದನ ಮಾಡುವಂಥ ಶಸ್ತ್ರ ಚಿಕಿತ್ಸೆ ಬೇಕಾಗುತ್ತದೆ. ಅಂತೆಯೇ ಸೆಲ್ಯುಲೈಟಿಸ್ ಮತ್ತು ಹೈಡ್ರಡಿನೈಟಿಸ್ ಸಪ್ಪುರಟಿವ ಔಷಧಗಳಿಂದ ಗುಣವಾಗದಿದ್ದರೆ ಇದೇ ರೀತಿಯ ಶಸ್ತ್ರ ಚಿಕಿತ್ಸೆ ಬೇಕಾಗುತ್ತದೆ. ಫರಂಕಲ್ ಗಳು ಪದೇ ಪದೇ ಆಗುತ್ತಿದ್ದರೆ ರೋಗನಿರೋಧಕ ಶಕ್ತಿ ಹೆಚ್ಚಿಸಲು ಜೀವಸತ್ವಗಳ ಔಷಧಗಳು ಬೇಕಾಗಬಹುದು. ಹೈಡ್ರಡಿನೈಟಿಸ್ ಸಪ್ಪುರಟಿವ ಪದೇ ಪದೇ ಆಗುತ್ತ, ಗುಣವಾಗದೇ ತೀವ್ರವಾಗಿದ್ದರೆ, ದೋಷಿತ ಚರ್ಮವನ್ನು ಶಸ್ತ್ರ ಚಿಕಿತ್ಸೆಯಿಂದ ತೆಗೆಯಲಾಗುತ್ತದೆ. ಕೀವುಗುಳ್ಳೆಗಳನ್ನು ಸುಡುವ ಹಾಗೂ ಕೂದಲುಗಳನ್ನು ನಾಶಮಾಡುವ ಲೇಸರ್ ಚಿಕಿತ್ಸೆಯೂ ಇದೆ.

ಬ್ಯಾಕ್ಟೀರಿಯಾಗಳ ಸೋಂಕುಗಳನ್ನು ತಡೆಗಟ್ಟಲು ಶುಚಿತ್ವ ಬಹಳ ಮುಖ್ಯ. ನಿತ್ಯಸ್ನಾನ, ಒಗೆದ ಬಟ್ಟೆಗಳನ್ನು ಧರಿಸುವುದು ಮುಖ್ಯ. ಒಳ್ಳೆಯ ಆಹಾರ ಸೇವನೆ, ನಿದ್ರೆ, ಮತ್ತು ವ್ಯಾಯಾಮಗಳಿಂದ ರೋಗನಿರೋಧಕ ಶಕ್ತಿಯನ್ನು ಉತ್ತಮವಾಗಿಟ್ಟುಕೊಳ್ಳಬೇಕು. ಮಧುಮೇಹ ಇರುವವರು ಚರ್ಮದ ವಿಷಯದಲ್ಲಿ ಎಚ್ಚರವಾಗಿರಬೇಕು. ಗಾಯಗಳಾಗದಂತೆ ನೋಡಿಕೊಳ್ಳಬೇಕು. ಗಾಯಗಳಾದರೆ ಆ್ಯಂಟಿಬಯಾಟಿಕ್ ಮುಲಾಮುಗಳನ್ನು ಬಳಸಬೇಕು. ಕಜ್ಜಿ, ಇಸುಬು, ತುರಿಕೆಯ ರೋಗಗಳನ್ನು ಬೇಗ ವಾಸಿಮಾಡಿಕೊಳ್ಳಬೇಕು. ಅವು ಇತರರಿಗೆ ಹರಡುವುದನ್ನು ತಪ್ಪಿಸಲು ಬೇಗನೆ ಚಿಕಿತ್ಸೆ ಪಡೆಯಬೇಕು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–5 ಸಮಾಂತರ ಶ್ರೇಢಿ

ಅಭ್ಯಾಸ 5.2

3. ಕೆಳಗಿನ ಸಮಾಂತರ ಶ್ರೇಢಿಯ ಬಾಕ್ಸ್‌ಗಳಲ್ಲಿ ಖಾಲಿ ಬಿಟ್ಟಿರುವ ಪದಗಳನ್ನು ತುಂಬಿಸಿ.

(i) 2, ☐ , 26
(ii) ☐, 13, ☐ 3
(iii) 5 ☐, ☐, $9\frac{1}{2}$
(iv) – 4, ☐,☐ ,☐,☐, 6
(v) ☐, 38, ☐ ☐ ☐ 22

ಪರಿಹಾರ: (1) ನೀಡಿರುವ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ d ಆಗಿರಲಿ (..ಹಿಂದಿನ ಸಂಚಿಕೆಯಿಂದ)

ಮೂರನೇ ಪದ = $2+d+d = 2+2d$

ಪ್ರಶ್ನೆಯ ಪ್ರಕಾರ

$2+2d=26$
$2d=26-2$
$2d=24 \Rightarrow d=24/2=12$

ದ್ವಿತೀಯ ಪದ $=2+d=2+12=14$

(ii) ☐, 13, ☐, 3

2ನೇ ಪದ =13

$a+d=13$ ....(1)

ನಾಲ್ಕನೇ ಪದ

$a+(4-1)d=3$
$a+3d=3$ ....(2)

(1) ಮತ್ತು (2)ನ್ನು ಬಿಡಿಸುವುದರಿಂದ

$a=18 \quad d=-5$

$\therefore$ 3rd term $=a+(3-1)d$
$=a+2d$
$=18+2(-5)$
$=18-10=8$
$=18+2(-5)$
$=18-10=8$

ಹೀಗಾಗಿ ಬಿಟ್ಟುಹೋದ ಪದಗಳು 18 ಮತ್ತು 8

(iii) 5 ☐, ☐, $9\frac{1}{2}$

ಪರಿಹಾರ:–ನೀಡಿರುವ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ d ಆಗಿರಲಿ

$a=5 \qquad$ 4th term $9\frac{1}{2}$

$\Rightarrow 5+(4-1)d=\frac{19}{2} \quad (\because an=a+(n-1)d)$

$\Rightarrow 3d=\frac{19}{2}-5$

$\Rightarrow 3d=\frac{9}{2} \quad \Rightarrow \quad d=\frac{3}{2}$

$\therefore$ 2ನೇ ಪದ $=5+\frac{3}{2}=\frac{13}{2}=6\frac{1}{2}$

3ನೇ ಪದ $=\frac{13}{2}+\frac{3}{2}=8$

ಹೀಗಾಗಿ ಬಿಟ್ಟುಹೋದ ಪದಗಳು $6\frac{1}{2}$ ಮತ್ತು 8

(iv) – 4, ☐ ,☐, ☐ ,☐ , 6

ಪರಿಹಾರ:– ನೀಡಿರುವ ಸಮಾಂತರ ಶ್ರೇಢಿಯ ಸಾಮಾನ್ಯ ವ್ಯತ್ಯಾಸ d ಆಗಿರಲಿ

$a=-4 \qquad 6th\ term=6$

$\Rightarrow -4+(6-1)d=6(\because a_n=a+(n-1)d)$
$\Rightarrow -4+5d=6$
$\Rightarrow 5d=6+4$
$\Rightarrow 5d=10$
$\Rightarrow d=\frac{10}{5} \quad \Rightarrow \ =2$

$\therefore$ 2ನೇ ಪದ $=-4+2=-2$
3ನೇ ಪದ $=-2+2=-0$
4ನೇ ಪದ $=0+2=2$
5ನೇ ಪದ $=2+2=4$

ಹೀಗಾಗಿ ಬಿಟ್ಟುಹೋದ ಪದಗಳು –2, 0, 2, 4

(v) ☐, 38, ☐ ,☐, ☐, –22

ನೀಡಿರುವ ಸಮಾಂತರ ಶ್ರೇಢಿಯ ಮೊದಲ ಪದ a, ಸಾಮಾನ್ಯ ವ್ಯತ್ಯಾಸ d ಆಗಿರಲಿ

ಎರಡನೇ ಪದ = 38

$a+(2-1)d=38(\because a_n=a+(n-1)d)$
$a+d=38$ .... (1)

ಆರನೇ ಪದ= – 22

$a+(6-1)d=-22$
$a+5d=-22$ ....(2)

(1) ಮತ್ತು (2)ನ್ನು ಬಿಡಿಸಿದಾಗ

$-22 = 38-d+5d$

$\Rightarrow -22-38=4d$
$\Rightarrow -60=4d \Rightarrow d=-15$

ಸಮೀಕರಣ (1)ರಲ್ಲಿ d ಬೆಲೆಯಾದ –15ನ್ನು ಹಾಕಿದಾಗ

$a=38-(-15)$
$\Rightarrow 38+15=53$

ಸಮೀಕರಣ (1)ರಲ್ಲಿ d ಬೆಲೆಯಾದ –15ನ್ನು ಹಾಕಿದಾಗ

$a=38-(-15)$
$\Rightarrow 38+15=53$

$\therefore a=53 \quad d=-15$

$\therefore$ 3rd term $=53+(3-1)(-15)(\because a_n=a+(n-1)d)$
$=53-30=23$

4th term $=53+(4-1)(-15)(\because a_n=a+(n-1)d)$
$=8$

5th term $=53+(5-1)(-15)(\because a_n=a+(n-1)d)$
$=-7$

ಹೀಗಾಗಿ ಬಿಟ್ಟುಹೋದ ಪದಗಳು 53, 23, 8, –7

4) 3, 8, 13, 18... ಈ ಸಮಾಂತರ ಶ್ರೇಢಿಯ ಎಷ್ಟನೇ ಪದ 78?

ಪರಿಹಾರ:– ನೀಡಿರುವ ಸಮಾಂತರ ಶ್ರೇಢಿ 3, 8, 13, 18......

ಇಲ್ಲಿ $a=3 \quad d=8-3=5 \quad n^{th}$ ಪದ = 78

Then $a_n=a+(n-1)d$
$78=3+(n-1)(5)$
$5(n-1)=78-3 \Rightarrow 5(n-1)=75$
$n-1=\frac{75}{5}$
$n-1=15 \Rightarrow n=15+1 \Rightarrow n=16$

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

MATHS

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

INTEGRALS

3. What is $\int \frac{1}{x^n}dx$ equal to?

Ans:- $\int \frac{1}{x^n}dx = \frac{-1}{(n-1)x^{n-1}} + c \ (n \neq 1)$

4. What is $\int \frac{1}{x^2}dx$ equal to?

Ans:- $\int \frac{1}{x^2}dx = \frac{-1}{x} + c$

5. What is $\int \frac{1}{\sqrt{x}}dx$ equal to?

Ans:- $\int \frac{1}{\sqrt{x}}dx = 2\sqrt{x} + c$

6. What is $\int e^x dx$ equal to?

Ans:- $\int e^x dx = e^x + c$

7. What is $\int e^{ax+b} dx$ equal to?

Ans:- $\int e^{ax+b} dx = \frac{1}{a}e^{ax+b} + c$

8. What is $\int a^x dx$ equal to?

Ans:- $\int a^x dx = \frac{a^x}{\log a} + c$

9. What is $\int \sin x dx$ equal to?

Ans:- $\int \sin x\, dx = -\cos x + c$

10. What is $\int \sin ax\, dx$ equal to?

Ans:- $\int \sin ax\, dx = -\frac{1}{a}\cos ax + c$

11. What is $\int \cos x dx$ equal to?

Ans:- $\int \cos x\, dx = \sin x + c$

12. What is $\int \sec^2 x dx$ equal to?

Ans:- $\int \sec^2 x\, dx = \tan x + c$

13. What is $\int \operatorname{cosec}^2 x dx$ equal to?

Ans:- $\int \operatorname{cosec}^2 x\, dx = -\cot x + c$

14. What is $\int \sec x.\tan x dx$ equal to?

Ans :– $\int \sec x.\tan x\, dx = \sec x + c$

15. What is $\int \operatorname{cosec} x.\cot x dx$ equal to?

Ans :– $\int \operatorname{cosec} x.\cot x\, dx = -\operatorname{cosec} x$

16. What is $\int \frac{1}{\sqrt{1-x^2}}dx$ equal to?

Ans:- $\int \frac{1}{\sqrt{1-x^2}}dx = \sin^{-1} x + c$

17. What is $\int \frac{1}{1+x^2}dx$ equal to?

Ans:- $\int \frac{1}{1+x^2}dx = \tan^{-1} x + c$

18. What is $\int \frac{1}{x\sqrt{x^2-1}}dx$ equal to?

Ans :– $\int \frac{1}{x\sqrt{x^2-1}}dx = \sec^{-1} x + c$

19. What is $\int \sinh x dx$ equal to?

Ans:- $\int \sinh x\, dx = \cosh x + c$

20. What is $\int \cosh x dx$ equal to?

Ans:- $\int \cosh x\, dx = \sinh x + c$

21. What is $\int \operatorname{sech}^2 x dx$ equal to?

Ans:- $\int \operatorname{sech}^2 x\, dx = \tanh x + c$

22. What is $\int \operatorname{cosech}^2 x dx$ equal to?

Ans:- $\int \operatorname{cosech}^2 x\, dx = -\coth x + c$

23. What is $\int \operatorname{sech} x.\tanh x dx$ equal to?

Ans :– $\int \operatorname{sech} x.\tanh x\, dx = -\operatorname{sech} x + c$

24. What is $\int \operatorname{cosech} x.\coth x dx$ equal to?

Ans :– $\int \operatorname{cosech} x.\coth x\, dx = -\operatorname{cosech} x$

25. What is $\int \frac{1}{\sqrt{1+x^2}}dx$ equal to?

Ans :– $\int \frac{1}{\sqrt{1+x^2}}dx = \sinh^{-1} x + c$

26. What is $\int \frac{1}{\sqrt{x^2-1}}dx$ equal to?

Ans :– $\int \frac{1}{\sqrt{x^2-1}}dx = \cosh^{-1} x + c$

27. What is $\int \frac{1}{1+x^2}dx$ equal to?

Ans:- $\int \frac{1}{1+x^2}dx = \tan^{-1} x + c$

28. What is $\int e^{(2x-3)} dx$ equal to?

Ans :– $\int e^{(2x-3)} dx = \frac{1}{2}e^{(2x-3)} + c$

$\left(\because \int e^{ax+b}dx = \frac{1}{a}e^{ax+b} + c\right)$

29. What is $\int \sin 4x dx$ equal to?

Ans :– $\int \sin 4x\, dx = -\frac{1}{4}\cos 4x + c$

$\left(\because \int \sin ax\, dx = -\frac{1}{a}\cos ax + c\right)$

30. What is $\int \frac{1}{2x-5}dx$ equal to?

Ans :– $\int \frac{1}{2x-5}dx = \frac{1}{2}\log(2x-5) + c$

ಚಿಟಿಕೆ ಸುದ್ದಿ

ಕಾಮರಡ್ಡಿ ಕೆಎಸ್‌ಬಿಸಿ ನೂತನ ಅಧ್ಯಕ್ಷ



ಬೆಂಗಳೂರು: ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ನೂತನ ಅಧ್ಯಕ್ಷರನ್ನಾಗಿ ಧಾರವಾಡ ಹೈಕೋರ್ಟ್‌ನ ಹಿರಿಯ ವಕೀಲರಾದ ಕಾಮರಡ್ಡಿ ವೆಂಕರಡ್ಡಿ ದೇವರಡ್ಡಿ ಅವರನ್ನು ನಾಮನಿರ್ದೇಶನ ಮಾಡಲಾಗಿದೆ. ಭಾರತೀಯ ವಕೀಲರ ಪರಿಷತ್ ಪ್ರಧಾನ ಕಾರ್ಯದರ್ಶಿ ಶ್ರೀಮಂತೊ ಸೇನ್ ಅವರು ಸೋಮವಾರ ಈ ಕುರಿತು ಆದೇಶ ಹೊರಡಿಸಿದ್ದಾರೆ.

ಕಾಮರಡ್ಡಿ

ಐಸಿಡಿಎಸ್ ಪ್ರಚಾರ: ₹1 ಸಾವಿರ ಹೊರೆ

ಒಂದನೇ ಪುಟದಿಂದ...

ಈ ಅನುದಾನದಲ್ಲಿ ₹1 ಸಾವಿರವನ್ನು ಬ್ಯಾನರ್ ವೆಚ್ಚವಾಗಿ ಇಲಾಖೆಗೆ ನೀಡಬೇಕು. ಈ ಬ್ಯಾನರ್ ಆರು ತಿಂಗಳವರೆಗೆ ಅಂಗನವಾಡಿ ಕೇಂದ್ರಗಳ ಆವರಣದಲ್ಲಿ ಪ್ರದರ್ಶಿಸಬೇಕು ಎಂದು ಆದೇಶದಲ್ಲಿ ವಿವರಿಸಲಾಗಿದೆ.

'ನಿರ್ವಹಣೆಗಾಗಿ ವಾರ್ಷಿಕ ₹3 ಸಾವಿರ ನೀಡಲಾಗುತ್ತದೆ. ಅಂಗನವಾಡಿ ಕೇಂದ್ರದ ಮೂಲಸೌಲಭ್ಯ ನಿರ್ವಹಣೆ, ಸ್ಟೇಷನರಿ, ಪಾತ್ರೆಗಳ ಖರೀದಿಗೆ ಇದನ್ನು ಬಳಸಲಾಗುತ್ತದೆ. ಇದರಲ್ಲಿಯೇ ₹1 ಸಾವಿರ ನೀಡಿ ಬ್ಯಾನರ್ ಖರೀದಿಸುವಂತೆ ಇಲಾಖೆ ಸೂಚಿಸಿರುವುದು ಸರಿಯಲ್ಲ' ಎಂದು ಬೆಂಗಳೂರು ನಗರ ಜಿಲ್ಲೆಯ ಅಂಗನವಾಡಿ ಕಾರ್ಯಕರ್ತೆಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಭರವಸೆ: ಬಾಕಿಯತ್ತ ಖಾದರ್ 'ಕಣ್ಣು'

ಇಲಾಖೆಯ ಮುಖ್ಯಸ್ಥರಿಗೂ ಸೂಚನೆ ನೀಡಿದ ವಿಧಾನ ಸಭಾಧ್ಯಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: 16ನೇ ವಿಧಾನಸಭೆ ಅಸ್ತಿತ್ವಕ್ಕೆ ಬಂದ ನಂತರ ವಿವಿಧ ಇಲಾಖೆಗಳ ಸಚಿವರು ಸದನಕ್ಕೆ ನೀಡಿದ್ದ ಭರವಸೆಗಳ ತ್ವರಿತ ಈಡೇರಿಕೆಯತ್ತ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಚಿತ್ತ ಹರಿಸಿದ್ದಾರೆ.

ಈ ಕುರಿತು ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಸದಸ್ಯರು ಸದನದಲ್ಲಿ ಕೇಳಿದ ಪ್ರಶ್ನೆಗಳಿಗೆ ಕಾಲಮಿತಿಯ ಒಳಗೆ ಉತ್ತರ ನೀಡುವುದು, ಕೊಟ್ಟ ಭರವಸೆಗಳನ್ನು ತ್ವರಿತವಾಗಿ ಈಡೇರಿಸುವುದು ಪ್ರತಿಯೊಂದು ಇಲಾಖೆಯ ಜವಾಬ್ದಾರಿ. 2023-24ನೇ ಸಾಲಿನಿಂದ ಇಲ್ಲಿಯವರೆಗೂ ನಡೆದ ಏಳು ಅಧಿವೇಶನಗಳಲ್ಲಿ ನೀಡಿದ್ದ ಭರವಸೆಗಳಲ್ಲಿ ಬಾಕಿ ಇರುವ ಎಲ್ಲವನ್ನೂ ತಕ್ಷಣ ಇತ್ಯರ್ಥಪಡಿಸಲು ಪ್ರತಿ ಇಲಾಖೆಯ ಮುಖ್ಯಸ್ಥರಿಗೂ ಸೂಚಿಸಲಾಗಿದೆ' ಎಂದರು.

'ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆಗೆ ಆದ್ಯತೆ ನೀಡುತ್ತಾ ಬರಲಾಗಿದೆ. ಆದರೆ, ಹತ್ತು ಹಲವು ಕಾರಣಗಳಿಂದ ಪೂರ್ವಸಿದ್ಧತೆಯಂತೆ ಚರ್ಚೆಗಳು ಸಾಗುತ್ತಿಲ್ಲ. ಸಚಿವರು ನೀಡಿದ ಕೆಲ ಭರವಸೆಗಳು ಹಾಗೆಯೇ ಉಳಿದಿವೆ. ಮತ್ತೆ ಮುಂದಿನ ಅಧಿವೇಶನದಲ್ಲೂ ಅವೇ ಸಮಸ್ಯೆಗಳು ಪುನರಾವರ್ತನೆಯಾಗುತ್ತಿವೆ. ಈ ಬಾರಿ ಆರಂಭದಿಂದಲೇ ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆಗೆ ಅವಕಾಶ ನೀಡುವ ಕುರಿತು ಆಡಳಿತ ಮತ್ತು ಪ್ರತಿಪಕ್ಷಗಳ ನಾಯಕರ ಜತೆ ಚರ್ಚಿಸಲಾಗುವುದು. ನೀಡಿದ ಭರವಸೆಗಳ ಈಡೇರಿಕೆಗೆ ಕಾಲಮಿತಿ ನಿಗದಿ ಮಾಡಲಾಗುವುದು' ಎಂದು ಹೇಳಿದರು.

'ಕಳೆದ ಬಾರಿ 39 ಮಸೂದೆಗಳನ್ನು ಸದನದಲ್ಲಿ ಮಂಡಿಸಲಾಯಿತು. 37 ಮಸೂದೆಗಳನ್ನು ಅಂಗೀಕರಿಸಲಾಯಿತು. ಎಲ್ಲ ಮಸೂದೆಗಳ ಮೇಲೆ ಚರ್ಚೆಗೆ ಅವಕಾಶ ನೀಡಲಾಗಿತ್ತು. ಅದಕ್ಕಾಗಿ ಸಾಕಷ್ಟು ಸಮಯ ಮೀಸಲಿಡಲಾಯಿತು. ಸಾರ್ವಜನಿಕ ಹಿತದೃಷ್ಟಿಯಿಂದ ಮಸೂದೆಗಳ ಅಂಗೀಕಾರ ಅನಿವಾರ್ಯ. ಸದನದ ಮೊದಲ ಆದ್ಯತೆಯೇ ಮಸೂದೆಗಳು. ಹಾಗಾಗಿ, ಅಂಗೀಕಾರ ಪ್ರಕ್ರಿಯೆ, ಚರ್ಚೆ ನಡೆಸಲೇಬೇಕು. ಆದರೆ, ಸದನಕ್ಕೆ ಹೊರೆಯಾಗುತ್ತಿರುವುದು ಅನಗತ್ಯವಾದ ನಿಲುವಳಿ ಸೂಚನೆಗಳು. ಇಂತಹ ವಿಷಯಗಳಲ್ಲಿ ಆಡಳಿತ, ವಿರೋಧ ಪಕ್ಷಗಳ ಸದಸ್ಯರು ಸಹಕಾರ ನೀಡಬೇಕಾಗುತ್ತದೆ. ಕೆಲವೊಮ್ಮೆ ಅನಿರೀಕ್ಷಿತ ಬೆಳವಣಿಗೆಗಳು ಕಲಾಪಗಳ ಮೇಲೆ ಪರಿಣಾಮ ಬೀರಿ ಸಮಯ ವ್ಯರ್ಥ ಮಾಡುತ್ತವೆ' ಎಂದರು.

ಅಂಕಿ ಅಂಶಗಳು

1,367 16ನೇ ವಿಧಾನಸಭೆಯ ಅಧಿವೇಶನಗಳ ಬಾಕಿ ಭರವಸೆಗಳು

1,160 ಈಡೇರಿದ ಭರವಸೆಗಳು

207 ಇನ್ನೂ ಈಡೇರದ ಭರವಸೆಗಳು

'ಸಚಿವರಿದ್ದರೆ ಶಾಸಕರೂ ಇರುತ್ತಾರೆ'



ಸದನದಲ್ಲಿ ಎಲ್ಲ ಸಚಿವರೂ ಕಡ್ಡಾಯವಾಗಿ ಹಾಜರಿದ್ದರೆ ಸಹಜವಾಗಿ ಶಾಸಕರೂ ಇರುತ್ತಾರೆ. ಸಚಿವರು ಹೊರ ಹೋದರೆ ಹಲವು ಶಾಸಕರು ಅವರನ್ನು ಹಿಂಬಾಲಿಸುತ್ತಾರೆ. ಸದನದ ಅಮೂಲ್ಯ ಸಮಯ, ಚರ್ಚೆಗಳನ್ನು ಅರ್ಥಪೂರ್ಣಗೊಳಿಸಲು ಎಲ್ಲ ಸಚಿವರೂ ಪೂರ್ಣ ಸಮಯ ಮೀಸಲಿಡಲು ಕೋರಲಾಗಿದೆ ಎಂದು ಯು.ಟಿ.ಖಾದರ್ ಹೇಳಿದರು.

ಶಾಸಕರು ಬೇರೆ ಸಮಯಗಳಲ್ಲಿ ಕ್ಷೇತ್ರದ ಜನರನ್ನು ಭೇಟಿ ಮಾಡಿ, ಅವರ ಸಮಸ್ಯೆಗಳಿಗೆ ಧ್ವನಿಯಾಗಬೇಕು. ಸದನ ನಡೆಯುವಾಗ ಅಲ್ಲಿಗೆ ತಮ್ಮನ್ನು ಕಾಣಲು ಬರುವಂತೆ ಹೇಳಬಾರದು. ಸದನ ನಡೆಯುವಾಗ ಅವರ ಸಮಸ್ಯೆ ಆಲಿಸುತ್ತಾ ಹೊರಗೆ ಕುಳಿತು, ಗೈರು ಹಾಜರಾದರೆ ಸದನದಲ್ಲಿ ಜನರ ಸಮಸ್ಯೆಗೆ ಧ್ವನಿಯಾಗುವುದು ಹೇಗೆ? ಎಲ್ಲ ಶಾಸಕರೂ ಸದನಕ್ಕೆ ಕಡ್ಡಾಯವಾಗಿ ಹಾಜರಾಗುವಂತೆ ಕ್ಷೇತ್ರದ ಜನರೂ ಒತ್ತಾಯ ಮಾಡಬೇಕು ಎಂದು ಅವರು ಸಲಹೆ ನೀಡಿದರು.



ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ಬಿ.ವೈ. ವಿಜಯೇಂದ್ರ ಹೂಗುಚ್ಛ ನೀಡಿದರು

ಎಚ್‌ಡಿಕೆ–ವಿಜಯೇಂದ್ರ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ, ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೋಮವಾರ ಇಲ್ಲಿ ಭೇಟಿ ಮಾಡಿ, ಅರ್ಧ ಗಂಟೆ ಸಮಾಲೋಚಿಸಿದರು.

ರಾಜ್ಯದಲ್ಲಿ ಎನ್‌ಡಿಎ ಮೈತ್ರಿಯನ್ನು ಮತ್ತಷ್ಟು ಬಲಪಡಿಸಿ, ಆಡಳಿತದಲ್ಲಿ ಸಂಪೂರ್ಣ ವಿಫಲವಾಗಿರುವ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ನಡೆಸಲು ಕಾರ್ಯತಂತ್ರಗಳ ಕುರಿತು ಚರ್ಚಿಸಲಾಯಿತು ಎಂದು ವಿಜಯೇಂದ್ರ ತಿಳಿಸಿದರು.

ರಾಜ್ಯ ಸರ್ಕಾರದ ಆಡಳಿತ ವೈಫಲ್ಯ, ಭ್ರಷ್ಟಾಚಾರದ ವಿರುದ್ಧ ಜಂಟಿಯಾಗಿ ಹೋರಾಟ ಮಾಡಲು ರಾಜ್ಯಮಟ್ಟದ ಸಮನ್ವಯ ಸಮಿತಿ ರಚಿಸಲು ಉಭಯ ಪಕ್ಷಗಳು ಈ ಹಿಂದೆಯೇ ತೀರ್ಮಾನಿಸಿದ್ದವು. ಆದರೆ ಸಮಿತಿ ರಚನೆ ಆಗಿರಲಿಲ್ಲ. 'ಈ ಸಮಿತಿಯನ್ನು ಶೀಘ್ರ ರಚಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಉಭಯ ನಾಯಕರು ಚರ್ಚಿಸಿದರು' ಎಂದು ಮೂಲಗಳು ಹೇಳಿವೆ.

ಕಳೆದ ಮೂರು ದಿನಗಳಿಂದ ರಾಷ್ಟ್ರ ರಾಜಧಾನಿಯಲ್ಲಿದ್ದ ವಿಜಯೇಂದ್ರ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್, ಪಕ್ಷದ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದರು.

ಹೊರಗುತ್ತಿಗೆ ನಿಷೇಧಕ್ಕೆ ಕಾಯ್ದೆ

ಒಂದನೇ ಪುಟದಿಂದ...

'ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಸಂವಿಧಾನದ ವಿಧಿ 15 ಮತ್ತು 16ರ ಆಶಯಗಳು ಉಲ್ಲಂಘನೆ ಆಗದಂತೆ ಭರ್ತಿ ಮಾಡಬೇಕಿದೆ. ಸದ್ಯ ಹೊರಗುತ್ತಿಗೆ, ಒಳಗುತ್ತಿಗೆ, ದಿನಗೂಲಿ ಹಾಗೂ ಇತರೆ ವ್ಯವಸ್ಥೆಗಳ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದರಿಂದ ಪ್ರತಿಭಾನ್ವಿತ, ಅರ್ಹ ಅಭ್ಯರ್ಥಿಗಳು ಹುದ್ದೆ ವಂಚಿತರಾಗುತ್ತಿದ್ದಾರೆ. ಜೊತೆಗೆ, ಸಂವಿಧಾನದ ಆಶಯಗಳ ಉಲ್ಲಂಘನೆಯೂ ಆಗುತ್ತಿದೆ. ಹೀಗಾಗಿ, ಹೊರಗುತ್ತಿಗೆ ನೌಕರರ ಸೇವೆಯನ್ನು ಖಾಸಗಿ, ಸರ್ಕಾರೇತರ ಸಂಸ್ಥೆಗಳಿಂದ (ಎನ್‌ಜಿಒ) ಪಡೆಯುವ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರ್ಬಂಧಿಸುವ ಅಗತ್ಯವಿದೆ ಎಂದು ಎಚ್‌.ಕೆ. ಪಾಟೀಲ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ಶಿಫಾರಸು ಮಾಡಿದೆ' ಎಂದೂ ಮೂಲಗಳು ಹೇಳಿವೆ.

ಓಟದ ನೋಟ...

ಪ್ರಜಾವಾಣಿ ಚಿತ್ರ: ಭರತ್ ಕಂದಕೂರ



ಕೊಪ್ಪಳದಲ್ಲಿ ಸೋಮವಾರ ನಡೆದ ಅಂಗವಿಕಲರ ಕ್ರೀಡಾಕೂಟದ 100 ಮೀಟರ್ ಓಟ ಸ್ಪರ್ಧೆಯಲ್ಲಿ ಮಹಿಳೆಯರು ಗುರಿಯತ್ತ ಮುನ್ನುಗ್ಗಿದ ಬಗೆ

ರಾಹುಲ್ ಜತೆ ಹರಿಪ್ರಸಾದ್ ಚರ್ಚೆ

ಒಂದನೇ ಪುಟದಿಂದ...

ಮೂರು ದಿನಗಳಿಂದ ಬೆಂಗಳೂರಿನ ಸದಾಶಿವನಗರದ ತಮ್ಮ ನಿವಾಸದಲ್ಲಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ (ನ. 25) ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಲವು ಸಚಿವರು, ಶಾಸಕರ ಜೊತೆ ಮಾತುಕತೆ ನಡೆಸಿರುವ ಖರ್ಗೆ, ಈ ವಿಚಾರವನ್ನು ರಾಹುಲ್ ಗಾಂಧಿ ಜೊತೆ ಹಂಚಿಕೊಳ್ಳಲಿದ್ದಾರೆ. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರನ್ನು ಇದೇ ವಾರಾಂತ್ಯದಲ್ಲಿ ದೆಹಲಿಗೆ ಕರೆಸಿಕೊಂಡು ಮಾತುಕತೆ ನಡೆಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

'ಸಿದ್ದರಾಮಯ್ಯ ಮಾತು ವೇದವಾಕ್ಯ'

ಒಂದನೇ ಪುಟದಿಂದ...

ಇದರಿಂದ ಪಕ್ಷದ ಶಿಸ್ತು ಉಲ್ಲಂಘನೆಯಾಗುತ್ತಿದೆ ಎನ್ನುವ ಮಾತಿನ ಬಗ್ಗೆ ಕೇಳಿದಾಗ, 'ಪಕ್ಷ ವಿರೋಧಿ ಹೇಳಿಕೆ ನೀಡಿ, ಗುಂಪುಗಳನ್ನು ಮಾಡಿ, ಡಿನ್ನರ್ ಮೀಟಿಂಗ್‌ಗಳ ರೀತಿ ಮಾಡಿ ಪಕ್ಷದ ವಿರುದ್ಧ ಹೋದರೆ ಉಲ್ಲಂಘನೆಯಾಗುತ್ತದೆ. ಈಗ ಏನು ಉಲ್ಲಂಘನೆ ಆಗುತ್ತದೆ? ಯಾರಾದರೂ ಪಕ್ಷದ ವಿರುದ್ಧ ಹೇಳಿಕೆ ನೀಡಿದ್ದಾರೆಯೇ? ಸಂಪುಟ ಪುನರ್ ರಚನೆ ಮಾಡಲಾಗುತ್ತದೆ ಎನ್ನುವ ಕಾರಣಕ್ಕೆ ತಮಗೂ ಅವಕಾಶ ಸಿಗಲಿ ಎಂದು ಹೋಗಿದ್ದಾರೆ' ಎಂದರು.

'ಖರ್ಗೆಯವರನ್ನು ಇನ್ನೂ ಭೇಟಿ ಮಾಡಿಲ್ಲವಲ್ಲ' ಎಂದು ಕೇಳಿದಾಗ, 'ದೆಹಲಿಯಲ್ಲಿ ಭೇಟಿ ಮಾಡಿದ್ದೇನೆ. ಪದೇ ಪದೇ ಭೇಟಿ ಮಾಡುವುದು ಸರಿಯೇ? ಸಂದರ್ಭ ಬಂದರೆ ಹೋಗಿ ಭೇಟಿ ಮಾಡುತ್ತೇನೆ. ಅವರು ದೆಹಲಿಗೆ ಹೋಗಿ ಬಂದ ನಂತರ ಭೇಟಿಗೆ ಅವಕಾಶ ಕೇಳುತ್ತೇನೆ' ಎಂದರು.

'ಏಕಾಏಕಿ ತೀರ್ಮಾನ ಸಾಧ್ಯವೇ?'

'ಏನೇ ಇದ್ದರೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ಮಲ್ಲಿಕಾರ್ಜುನ ಖರ್ಗೆ ಏಕೆ ಹೇಳಿದ್ದಾರೆಂದರೆ, ಪಕ್ಷದಲ್ಲಿ ಒಂದಷ್ಟು ನಾಯಕರನ್ನು ಒಳಗೊಂಡ ಸಮಿತಿಯಿದೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಮಲ್ಲಿಕಾರ್ಜುನ ಖರ್ಗೆ ರಬ್ಬರ್ ಸ್ಟಾಂಪ್ ಅಧ್ಯಕ್ಷರು' ಎಂದು ಜೆಡಿಎಸ್-ಬಿಜೆಪಿ ವ್ಯಂಗ್ಯ ಮಾಡಿರುವ ಬಗ್ಗೆ ಕೇಳಿದಾಗ ಪ್ರತಿಕ್ರಿಯಿಸಿದ ಅವರು, 'ನಾನು ಕೆಪಿಸಿಸಿ ಅಧ್ಯಕ್ಷನಾದ ತಕ್ಷಣ ಏಕಾಏಕಿ ತೀರ್ಮಾನ ಮಾಡಲು ಆಗುತ್ತದೆಯೇ? ಇತ್ತೀಚೆಗೆ ನಾಲ್ಕು ಜನರ ಹೆಸರನ್ನು ಅಂತಿಮಗೊಳಿಸುವಾಗ ಸಿದ್ದರಾಮಯ್ಯ ಅವರು, ಜಿಲ್ಲಾ ಉಸ್ತುವಾರಿ ಸಚಿವರು, ಅಧ್ಯಕ್ಷರು, ಆಕಾಂಕ್ಷಿಗಳನ್ನು ಕರೆದು ಮಾತನಾಡಿದ್ದೇನೆ. ಆ ಧಾಟಿಯಲ್ಲಿ ಖರ್ಗೆಯವರು ಹೇಳಿದ್ದಾರೆ' ಎಂದರು.

ಡಿ.1ರಿಂದ ಬಿಸಿಯೂಟ, ಆಶಾ ಕಾರ್ಯಕರ್ತೆಯರ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್) ಹಾಗೂ ಮಧ್ಯಾಹ್ನದ ಬಿಸಿಯೂಟ ಯೋಜನೆ (ಎಂಡಿಎಂ) ಮುಂದುವರಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಡಿಸೆಂಬರ್ 1ರಿಂದ ಬೆಂಗಳೂರು, ತುಮಕೂರು, ಮಂಡ್ಯ ಹಾಗೂ ಹುಬ್ಬಳ್ಳಿಯಲ್ಲಿರುವ ಕೇಂದ್ರ ಸಚಿವರ ಮನೆಯ ಮುಂಭಾಗದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮಿ ತಿಳಿಸಿದರು.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಂಗನವಾಡಿ, ಬಿಸಿಯೂಟ ಹಾಗೂ ಆಶಾ ಕಾರ್ಯಕರ್ತೆಯರನ್ನು ಕಾರ್ಮಿಕರೆಂದು ಪರಿಗಣಿಸಿ, ಎಲ್ಲ ರೀತಿಯ ಸೌಲಭ್ಯ ನೀಡಬೇಕು. ಐಸಿಡಿಎಸ್ ಹಾಗೂ ಎಂಡಿಎಂ ಯೋಜನೆಗಳಿಗೆ ಬಜೆಟ್‌ನಲ್ಲಿ ಹೆಚ್ಚುವರಿ ಅನುದಾನ ನೀಡಬೇಕು, ಖಾಸಗೀಕರಣ ಮಾಡಬಾರದು ಎಂದು ಆಗ್ರಹಿಸಿದರು.


'ಅಂಗನವಾಡಿಗಳಲ್ಲಿ ಪೂರೈಕೆ ಆಗುತ್ತಿರುವ ಪ್ರೋಟಿಫೈಡ್ ಆಹಾರ ಪದ್ಧತಿಯನ್ನು ಕೈಬಿಟ್ಟು, ಸ್ಥಳೀಯ ಆಹಾರ ಪದಾರ್ಥಗಳನ್ನು ನೀಡಬೇಕು ಹಾಗೂ ಫಲಾನುಭವಿಗಳ ಘಟಕ ವೆಚ್ಚವನ್ನು ಹೆಚ್ಚಿಸಬೇಕು. ಮುಖ ಚಹರೆ ಗುರುತಿಸುವಿಕೆ (ಎಫ್‌ಆರ್‌ಎಸ್) ವ್ಯವಸ್ಥೆಯನ್ನು ಸ್ಥಗಿತಗೊಳಿಸಬೇಕು. ಚುನಾವಣೆ ಸೇರಿದಂತೆ ಇತರೆ ಕೆಲಸಗಳಿಂದ ಅಂಗನವಾಡಿ ಕಾರ್ಯಕರ್ತೆಯರನ್ನು ಹೊರಗಿಡಬೇಕು' ಎಂದು ಹೇಳಿದರು.

'ಆನ್‌ಲೈನ್‌ನಲ್ಲಿ ದಾಖಲಾತಿ ಮಾಡಲು ಸ್ಮಾರ್ಟ್ ಫೋನ್ ನೀಡಬೇಕು. ಆಶಾ ಕಾರ್ಯಕರ್ತೆಯರಿಗೆ ತಿಂಗಳಿಗೆ ₹15 ಸಾವಿರ ವೇತನ ನಿಗದಿಪಡಿಸಬೇಕು' ಎಂದು ಒತ್ತಾಯಿಸಿದರು. ಎಚ್‌.ಎಸ್. ಸುನಂದಾ, ಮಾಲಿನಿ ಮೆಸ್ತಾ ಸುದ್ದಿಗೋಷ್ಠಿಯಲ್ಲಿದ್ದರು.

ಬೆಂಕಿ ಹಚ್ಚಿಕೊಂಡು ರೈತ ಆತ್ಮಹತ್ಯೆ

ಚಿಟಗುಪ್ಪ (ಬೀದರ್): ಸಾಲಬಾಧೆಗೆ ಬೇಸತ್ತ ರೈತನೊಬ್ಬ ಬೆಂಕಿ ಹಚ್ಚಿಕೊಂಡು ಪ್ರಾಣ ಬಿಟ್ಟಿರುವ ಘಟನೆ ತಾಲ್ಲೂಕಿನ ಬಸೀರಾಪೂರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಭೀಮಣ್ಣ (84) ಮೃತ ರೈತ. ಭಾನುವಾರ ಮಧ್ಯಾಹ್ನ ಹೊಲದಲ್ಲಿ ಕಟ್ಟಿಗೆಗಳನ್ನು ಜೋಡಿಸಿ, ಅದರ ಮೇಲೆ ಕುಳಿತು ದಹಿಸಿಕೊಂಡು ಜೀವ ತ್ಯಜಿಸಿದ್ದಾರೆ.



ಭೀಮಣ್ಣ

ಬ್ಯಾಂಕಿನಲ್ಲಿ ₹6 ಲಕ್ಷ ಸೇರಿ ₹8 ಲಕ್ಷಕ್ಕೂ ಅಧಿಕ ಸಾಲ ಮಾಡಿಕೊಂಡಿದ್ದರು. ಬೆಳೆ ನಷ್ಟದಿಂದ ಸಂಕಷ್ಟಕ್ಕೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಬೇಮಳಖೇಡಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಸರಗೋಡು: ನೂಕು ನುಗ್ಗಲು, 10 ಮಂದಿ ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಕಾಸರಗೋಡು: ಇಲ್ಲಿ ಭಾನುವಾರ ರಾತ್ರಿ ಮಲಯಾಳ ಗಾಯಕ ಹನಾನ್ ಶಾ ಅವರ ಸಂಗೀತ ಕಾರ್ಯಕ್ರಮದಲ್ಲಿ ನೂಕು ನುಗ್ಗಲು ಉಂಟಾಗಿದ್ದು, ಸುಮಾರು 10 ಮಂದಿ ಅಸ್ವಸ್ಥಗೊಂಡಿದ್ದಾರೆ.

ನಗರದ ನುಳ್ಳಿಪ್ಪಾಡಿಯಲ್ಲಿ ನಡೆದ ರಸಮಂಜರಿ ವೇಳೆ ಜನದಟ್ಟಣೆ ನಿಯಂತ್ರಿಸಲು ಪೊಲೀಸರು ಲಾಠಿಪ್ರಹಾರ ನಡೆಸಿದರು. ಗಾಯಗೊಂಡವರು ವಿವಿಧ ಆಸ್ಪತ್ರೆಗಳಲ್ಲಿ ದಾಖಲಾಗಿದ್ದಾರೆ.

ಕಾರ್ಯಕ್ರಮದ ಸಂಘಟನಾ ಸಮಿತಿ ಸದಸ್ಯರಾದ ಷಹಜಹಾನ್ ತೊಟ್ಟಾನ್, ನವಲ್ ರಹಮಾನ್, ಹ್ಯಾರಿಸ್ ಅಬೂಬಕ್ಕರ್ ಸೇರಿ 11 ಮಂದಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಸಣ್ಣ ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸುವಾಗ ಮುನ್ನೆಚ್ಚರಿಕೆ ವಹಿಸಬೇಕು ಎಂಬ ಸೂಚನೆಯನ್ನು ಸಂಘಟಕರು ನಿರ್ಲಕ್ಷಿಸಿದ್ದರು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ರಜೆ ದಿನವಾದ ಭಾನುವಾರ ಕಾರ್ಯಕ್ರಮಕ್ಕೆ ಭಾರಿ ಪ್ರಮಾಣದಲ್ಲಿ ಜನ ಬಂದಿದ್ದರು. ಮನವಿ ಹೊರತಾಗಿಯೂ ಜನ ಸ್ಥಳ ತೊರೆಯದ ಕಾರಣ ಕಾರ್ಯಕ್ರಮವನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಯಿತು' ಎಂದು ಆಯೋಜಕರು ಹೇಳಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ವಾಸ್ತವತೆಯ ಜಗತ್ತಿಗೆ ಮಿತಿಯುಂಟು, ಕಲ್ಪನೆಯ ಜಗತ್ತಿಗೆ ಮಿತಿಯಿಲ್ಲ.

–ರೂಸೊ

ಸಂಪಾದಕೀಯ

ಉನ್ನತ ಶಿಕ್ಷಣದಲ್ಲಿ ನಕಲಿ ಹಾವಳಿ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿ

ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುವ ಕೆಲವು ಅತಿಥಿ ಉಪನ್ಯಾಸಕರ ಪದವಿ ಪ್ರಮಾಣಪತ್ರಗಳು ನಕಲಿ ಹಾಗೂ ಅವುಗಳ ನೈಜತೆಯನ್ನು ದೃಢೀಕರಿಸಿರುವ ದಾಖಲೆಗಳೂ ನಕಲಿ ಎನ್ನುವ ವರದಿ ಉನ್ನತ ಶಿಕ್ಷಣ ಕ್ಷೇತ್ರದ ರೋಗಗ್ರಸ್ತ ಪರಿಸ್ಥಿತಿಯನ್ನು ಸೂಚಿಸುವಂತಿದೆ. ಹಾಗೆಯೇ, ಈ ಪರಿಸ್ಥಿತಿಯನ್ನು ಸರಿಪಡಿಸಲು ಹೊರಟಿರುವ ಕಾಲೇಜು ಶಿಕ್ಷಣ ಇಲಾಖೆಯ ಪ್ರಯತ್ನವೂ ವಿರೋಧಾಭಾಸಗಳಿಂದ ಕೂಡಿದೆ. ಎಲ್ಲ ಕ್ಷೇತ್ರಗಳಲ್ಲೂ ನಕಲಿಗಳ ಹಾವಳಿ ವ್ಯಾಪಕವಾಗಿರುವ ಸಂದರ್ಭದಲ್ಲಿ, ಪದವಿ ಪ್ರಮಾಣಪತ್ರಗಳ ನೈಜತೆಯನ್ನು ಪರೀಕ್ಷಿಸುವ ಇಲಾಖೆಯ ಉದ್ದೇಶ ಒಳ್ಳೆಯದೇ ಆಗಿದೆ. ಆದರೆ, ಅದಕ್ಕೆ ತಗಲುವ ವೆಚ್ಚವನ್ನು ಅತಿಥಿ ಉಪನ್ಯಾಸಕರೇ ಭರಿಸಬೇಕೆಂದು ಇಲಾಖೆ ಬಯಸುತ್ತಿರುವುದನ್ನು ಒಪ್ಪುವುದು ಕಷ್ಟ. ಈಗಾಗಲೇ ಹಲವು ರೂಪಗಳಲ್ಲಿ ಶೋಷಣೆಗೆ ಒಳಗಾಗಿರುವ, ಉದ್ಯೋಗದ ಅಭದ್ರತೆಯಲ್ಲಿ ಬದುಕುತ್ತಿರುವ ಹಾಗೂ ಕಡಿಮೆ ಸಂಭಾವನೆಗೆ ದುಡಿಯುತ್ತಿರುವ ಅತಿಥಿ ಉಪನ್ಯಾಸಕರು ತಮ್ಮ ಪ್ರಮಾಣಪತ್ರಗಳ ನೈಜತೆಯನ್ನು ಸಾಬೀತುಪಡಿಸಲೂ ಖರ್ಚು ಮಾಡಬೇಕಾದ ಪರಿಸ್ಥಿತಿಯನ್ನು ಸೃಷ್ಟಿಸಿರುವುದು ಮಾನವೀಯ ನಡವಳಿಕೆಯಲ್ಲ. ಆಡಳಿತಾತ್ಮಕವಾಗಿ ಕೂಡ ಇದು ಸರಿಯಾದ ನಿರ್ಧಾರವಲ್ಲ. ಸ್ನಾತಕೋತ್ತರ ಪದವಿಯ ಅಂಕಪಟ್ಟಿ, ಘಟಿಕೋತ್ಸವ ಪ್ರಮಾಣಪತ್ರ, ಪಿಎಚ್‌.ಡಿ, ಎಂ.ಫಿಲ್, ಎನ್‌ಇಟಿ ಅಥವಾ ಕೆ–ಸೆಟ್‌ಗಳ ನೈಜತೆಯನ್ನು ಅಭ್ಯರ್ಥಿಗಳು ದೃಢೀಕರಿಸಬೇಕಾಗಿದೆ. ಪ್ರತಿಯೊಂದು ದಾಖಲೆಯ ನೈಜತಾ ಪ್ರಮಾಣಪತ್ರಕ್ಕೆ ಆಯಾ ವಿಶ್ವವಿದ್ಯಾಲಯಗಳು ದುಬಾರಿ ಶುಲ್ಕ ನಿಗದಿ ಮಾಡಿವೆ; ಈ ಮೂಲಕ ಹೊಸ ಆದಾಯ ಮೂಲವೊಂದನ್ನು ವಿಶ್ವವಿದ್ಯಾಲಯಗಳು ಸೃಷ್ಟಿಸಿಕೊಳ್ಳಲು ಶಿಕ್ಷಣ ಇಲಾಖೆ ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ, ಈಗಾಗಲೇ ಆರ್ಥಿಕ ಸಂಕಷ್ಟದಲ್ಲಿರುವ ಅತಿಥಿ ಉಪನ್ಯಾಸಕರು ಮತ್ತಷ್ಟು ಹೊರೆ ಹೊರಲೇಬೇಕಾದ ಅನಿವಾರ್ಯತೆ ರೂಪುಗೊಂಡಿದೆ.



ಪದವಿ ಪ್ರಮಾಣಪತ್ರ ಸಾಧನೆಗೆ ಸಲ್ಲುವ ದಾಖಲೆ ಆಗಬೇಕೇ ಹೊರತು, ಕೊಳ್ಳುವ ಸರಕಾಗಬಾರದು. ನಕಲಿ ಪ್ರಮಾಣಪತ್ರಗಳ ಹಾವಳಿಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು.

ಅತಿಥಿ ಉಪನ್ಯಾಸಕರ ಶೈಕ್ಷಣಿಕ ದಾಖಲೆಗಳ ಅಸಲಿಯತ್ತನ್ನು ಒರೆಗೆ ಹಚ್ಚುವ ಕೆಲಸ 2017ರಲ್ಲೂ ನಡೆದಿತ್ತು. ಆಗ ಎಲ್ಲ ವೆಚ್ಚವನ್ನು ಕಾಲೇಜು ಶಿಕ್ಷಣ ಇಲಾಖೆಯೇ ಭರಿಸಿತ್ತು. ಆ ಪರಿಶೀಲನೆಯಲ್ಲಿ 23 ಅಭ್ಯರ್ಥಿಗಳ ಪಿಎಚ್‌.ಡಿ ಪ್ರಮಾಣಪತ್ರಗಳು ನಕಲಿ ಎನ್ನುವುದು ಪತ್ತೆಯಾಗಿ, ಅವರ ವಿರುದ್ಧ ಇಲಾಖೆ ಕ್ರಿಮಿನಲ್ ಪ್ರಕರಣ ದಾಖಲಿಸಿತ್ತು. ಆಗಿನ ಕ್ರಮವನ್ನು ಈಗಲೂ ಇಲಾಖೆ ಅನುಸರಿಸಬಹುದಾಗಿದೆ. ಪ್ರಮಾಣಪತ್ರಗಳ ನೈಜತೆಯನ್ನು ಅಭ್ಯರ್ಥಿಗಳೇ ಸಾಬೀತುಪಡಿಸುವ ಪ್ರಕ್ರಿಯೆಯಲ್ಲಿ ನಕಲಿಗಳನ್ನು ಪತ್ತೆಹಚ್ಚುವುದು ಸುಲಭವಲ್ಲ. ಕೆಲವು ಅಭ್ಯರ್ಥಿಗಳು ನೀಡಿರುವ ನೈಜತಾ ಪ್ರಮಾಣಪತ್ರಗಳೇ ನಕಲಿಯಾಗಿವೆ ಎನ್ನುವ ದೂರುಗಳಿವೆ. ನೈಜತಾ ಪ್ರಮಾಣಪತ್ರಗಳು ನಕಲಿಯೋ ಅಸಲಿಯೋ ಎನ್ನುವುದನ್ನು ದೃಢಪಡಿಸಿಕೊಳ್ಳುವ ಅಧಿಕಾರ ಪ್ರಾಂಶುಪಾಲರಿಗೆ ಇಲ್ಲವಾದುದರಿಂದ, ತಪ್ಪು ಮಾಡಿರುವ ಅಭ್ಯರ್ಥಿಗಳು ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಪ್ರಮಾಣಪತ್ರಗಳ ಪರಿಶೀಲನೆಯ ಕೆಲಸವನ್ನು ಇಲಾಖೆಯೇ ಮಾಡಿದ್ದಲ್ಲಿ, ನಕಲಿ ಪ್ರಮಾಣಪತ್ರ ಸಲ್ಲಿಸಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳುವ ಅವಕಾಶವಿತ್ತು. ಆ ಅವಕಾಶವನ್ನು ಬಿಟ್ಟುಕೊಡುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿನ ಕೊಳೆಯನ್ನು ಸ್ವಲ್ಪಮಟ್ಟಿಗಾದರೂ ತೊಳೆಯಬಹುದಾಗಿದ್ದ ಅವಕಾಶವನ್ನು ಇಲಾಖೆ ಕೈಚೆಲ್ಲಿದೆ.

ನಕಲಿ ಪದವಿಗಳನ್ನು ವಿತರಿಸುವ ಜಾಲ ದೇಶದಾದ್ಯಂತ ಸಕ್ರಿಯವಾಗಿದೆ. ಕರ್ನಾಟಕದ ವಿಶ್ವವಿದ್ಯಾಲಯವೊಂದು ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿನ ಸರ್ಕಾರಿ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳ ಹೆಸರಿನಲ್ಲಿ ನಕಲಿ ಪ್ರಮಾಣಪತ್ರಗಳನ್ನು ವಿತರಿಸುವ ದಂಧೆ ಎರಡು ವರ್ಷಗಳ ಹಿಂದೆ ದೆಹಲಿಯಲ್ಲಿ ಪತ್ತೆಯಾಗಿತ್ತು. ಬಳ್ಳಾರಿಯ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಘಟಿಕೋತ್ಸವ ಪ್ರಮಾಣಪತ್ರಗಳನ್ನು ಅಕ್ರಮವಾಗಿ ಹಣ ಪಡೆದು ವಿತರಿಸಿದ ಲಕ್ಷಾಂತರ ರೂಪಾಯಿಗಳ ಹಗರಣ ಇತ್ತೀಚೆಗಷ್ಟೇ ವರದಿಯಾಗಿತ್ತು. ಅಂತರ್ಜಾಲ ಹಾಗೂ ಪತ್ರಿಕಾ ಜಾಹೀರಾತುಗಳ ಮೂಲಕವೂ ಜನರನ್ನು ಮರುಳು ಮಾಡಿ, ನಕಲಿ ಪ್ರಮಾಣಪತ್ರಗಳ ಮಾರಾಟ ನಡೆಯುವುದಿದೆ. ಈ ಪ್ರಮಾಣಪತ್ರಗಳನ್ನು ಬಳಸಿ ಸರ್ಕಾರಿ ಹಾಗೂ ಖಾಸಗಿ ವಲಯಗಳಲ್ಲಿ ಉದ್ಯೋಗ ಪಡೆದಿರುವವರೂ ಇದ್ದಾರೆ. ಈ ಅವ್ಯವಹಾರವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಆಂದೋಲನ ರೂಪದ ಕಾರ್ಯಾಚರಣೆಯನ್ನೇ ಸರ್ಕಾರಗಳು ಹಮ್ಮಿಕೊಳ್ಳಬೇಕಾಗಿದೆ.

ಚುರುಮುರಿ... ಜಾಲಡಬ್ಬಿ

ಅದೇ ಕಥೆ...



ಯಾವುದೇ ದೇಶ, ಪ್ರದೇಶ, ನಗರ, ಸಮಾಜ, ಸಂಘಟನೆ, ಪಕ್ಷ, ವೇದಿಕೆ, ಇತ್ಯಾದಿ ಗಮನಿಸಿ. ಮೂಲನಿವಾಸಿಗಳು ಮೂಲೆಗುಂಪಾಗಿರುತ್ತಾರೆ.

ನಾಗರಾಜು ಮರಳೇನಹಳ್ಳಿ, ಲೇಖಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ₹89ರ ಗಡಿ ದಾಟಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಆರ್ಥಿಕ ದಿವಾಳಿತನದ ನೀತಿಗಳೇ ಕಾರಣ. ರೂಪಾಯಿ ಮೌಲ್ಯದ ಕುಸಿತವು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಅಸ್ಮಿತೆಗೆ ಬಿದ್ದ ಭಾರೀ ಹೊಡೆತ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಶನಿವಾರ, 25-11-2000

• **‘ಗಡಿ ವಿವಾದ ಚರ್ಚೆಯಿಂದ ಪರಿಹಾರ’**

ಬೆಂಗಳೂರು, ನ. 24– ‘ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ನಡುವಿನ ಗಡಿ ವಿವಾದವನ್ನು ಪರಸ್ಪರ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬಹುದು’ ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ವಿಲಾಸರಾವ್ ದೇಶಮುಖ್ ಅವರು, ಇಂದು ಇಲ್ಲಿ ಅಭಿಪ್ರಾಯಪಟ್ಟರು.

ಸಹಕಾರಿಗಳ ಸಮಾವೇಶ ಉದ್ಘಾಟಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಸಂಬಂಧ ಕರ್ನಾಟಕದ ಮುಖ್ಯಮಂತ್ರಿ ಅವರೊಂದಿಗೆ ಶೀಘ್ರವೇ ಮಾತುಕತೆ ನಡೆಸಲಾಗುವುದು’ ಎಂದರು.

ಈ ವಿವಾದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳುವ ದೃಷ್ಟಿಯಿಂದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಸಂಸತ್ತಿನ ಚಳಿಗಾಲದ ಅಧಿವೇಶನದ ನಂತರ ಕರೆಯುವ ಸಾಧ್ಯತೆ ಇದೆ ಎಂದರು.

• **‘ಅಗತ್ಯಬಿದ್ದರೆ ಸಂಪುಟ ವಿಸ್ತರಣೆ’**

ನವದೆಹಲಿ, ನ. 24– ಕರ್ನಾಟಕದ ಸಚಿವರ ಸಾಧನೆಗಳ ಸಮೀಕ್ಷೆಯ ನಂತರ ಅಗತ್ಯ ಕಂಡುಬಂದರೆ ಸಂಪುಟ ವಿಸ್ತರಣೆ ನಡೆಯಬಹುದು ಎಂದು ರಾಜ್ಯದಲ್ಲಿ ಪಕ್ಷದ ಉಸ್ತುವಾರಿ ನೋಡಿಕೊಳ್ಳುತ್ತಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಗುಲಾಂ ನಬೀ ಆಜಾದ್ ಇಂದು ಹೇಳಿದರು.

‘ರಾಜ್‌ಕುಮಾರ್ ಅಪಹರಣದ ಇತ್ತೀಚಿನ ಮೂರು ತಿಂಗಳ ಅವಧಿಯನ್ನು ಹೊರತುಪಡಿಸಿದರೆ ಕರ್ನಾಟಕ ಸರ್ಕಾರದ ಒಟ್ಟಾರೆ ಸಾಧನೆ ಉತ್ತಮವಾಗಿದೆ. ಪ್ರತಿಯೊಂದು ಖಾತೆಯ ಸಾಧನೆಯ ಪ್ರತ್ಯೇಕ ಸಮೀಕ್ಷೆ ಮೂಲಕ ಸಚಿವರ ಅರ್ಹತೆ–ಸಾಮರ್ಥ್ಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗುವುದು ಎಂದು ಸುದ್ದಿಗಾರರಿಗೆ ತಿಳಿಸಿದರು.

75 ವರ್ಷಗಳ ಹಿಂದೆ

ಶನಿವಾರ, 25-11-1950

• **ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ ಪ್ರಕರಣ**

ಮೈಸೂರು, ನ. 24– ಮೈಸೂರಿನಲ್ಲಿ ಸ್ಥಾಪಿತವಾಗಿರುವ ರೆಗ್ಯುಲೇಟೆಡ್ ಮಾರ್ಕೆಟ್ಟಿನ ವ್ಯವಸ್ಥೆ ತುಂಬಾ ಅನನುಕೂಲಗಳಿಂದ ಕೂಡಿರುವುದರಿಂದ ಅವನ್ನೆಲ್ಲ ಸರಿಪಡಿಸುವವರೆಗೆ ಬಹಿಷ್ಕಾರ ಹಾಕುವುದಾಗಿ ಸ್ಥಳೀಯ ವರ್ತಕರುಗಳ ಸಂಘದವರು 19ನೇ ತಾರೀಕು ನಿರ್ಣಯ ಮಾಡಿ ಕಳಿಸಿದರಷ್ಟೆ. ನಿನ್ನೆ ಸಂಜೆ ಸಂಸ್ಥಾನದ ಮುಖ್ಯ ಮಾರ್ಕೆಟಿಂಗ್ ಅಧಿಕಾರಿಗಳಾದ ಎನ್.ಎಸ್. ಹಿರಣ್ಣಯ್ಯನವರು, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟಿನ ಸಮಿತಿಯ ಸದಸ್ಯರುಗಳ ಮತ್ತು ಸ್ಥಳೀಯ ವರ್ತಕರುಗಳ ಸಭೆ ಕೂಡಿಸಿ, ಆದಷ್ಟು ಬೇಗ ಮಾರ್ಕೆಟ್ಟಿನ ಲೋಪದೋಪಗಳನ್ನು ನಿವಾರಣೆ ಮಾಡಲಾಗುವುದೆಂದೂ, ವರ್ತಕರುಗಳು ಸಹಕರಿಸಬೇಕೆಂದು ಕೋರಿದರು.

ವೇದಿಕೆ ಭಿನ್ನ, ಹಿಂಸೆ ಹಳೆಯದೇ!



ವಿಶ್ಲೇಷಣೆ

ಆಶಾ ಬಗ್ಗನಡು

ಲಿಂಗಾಧಾರಿತ ದೌರ್ಜನ್ಯ ಡಿಜಿಟಲ್ ವೇದಿಕೆಗಳಲ್ಲಿ ತೀವ್ರಗೊಂಡಿದೆ. ಆದರೆ, ಈ ದೌರ್ಜನ್ಯವನ್ನು ತಡೆಗಟ್ಟುವ ಕ್ರಮಗಳು ಪರಿಣಾಮಕಾರಿಯಾಗಿ ಜಾರಿಗೆ ಬರುತ್ತಿಲ್ಲ. ಸಂತ್ರಸ್ತ ಹೆಣ್ಣು ತನ್ನ ಸಂಕಟ ತೋಡಿಕೊಳ್ಳುವ ಪರಿಸ್ಥಿತಿಯೂ ಸಮಾಜದಲ್ಲಿಲ್ಲ.

ನಾವೆಲ್ಲರೂ ಒಂದಲ್ಲಾ ಒಂದು ಬಗೆಯ ಮುಖವಾಡವನ್ನು ಧರಿಸಿಯೇ ಬದುಕುತ್ತಿದ್ದೇವೆ ಎನ್ನುವುದಕ್ಕೆ ಸಾಮಾಜಿಕ ಜಾಲತಾಣಗಳು ಸಾಕ್ಷ್ಯ ನುಡಿಯುವಂತಿವೆ. ದೀರ್ಘಕಾಲದಿಂದ ನಮಗೆ ಪರಿಚಿತರಾಗಿರುವವರ ಮತ್ತೊಂದು ಮುಖ ಇಲ್ಲಿ ಅನಾವರಣಗೊಂಡಾಗ ಬೆಚ್ಚಿಬೀಳುತ್ತೇವೆ. ಹಾಗೆಯೇ, ಬಹಳಷ್ಟು ಜನ ತಮ್ಮ ನಿಜವಾದ ಮುಖಗಳನ್ನು ಮರೆಮಾಚಿಕೊಂಡು, ಬೇರೆಯವರ ಮುಖ–ಹೆಸರು ಧರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾಗಿರುತ್ತಾರೆ. ಹೀಗೆ ಮುಖರಹಿತವಾಗಿ ವ್ಯವಹರಿಸಲು ಸಾಧ್ಯವಿರುವ ಕಾರಣದಿಂದಾಗಿ, ಸಾಮಾಜಿಕ ಜಾಲತಾಣಗಳು (ಡಿಜಿಟಲ್ ವೇದಿಕೆಗಳು) ಅಪರಾಧ ಮನಃಸ್ಥಿತಿ ಹೊಂದಿರುವವರಿಗೆ ಅನುಕೂಲಕರವಾಗಿ ಪರಿಣಮಿಸಿವೆ.

ಬಹುಪಾಲು ಡಿಜಿಟಲ್ ದಾಳಿಗಳು (ಸೈಬರ್ ಅಪರಾಧಗಳು) ಮುಖರಹಿತವಾಗಿ ನಡೆಯುವುದರಿಂದ, ಅಲ್ಲಿ ಅಪರಾಧಿಗಳನ್ನು ಗುರುತಿಸುವುದೇ ಕಷ್ಟಕರ. ಇನ್ನು ಬಹುತೇಕ ಸಂದರ್ಭಗಳಲ್ಲಿ ಡಿಜಿಟಲ್ ದೌರ್ಜನ್ಯವನ್ನು ವಿರೋಧಿಸಬೇಕೆಂಬ ಅರಿವು ಕೆಲವು ಹೆಣ್ಣುಮಕ್ಕಳಿಗೆ ಇರುವುದೂ ಇಲ್ಲ. ದೌರ್ಜನ್ಯಕ್ಕೆ ಒಳಗಾದ ಸಂದರ್ಭದಲ್ಲಿ ಅದನ್ನು ಹೇಳಿಕೊಳ್ಳಲಾಗದ ಸಂಕಟವೂ ಹೆಣ್ಣನ್ನು ಬಾಧಿಸುತ್ತದೆ. ಡಿಜಿಟಲ್ ದಾಳಿಗಳಂತಹ ಮಾನಸಿಕ ಅತ್ಯಾಚಾರವನ್ನು ಹೇಳಿಕೊಂಡು ಹಗುರಾಗಲು ಪ್ರಯತ್ನಿಸಿದರೆ, ಸಮಾಜ ಅವಳ ನೈತಿಕತೆಯನ್ನು ಪ್ರಶ್ನಿಸುವ ಸಾಧ್ಯತೆ ಹೆಚ್ಚು. ಹೊರಗಿನ ದೌರ್ಜನ್ಯಗಳಿಗೆ ದೊರೆಯಬಹುದಾದ ಸಹಾನುಭೂತಿಯ ಒಂದಂಶವೂ ಇಲ್ಲಿ ದೊರೆಯದೆ ಹೋಗಬಹುದು.

ಸಂತ್ರಸ್ತೆ ಪೊಲೀಸ್ ಠಾಣೆಯ ಮೆಟ್ಟಿಲೇರುವ ಮೂಲಕ ಕಾನೂನಿನ ನೆರವು ಪಡೆಯುವ ಸಾಧ್ಯತೆಯಿದೆ. ಆದರೆ, ಬಹಳಷ್ಟು ಸಂದರ್ಭಗಳಲ್ಲಿ– ‘ನಿರ್ಲಕ್ಷಿಸಿ, ಇಲ್ಲ ನಿರ್ಬಂಧಿಸಿ’ ಎನ್ನುವ ಸಿದ್ಧ ಉತ್ತರ ಪೊಲೀಸರಿಂದ ದೊರೆಯುತ್ತದೆ. ಈ ವೈರುಧ್ಯವೇ ಡಿಜಿಟಲ್ ವೇದಿಕೆಗಳಲ್ಲಿ ದೌರ್ಜನ್ಯ ಎಸಗುವವರ ಭಂಡ ಧೈರ್ಯಕ್ಕೆ ಕಾರಣವಾಗಿದೆ. ಕೆಲವು ಗಟ್ಟಿಗಿತ್ತಿ ಹೆಣ್ಣುಮಕ್ಕಳು ಎಲ್ಲವನ್ನೂ ಎದುರಿಸಿ ನಿಲ್ಲುತ್ತಾರೆ; ಅನ್ಯಾಯವನ್ನು ಪ್ರಶ್ನಿಸಿ ಧ್ವನಿ ಎತ್ತುತ್ತಾರೆ. ಆದರೆ, ಬಹಳಷ್ಟು ಹೆಣ್ಣುಮಕ್ಕಳಿಗೆ ಈ ದಿಟ್ಟತನ ಸಾಧ್ಯವಾಗುವುದಿಲ್ಲ. ಹೊರಗಿನ ಅಭಿವ್ಯಕ್ತಿಗೆ ಅವಕಾಶವಿಲ್ಲದೆ, ಅಂತರಂಗದಲ್ಲಿ ಸೃಷ್ಟಿಯಾಗುವ ಕೋಲಾಹಲದಿಂದ ಕಂಗಾಲಾಗುತ್ತಾರೆ. ಆ ಒಳಗುದಿಯಿಂದ ಹೊರಬರುವ ದಾರಿಗಳನ್ನು ಕಾಣದೆ ಖಿನ್ನತೆಗೆ ಜಾರುತ್ತಾರೆ.

ನಿಂದನೆ, ದೂಷಣೆ, ಬೆದರಿಕೆಗಳಂತಹ ಭಾವನಾತ್ಮಕ ದೌರ್ಜನ್ಯಗಳ ಮೂಲಕ ಹೆಣ್ಣನ್ನು ಅಂಚಿಗೆ ತಳ್ಳಿ, ಆಕೆಯ ದನಿ ಕಸಿಯುವ ರಾಜಕೀಯವನ್ನು ನಮ್ಮ ಸಮಾಜ ಮತ್ತು ಸಂಸ್ಕೃತಿ ಬಹಳ ಕಾಲದಿಂದ ನಡೆಸಿಕೊಂಡು ಬಂದಿದೆ. ಈ ನೆಲೆಯ ಭಾಷಾದೌರ್ಜನ್ಯ ಹೆಣ್ಣುಮಕ್ಕಳಿಗೆ ಹೊಸತಲ್ಲ. ಆದರೆ, ಆ ದೌರ್ಜನ್ಯ ಆಧುನಿಕ ಸಂದರ್ಭದಲ್ಲಿ ಮತ್ತಷ್ಟು ತೀವ್ರಗೊಂಡು, ರೂಪ ಬದಲಿಸಿಕೊಂಡು ದಾಳಿ ನಡೆಸುತ್ತಿದೆ. ಹೆಣ್ಣಿನ ಅಸ್ತಿತ್ವವನ್ನು, ಅವಳ ಘನತೆಯನ್ನು ಗಾಸಿಗೊಳಿಸುವ ಕೌರ್ಯದ ನಡೆಗಳು ಸಾಮಾನ್ಯ ಎನ್ನುವಂತಾಗಿದೆ. ಹೆಣ್ಣುದನಿಯನ್ನು ಹತ್ತಿಕ್ಕುತ್ತಿರುವ ಡಿಜಿಟಲ್ ಹುನ್ನಾರಗಳನ್ನು ಹಿಮ್ಮೆಟ್ಟಿಸುವ ದಾರಿಗಳನ್ನು ತುರ್ತಾಗಿ ಕಂಡುಕೊಳ್ಳುವುದು ಹಾಗೂ ಆ ಹುನ್ನಾರಗಳನ್ನು ಎದುರಿಸಿ ನಿಲ್ಲುವುದು ಸದ್ಯದ ತುರ್ತು.

ಬಹಳಷ್ಟು ಸಂದರ್ಭಗಳಲ್ಲಿ ನಮ್ಮ ಸುತ್ತಮುತ್ತಲಿನ ತರುಣಿಯರೇ ಡಿಜಿಟಲ್ ದೌರ್ಜನ್ಯಕ್ಕೆ ಒಳಗಾಗಿದ್ದರೂ, ಅದು ಸುಲಭಕ್ಕೆ ನಮ್ಮ ಅರಿವಿಗೆ ಬರುವುದಿಲ್ಲ. ತರಗತಿಗಳನ್ನು ಸದಾ ಬೆರಗುಗಣ್ಣಿನಿಂದ ಎದುರಾಗುತ್ತಿದ್ದ ವಿದ್ಯಾರ್ಥಿನಿಯೊಬ್ಬಳು ಇದ್ದಕ್ಕಿದ್ದಂತೆ ಮಂಕಾಗಿ ಎಲ್ಲದರಲ್ಲೂ ಆಸಕ್ತಿ ಕಳೆದುಕೊಂಡದ್ದನ್ನು ಗಮನಿಸಿರುವೆ. ಆಕೆಯ ಸಮಸ್ಯೆಯ ಅರಿವಾಗುವ ಮೊದಲೇ, ಅದೊಂದು ದಿನ ಆಕೆ ಆತ್ಮಹತ್ಯೆ ಮಾಡಿಕೊಂಡ ಆಘಾತಕರ ಸುದ್ದಿ ಎದುರಾಗಿತ್ತು. ಆ ವಿದ್ಯಾರ್ಥಿನಿ ಅನುಭವಿಸುತ್ತಿದ್ದ ಮಾನಸಿಕ ಸಂಘರ್ಷ ನಂತರದ ದಿನಗಳಲ್ಲಿ ತಿಳಿಯಿತು. ಆಕೆಯನ್ನು ಪ್ರೀತಿಸುವಂತೆ ಯುವಕನೊಬ್ಬ ದುಂಬಾಲು ಬಿದ್ದಿದ್ದ. ಪ್ರೀತಿಯನ್ನು ನಿರಾಕರಿಸಿದ್ದಕ್ಕೆ ವ್ಯಗ್ರಗೊಂಡ ಅವನು, ಆ ಹುಡುಗಿಯನ್ನು ನೈತಿಕವಾಗಿ ಕುಗ್ಗಿಸಿ ನರಳುವಂತೆ ಮಾಡುವ ಶಪಥ ತೊಟ್ಟಿದ್ದ. ತಾನು ಪ್ರೀತಿಸುತ್ತೇನೆ ಎಂದು ಹೇಳಿಕೊಳ್ಳುತ್ತಿದ್ದ ಯುವತಿಯ ಫೋಟೊಗಳನ್ನು ವಿಕೃತಗೊಳಿಸಿ, ಅಶ್ಲೀಲ ಪದಗಳನ್ನು ಬಳಸಿ, ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದ. ಭಾರತೀಯ ಸಮಾಜದಲ್ಲಿ ಯುವತಿಯೊಬ್ಬಳು ಕಂಗೆಡಲು ಇನ್ನೇನು ಬೇಕು.

ಸುತ್ತಮುತ್ತಲಿನ ಕೊಂಕು, ಅಸಹ್ಯದ ನೋಟಗಳು, ಅನುಕಂಪದ ನಾಟಕೀಯ ಮಾತುಗಳು ಹಾಗೂ ಚಾರಿತ್ರ್ಯದ ಬಗ್ಗೆ ಕೇಳಿಬರುತ್ತಿದ್ದ ಮಾತುಗಳು ಆಕೆಯನ್ನು ಮಾನಸಿಕವಾಗಿ ಕುಗ್ಗಿಸಿದ್ದವು. ಆ ಯುವತಿಯೇನೋ ಸತ್ತುಹೋದಳು. ಆದರೆ, ದುರಂತಕ್ಕೆ ಕಾರಣನಾದ ಯುವಕನಿಗೆ ಸಣ್ಣ ಪಶ್ಚಾತ್ತಾಪವೂ ಇಲ್ಲ. ಕಾನೂನು ವ್ಯವಸ್ಥೆಯ ಕಣ್ಣಿಗೆ ದೈಹಿಕ ದೌರ್ಜನ್ಯ, ದೈಹಿಕ ಹಲ್ಲೆಯಷ್ಟೇ ಅಪರಾಧವಾಗಿ ಕಾಣಿಸುತ್ತದೆ. ಆದರೆ, ಕೆಲವು ಸಂದರ್ಭಗಳಲ್ಲಿ ಡಿಜಿಟಲ್ ದೌರ್ಜನ್ಯದಿಂದ ಉಂಟಾಗುವ ಮಾನಸಿಕ ಆಘಾತ ದೈಹಿಕ ಹಲ್ಲೆಗಿಂತಲೂ ಘೋರವಾಗಿರುತ್ತದೆ; ದೀರ್ಘಕಾಲೀನ ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ, ಸಾವು–ನೋವುಗಳಿಗೆ ಕಾರಣವಾಗುತ್ತದೆ.

ಮೊಬೈಲ್ ಫೋನ್ ಈಗ ಎಲ್ಲರ ಬದುಕಿನ ಭಾಗವಾಗಿರುವುದರಿಂದ, ಡಿಜಿಟಲ್ ದೌರ್ಜನ್ಯಗಳೂ ವ್ಯಾಪಕವಾಗಿವೆ. ನಮ್ಮ ಸಮಾಜ ಮಾತ್ರವಲ್ಲ, ಮನೆಗಳು ಕೂಡ ಹೆಣ್ಣುಮಕ್ಕಳಿಗೆ ಸುರಕ್ಷಿತ ತಾಣಗಳೇನಲ್ಲ. ಈ ಅಸುರಕ್ಷತೆಯನ್ನು ಡಿಜಿಟಲ್ ಲೋಕ ಮತ್ತಷ್ಟು ಹೆಚ್ಚಿಸುತ್ತಿದೆ. ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೊ (ಎನ್‌ಸಿಆರ್‌ಬಿ) ಬಿಡುಗಡೆ ಮಾಡಿರುವ ವರದಿಗಳನ್ನು ಗಮನಿಸಿದರೆ, ಭಾರತವು ಹೆಣ್ಣುಸಂಕುಲವನ್ನು ಭೀತಗೊಳಿಸುವ, ದಮನಗೊಳಿಸುವ, ನಿರ್ನಾಮಗೊಳಿಸುವ ಕರಾಳ ಹಾದಿಯಲ್ಲಿ ದಾಪುಗಾಲಿಡುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ‘ಎನ್‌ಸಿಆರ್‌ಬಿ’ ವರದಿ ಪ್ರಕಾರ, ಮಹಿಳೆಯರ ಮೇಲಿನ ದೌರ್ಜನ್ಯ 2022ಕ್ಕೆ ಹೋಲಿಸಿದರೆ 2023ರಲ್ಲಿ ಶೇ 4ರಷ್ಟು ಹೆಚ್ಚಾಗಿದೆ. ಕೌಟುಂಬಿಕ ದೌರ್ಜನ್ಯದಡಿಯಲ್ಲಿ ಶೇ 31, ಅಪಹರಣ–ಹಲ್ಲೆ ಶೇ 13.1, ಅತ್ಯಾಚಾರ ಪ್ರಕರಣಗಳು ಶೇ 7ರಷ್ಟಿವೆ. 6,156 ವರದಕ್ಷಿಣೆ ಪ್ರಕರಣಗಳು ದಾಖಲಾಗಿವೆ. ಇವೆಲ್ಲವೂ ದಾಖಲೆಗೆ ಸಿಗುವ ಅಂಕಿಅಂಶಗಳಷ್ಟೇ. ದಾಖಲೇ ಆಗದ ಡಿಜಿಟಲ್ ದೌರ್ಜನ್ಯಗಳನ್ನು ಲೆಕ್ಕ ಇಟ್ಟವರಾರು?

ಡಿಜಿಟಲ್ ದೌರ್ಜನ್ಯವು ಅತ್ಯಂತ ವೇಗವಾಗಿ ಹೆಚ್ಚುತ್ತಿರುವ ಹಿಂಸೆಯ ರೂಪವಾಗಿದ್ದು, ಜಾಗತಿಕವಾಗಿ ಎಲ್ಲ ದೇಶಗಳ ಡಿಜಿಟಲ್ ವೇದಿಕೆಗಳು ಹೆಣ್ಣುಮಕ್ಕಳ ಹಿಂಸೆಯ ತಾಣಗಳಾಗುತ್ತಿವೆ ಎಂದು ವಿಶ್ವಸಂಸ್ಥೆ ಆತಂಕ ವ್ಯಕ್ತಪಡಿಸಿದೆ; ಹೆಣ್ಣುಮಕ್ಕಳನ್ನು ಸಬಲೀಕರಣಗೊಳಿಸಬೇಕಾದ ವೇದಿಕೆಗಳು ಹುಡುಗಿಯರನ್ನು ಹಿಂಬಾಲಿಸಲು, ಕಿರುಕುಳ ನೀಡಲು ಮತ್ತು ನಿಂದಿಸಲು ಡಿಜಿಟಲ್ ಪರಿಕರಗಳನ್ನು ಹೆಚ್ಚಾಗಿ ಬಳಸುತ್ತಿವೆ ಎಂದೂ ಹೇಳಿದೆ. ಆನ್‌ಲೈನ್ ವೇದಿಕೆಗಳ ಮೂಲಕ ಕಿರುಕುಳ ನೀಡುವುದು, ಬೆದರಿಕೆ ಹಾಕುವುದು, ವೈಯಕ್ತಿಕ ದತ್ತಾಂಶಗಳನ್ನು ದುರ್ಬಳಕೆ ಮಾಡುವುದರ ಮೂಲಕ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದು ಹೇಳಿರುವ ವಿಶ್ವಸಂಸ್ಥೆ, ಡೀಪ್‌ಫೇಕ್ ಚಿತ್ರಗಳನ್ನು ಬಳಸಿ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ನಿವಾರಿಸುವ ನಿಟ್ಟಿನಲ್ಲಿ ಇಡೀ ವಿಶ್ವ ಒಗ್ಗೂಡುವ ಅಗತ್ಯವನ್ನು ಪ್ರತಿಪಾದಿಸಿದೆ.

ಸೈಬರ್ ದೌರ್ಜನ್ಯಗಳಿಂದ ಹೆಣ್ಣುಮಕ್ಕಳು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ದಾರಿಗಳೂ ಇವೆ. ಆನ್‌ಲೈನ್ ವೇದಿಕೆಗಳಲ್ಲಿ ಬಹಳ ಎಚ್ಚರಿಕೆಯಿಂದ ವರ್ತಿಸುವುದು ಬಹಳ ಮುಖ್ಯ. ಸಂಯಮದಿಂದ ಹಾಗೂ ಸ್ವಯಂ ನಿಯಂತ್ರಣದಿಂದ ವ್ಯವಹರಿಸಬೇಕು. ವೈಯಕ್ತಿಕ ಮಾಹಿತಿಗಳ ಸುರಕ್ಷತೆಯ ಬಗೆಗೆ ಜಾಗರೂಕರಾಗಿರಬೇಕು. ಅಪರಾಧಗಳು ಘಟಿಸಿದಾಗ ಸಾಕ್ಷ್ಯಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದು ಹಾಗೂ ಅಪರಾಧ ಕೃತ್ಯಗಳನ್ನು ದಾಖಲಿಸುವುದು ಬಹಳ ಮುಖ್ಯ. ಡಿಜಿಟಲ್ ಸಾಕ್ಷರತೆ ಹಾಗೂ ಜಾಗೃತಿಗೆ, ದೌರ್ಜನ್ಯಗಳನ್ನು ತಡೆಯುವ ನೆಲೆಯಲ್ಲಿ ಮಹತ್ವವಿದೆ.

ಸೈಬರ್ ಅಪರಾಧಗಳ ಹೆಚ್ಚಳಕ್ಕೆ ಪುರುಷ ಅಹಂಕಾರ ಅಥವಾ ಮಹಿಳೆಯರ ಅಸಹಾಯಕತೆ ಪೂರಕವಾಗಿದೆ ಎನ್ನುವುದು ಮೇಲ್ನೋಟದ ಸತ್ಯ. ಆದರೆ, ಕಾನೂನು ಮಾನ್ಯತೆಯ ಕೊರತೆ, ದುರ್ಬಲ ತಾಂತ್ರಿಕ ನಿಯಂತ್ರಣ, ಅಪರಾಧಿಗಳ ಅನಾಮಧೇಯತೆ, ಶಿಕ್ಷೆಯ ಕೊರತೆ, ಲಿಂಗಸೂಕ್ಷ್ಮ ವಿರೋಧಿ ಮನಃಸ್ಥಿತಿ– ಇವೆಲ್ಲವೂ ಡಿಜಿಟಲ್ ದಾಳಿಗಳು ತೀವ್ರ ವೇಗದಲ್ಲಿ ಹೆಚ್ಚಲು ಕಾರಣವಾಗಿವೆ. ಈ ನಿಟ್ಟಿನಲ್ಲಿ ಸರ್ಕಾರ ಗಮನಹರಿಸಬೇಕಿದೆ. ತಂತ್ರಜ್ಞಾನದಿಂದ ಉಂಟಾಗುತ್ತಿರುವ ಲಿಂಗಾಧಾರಿತ ಡಿಜಿಟಲ್ ಹಿಂಸೆಯ ಸ್ವರೂಪವನ್ನು ನಿಭಾಯಿಸಲು ಸೂಕ್ತವಾದ ಕಾನೂನುಗಳನ್ನು ಜಾರಿಗೊಳಿಸುವುದರ ಜೊತೆಗೆ, ಸಾಮಾನ್ಯ ಹೆಣ್ಣುಮಕ್ಕಳಿಗೂ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಕ್ರಮವಹಿಸಬೇಕಿದೆ. ಡಿಜಿಟಲ್ ಸುರಕ್ಷತಾ ಶಿಕ್ಷಣವನ್ನು ಮತ್ತು ಸಮಾಜದ ವಿವಿಧ ಸ್ತರಗಳನ್ನು ತಲಪುವ ಅರಿವಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ.

ಬದಲಾಗುತ್ತಿರುವ ಸಮಾಜದಲ್ಲಿ ಗಂಡಾಳ್ವಿಕೆಯ ನಿಂದನಾ ಮೌಲ್ಯಗಳಿಗೆ ಜೋತು ಬೀಳದಂತೆ ನಮ್ಮ ಗಂಡುಮಕ್ಕಳನ್ನು ಬೆಳೆಸುವಲ್ಲಿ ಕುಟುಂಬ ಹಾಗೂ ಸಮಾಜದ ಪಾತ್ರ ಮಹತ್ವದ್ದಾಗಿದೆ. ಸಮಾಜ ಮತ್ತು ಸರ್ಕಾರಗಳು ಈ ಬಗೆಯ ದೌರ್ಜನ್ಯಗಳಿಗೆ ಸ್ಪಂದಿಸುವ ಮನಃಸ್ಥಿತಿ ರೂಪಿಸಿಕೊಳ್ಳುವುದು ಅಗತ್ಯ. ಇಲ್ಲದೆ ಹೋದರೆ, ಸೈಬರ್ ಕಾಯ್ದೆ ಎಷ್ಟು ಪ್ರಬಲವಾಗಿದ್ದರೂ, ದೂರು ನೀಡಲು ಹೆಣ್ಣುಮಕ್ಕಳೂ ಮುಂದೆ ಬಂದರೂ, ವ್ಯವಸ್ಥೆ ಸೂಕ್ಷ್ಮವಾಗಿ ನಡೆದುಕೊಳ್ಳದ ಹೊರತು ನ್ಯಾಯ ಸಿಗುವುದು ಸಾಧ್ಯವೇ ಇಲ್ಲ.

ವಿಶ್ವಸಂಸ್ಥೆ ನವೆಂಬರ್ 25ರ ದಿನವನ್ನು ಅಂತರರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿವಾರಣಾ ದಿನವನ್ನಾಗಿ ಆಚರಿಸುತ್ತದೆ. ಹೆಣ್ಣುಮಕ್ಕಳು ಮತ್ತು ಮಹಿಳೆಯರ ಮೇಲೆ ಹೆಚ್ಚುತ್ತಿರುವ ಡಿಜಿಟಲ್ ದೌರ್ಜನ್ಯವನ್ನು ಕೊನೆಗಾಣಿಸುವ ನಿಟ್ಟಿನಲ್ಲಿ ಒಗ್ಗೂಡಲು ಕರೆ ನೀಡಿದೆ. ಲಿಂಗಾಧಾರಿತ ಹಿಂಸಾಚಾರ ಕೊನೆಗೊಳಿಸುವ ಕರೆ ಯಾವುದೋ ಒಂದು ದಿನಕ್ಕೆ ಸೀಮಿತ ಆಗಬಾರದು. ಅದು, ನಮ್ಮ ಅನುದಿನದ ಎಚ್ಚರ ಆಗಬೇಕಾಗಿದೆ.



ವಾಚಕರ ವಾಣಿ

ಪಬ್ಲಿಕ್ ಶಾಲೆ: ಬಡಮಕ್ಕಳಿಗೆ ಅಡಕತ್ತರಿ

ಕರ್ನಾಟಕ ಪಬ್ಲಿಕ್ ಶಾಲೆಗಳೊಂದಿಗೆ ಇತರ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಪ್ರಕ್ರಿಯೆಯು ಆತಂಕಕಾರಿ ಬೆಳವಣಿಗೆ. ಗ್ರಾಮೀಣ ಹಾಗೂ ಬಡವರ್ಗದ ಸಾವಿರಾರು ಮಕ್ಕಳಿಗೆ ಸರ್ಕಾರಿ ಶಾಲೆಗಳೇ ಶೈಕ್ಷಣಿಕ ಆಧಾರ. ಖಾಸಗಿ ಶಾಲೆಗಳ ಶುಲ್ಕ ಸಾಮಾನ್ಯ ಕುಟುಂಬಗಳಿಗೆ ಭರಿಸಲಾಗದ ಹೊರೆ. ಸರ್ಕಾರಿ ಶಾಲೆಗಳನ್ನು ಬಲಪಡಿಸುವ ಬದಲಿಗೆ, ಅವುಗಳನ್ನು ನಿಷ್ಕ್ರಿಯಗೊಳಿಸುವುದು ಸಾಮಾಜಿಕ ಅಸಮಾನತೆಯನ್ನು ಮತ್ತಷ್ಟು ಹೆಚ್ಚಿಸಿದಂತಾಗುತ್ತದೆ. ಮಕ್ಕಳ ಭವಿಷ್ಯಕ್ಕೆ ಬುನಾದಿ ಆಗಿ ನಿಲ್ಲಬೇಕಾದದ್ದು ಸರ್ಕಾರದ ಕರ್ತವ್ಯ. ಹಾಗಾಗಿ, ಸರ್ಕಾರಿ ಶಾಲೆಗಳ ಉಳಿಸುವಿಕೆ ಮತ್ತು ಬಲಪಡಿಸುವಿಕೆಯತ್ತ ಗಮನ ಹರಿಸಲಿ.

ರುಕ್ಮಿಣಿ ನಾಗಣ್ಣವರ, ಬೆಂಗಳೂರು

ಸರ್ಕಾರಿ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸಿ

‘ಕೆಪಿಎಸ್‌ಗೆ ಬಲ: ಮಕ್ಕಳ ಪ್ರವೇಶ ಹೆಚ್ಚಳ’ ಸುದ್ದಿ (ಪ್ರ.ವಾ., ನ. 22) ಓದಿ ವ್ಯಥೆಯಾಯಿತು. ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಮಕ್ಕಳಿಗೆ ಮುಖ್ಯವಾಗಿ ಶಿಕ್ಷಣ ಬೇಕು. ತಂದೆ–ತಾಯಿ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಶಿಕ್ಷಕರಿರುವ ಖಾಸಗಿ ಶಾಲೆಗಳಿಗೆ ಕಳುಹಿಸುತ್ತಾರೆ. ಹಣ ಖರ್ಚಾದರೂ ಪರವಾಗಿಲ್ಲ, ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಬೇಕು ಎನ್ನುವುದು ಅವರ ಇರಾದೆ. ಶಾಲೆಗಳಲ್ಲಿ ಸರಿಯಾಗಿ ಶಿಕ್ಷಕರಿಲ್ಲದಿದ್ದಾಗ ಸವಲತ್ತು ಕಲ್ಪಿಸಿದರೆ ಪ್ರಯೋಜನವಾದರೂ ಏನು? ಖಾಲಿ ಇರುವ ಹುದ್ದೆಗಳಿಗೆ ಶಿಕ್ಷಕರನ್ನು ನೇಮಿಸಿದರೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಯೂ ಹೆಚ್ಚಲಿದೆ. ಇಲ್ಲದಿದ್ದರೆ ಹೊಟ್ಟೆಗೆ ಹಿಟ್ಟಿಲ್ಲ; ಜುಟ್ಟಿಗೆ ಮಲ್ಲಿಗೆ ಹೂವು ಎನ್ನುವಂತಾಗುತ್ತದೆ.

ಕುಂದೂರು ಮಂಜಪ್ಪ, ಹೊಳೆ ಸಿರಿಗೆರೆ

ಸಂವಿಧಾನ ಅನುಸರಿಸುವಲ್ಲಿ ವಿಫಲ

ಭಾರತವು ಸ್ವತಂತ್ರಗೊಂಡ ನಂತರ ಸರ್ವಧರ್ಮಗಳ ಶ್ರೇಷ್ಠ ಧರ್ಮಗ್ರಂಥಗಳನ್ನು ಬದಿಗೊತ್ತಿ, ಸಂವಿಧಾನವೇ ಪವಿತ್ರವೆಂದು ಅರ್ಪಿಸಿಕೊಳ್ಳಲಾಗಿದೆ. ಆದರೆ, ಸಂವಿಧಾನ ಜಾರಿಯಾಗಿ ಮುಕ್ಕಾಲು ಶತಕ ಕಳೆದರೂ ಅದನ್ನು ಅರ್ಥೈಸಿಕೊಳ್ಳುವುದರಲ್ಲಿ ಜನಸಾಮಾನ್ಯರು ಹಾಗೂ ರಾಜಕಾರಣಿಗಳು ಸೋತಿರುವುದು ದುರ್ದೈವ. ಇದಕ್ಕೆ ರಾಜ್ಯದಲ್ಲಿ ಮುಖ್ಯಮಂತ್ರಿ ಗದ್ದುಗೆ ಕುರಿತಂತೆ ತಲೆದೋರಿರುವ ಗೊಂದಲದ ವಾತಾವರಣವೇ ಸಾಕ್ಷಿ. ಮುಖ್ಯಮಂತ್ರಿ ಹುದ್ದೆಗೆ ನೇಮಕಗೊಳ್ಳಲು ಹೈಕಮಾಂಡ್‌ನತ್ತ ಬೆಟ್ಟು ತೋರಿಸುತ್ತಿರುವುದು ಸಂವಿಧಾನಕ್ಕೆ ಮಾರಕ. ಮುಖ್ಯಮಂತ್ರಿ ಹುದ್ದೆಯ ಆಯ್ಕೆಯಲ್ಲಿ ಶಾಸಕರ ಸಂಖ್ಯೆ ಅಂತಿಮವೇ ಹೊರತು, ಹೈಕಮಾಂಡ್ ನಿರ್ಣಯ ಅಲ್ಲ. ಕೈಯಲ್ಲಿ ಸಂವಿಧಾನದ ಪುಸ್ತಕ ಹಿಡಿದು ‘ಸಂವಿಧಾನ ರಕ್ಷಿಸಿ’ ಎಂದು ವೇದಿಕೆಯಲ್ಲಿ ರಾಜಕೀಯ ಧುರೀಣರು ಘೋಷಿಸಿದರೆ ಸಾಲದು; ಅದರೊಳಗಿನ ಅಂಶಗಳನ್ನು ಅರ್ಥೈಸಿಕೊಳ್ಳಬೇಕು.

ಹೆಂದೊರೆ ಸಂಜು, ಶಿರಾ

ಪ್ರತಿಭಾ ಕಾರಂಜಿ: ಭಾಷಣಗಳು ಹೊರೆ

ಈಗ ಶಾಲೆಗಳಲ್ಲಿ ಪ್ರತಿಭಾ ಕಾರಂಜಿಯ ಕಾಲ. ಮಕ್ಕಳಲ್ಲಿನ ಪ್ರತಿಭೆಯನ್ನು ಪ್ರೋತ್ಸಾಹಿಸುವುದೇ ಇದರ ಉದ್ದೇಶ. ಆದರೆ, ಆರಂಭದಲ್ಲಿ ಮಾಡುವ ವೇದಿಕೆ ಕಾರ್ಯಕ್ರಮದ ಮೂಲಕ ಮಕ್ಕಳನ್ನು ಶೋಷಿಸುವುದು ಎಷ್ಟು ಸರಿ? ವೇದಿಕೆ ಮೇಲೆ ಅತಿಥಿಗಳು, ಸಂಘ–ಸಂಸ್ಥೆಯ ಪದಾಧಿಕಾರಿಗಳು, ಅಧಿಕಾರಿಗಳು ತುಂಬಿರುತ್ತಾರೆ. ಹಾಡು, ನೃತ್ಯ, ಭಾಷಣ, ಪ್ರಬಂಧ ಇತ್ಯಾದಿ ಕಲಿತು ಅದನ್ನು ಯಶಸ್ವಿಯಾಗಿ ಪ್ರದರ್ಶಿಸುವ ಆಸೆಯಲ್ಲಿರುವ ಮಕ್ಕಳಿಗೆ ಅತಿಥಿಗಳ ದೀರ್ಘ ಭಾಷಣ ತಣ್ಣೀರು ಎರಚುತ್ತದೆ. ಪ್ರತಿಭಾ ಕಾರಂಜಿಯು ಎಸ್‌ಡಿಎಂಸಿ ಸದಸ್ಯರು, ಶಿಕ್ಷಕರು ಮತ್ತು ಅಧಿಕಾರಿಗಳ ಹೆಚ್ಚುಗಾರಿಕೆ ಅಲ್ಲ. ಅದು ಸಂಪೂರ್ಣ ಮಕ್ಕಳ ಪ್ರತಿಭೆಯ ಅನಾವರಣದ ತಾಣವಾಗಬೇಕು. ಹಾಗಾಗಿ, ವೇದಿಕೆ ಕಾರ್ಯಕ್ರಮವನ್ನು ರದ್ದುಪಡಿಸುವುದು ಉತ್ತಮ.

ರವಿ ಬಿ.ಎನ್., ಹರಿಹರ

‘ಭೀಮ ನಡೆ’ ಹೆಸರಿನಲ್ಲಿ ವಿಷ ಬಿತ್ತಬೇಡಿ

ಜನರಿಗೆ ಸಂವಿಧಾನದ ಆಶಯ ಮುಟ್ಟಿಸಲು ‘ಭೀಮ ನಡೆ’ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ (ಪ್ರ.ವಾ., ನ. 24). ಅವರ ಈ ಆಲೋಚನೆ ಒಳ್ಳೆಯದು. ಆದರೆ, ಇಂತಹ ಆಲೋಚನೆ ಅವರಿಗೆ ವಿಳಂಬವಾಗಿ ಹೊಳೆದಿರುವುದೇ ಅಚ್ಚರಿ. ಭಾರತ ಜಾತ್ಯತೀತ ರಾಷ್ಟ್ರವೆಂದು ಸಂವಿಧಾನದಲ್ಲಿ ಹೇಳಲಾಗಿದೆ. ಆದರೆ, ಬಿಜೆಪಿ ಹಾಗೂ ಸಂಘ ಪರಿವಾರವು ದೇಶವನ್ನು ಹಿಂದೂರಾಷ್ಟ್ರ ಮಾಡಲು ಹೊರಟಿದೆ. ಸಂವಿಧಾನ ತತ್ತ್ವಗಳಿಗೆ ವಿರುದ್ಧ ನಡೆದು, ಈಗ ಸಂವಿಧಾನವನ್ನು ಮನೆ ಮನೆಗೆ ಮುಟ್ಟಿಸುತ್ತೇವೆ ಎನ್ನುವುದು ದೊಡ್ಡ ನಾಟಕದಂತೆ ತೋರುತ್ತದೆ. ಸಂವಿಧಾನ ಮತ್ತು ಅಂಬೇಡ್ಕರ್ ಅವರ ಹೆಸರಲ್ಲಿ ಜನರ ಮನಸ್ಸಿನಲ್ಲಿ ವಿಷಬೀಜ ಬಿತ್ತುವುದು ತಪ್ಪು. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೂ ಮಾರಕ.

ಉಷಾ, ಕಲಬುರಗಿ


ಪ್ರಾಣ ಕಳೆದುಕೊಳ್ಳುವುದು ಪರಿಹಾರವಲ್ಲ

ಚಿತ್ರದುರ್ಗದಲ್ಲಿ ಸಂಚಾರ ಪೊಲೀಸರ ಕಿರುಕುಳದಿಂದ ಬೇಸತ್ತ ಆಟೊ ಚಾಲಕರೊಬ್ಬರು, ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿರುವುದು ಸಮಾಜದ ದುಃಸ್ಥಿತಿಗೆ ಹಿಡಿದ ಕನ್ನಡಿ. ಚಾಲಕನ ಕುಟುಂಬಕ್ಕೆ ಆದ ಅನ್ಯಾಯ ಸರಿಪಡಿಸಲು ಸಾಧ್ಯವಿಲ್ಲ. ಆದರೆ, ಅವಮಾನಕರ ಸನ್ನಿವೇಶಗಳ ನಡುವೆಯೂ ಬದುಕಿಯೇ ಉತ್ತರಿಸಬೇಕು.

ಪ್ರಾಣ ಕಳೆದುಕೊಳ್ಳುವುದೊಂದೇ ಪರಿಹಾರವಲ್ಲ. ‘ಮಾನವ ಜನ್ಮ ದೊಡ್ಡದು’ ಎಂದು ಪುರಂದರದಾಸರ ಮಾತನ್ನು ಮರೆಯಬಾರದು. ದೌರ್ಜನ್ಯ ಎದುರಿಸುವುದನ್ನು ಅಂಬೇಡ್ಕರ್ ಅವರಿಂದ ಕಲಿಯಬೇಕು; ಗಾಂಧೀಜಿಯವರ ಸತ್ಯಾಗ್ರಹದ ಮಾರ್ಗವನ್ನೂ ನೆನಪಿಸಿಕೊಳ್ಳಬೇಕು.

ಕೆ. ನಿರ್ಮಲ ಮರಡಿಹಳ್ಳಿ, ಚಿತ್ರದುರ್ಗ

ಚುರುಮುರಿ



ಸನಕಪುರದ ಕಾರಣಿಕ

• ಲಿಂಗರಾಜು ಡಿ.ಎಸ್.

ಕರ್ನಾಟಕದ ಜಾತ್ರೆ ನಡೆಸಕ್ಕೆ ಮಹಿಶೂರು ರಾಮಸಿದ್ಧರ ಒಕ್ಕಲು ಮತ್ತು ಸನಕಪುರದ ಕುಮಾರಶಿವನ ಒಕ್ಕಲಿನ ಮಧ್ಯೆ ಸ್ಯಾನೆ ಪೈಪೋಟಿ ಅದೆ. ಇವರೊಂದಿಗೆ ಕುಮತೂರು ಒಕ್ಕಲು, ಹೊಳೆಜಾರಿದ ಒಕ್ಕಲುಗಳೂ ಅದಾವೆ. ಇವರೆಲ್ಲಾ ಕೈಕಮಾಂಡು ದೇವರುಗಳಾದ ಸೋನಮ್ಮ ತಾಯಿ ಮತ್ತು ರಾಗಪ್ಪ ದೇವರಿಗೆ ನಡಕತ್ತರೆ.

‘ಹೋದಸಾರಿ ಕಾರಣಿಕದಲ್ಲಿ ರಾಮಸಿದ್ಧರ ಒಕ್ಕಲಿನೋರು ಭಾಳ ಖುಷಿಯಲ್ಲಿದ್ರು. ಅದಕ್ಕೆ ತಕ್ಕಂಗೆ ‘ಸದ್ಯಕ್ಕೆ ರಾಮಸಿದ್ಧರ ಒಕ್ಕಲು ಜಾತ್ರೆ ನಡೆಸಬೇಕಲೇ ಭೋಪರಾಕ್’ ಅಂತ ಕಾರಣಿಕವಾಗಿತ್ತು’ ಎಂದು ಕರ್ಮದರ್ಶಿಗಳು ವಿವರಿಸ್ತಾ ಇದ್ರು. ಜಾತ್ರೆ ಸಂಬಂಧ ಈ ಸಾರಿ ಸನಕಪುರದ ಕಾರಣಿಕ ನಮ್ಮ ಪರವಾಗೇ ಆತದೆ ಅಂತ ಅಲ್ಲಿನ ಒಕ್ಕಲಿನೋರು ಒಬ್ಬಿಟ್ಟು, ಪಾಯಸ ಮಾಡಕ್ಕೆ ರೆಡಿಮಾಡಿಕ್ಯಾವ್ರಂತೆ.

‘ನಾವು ಮೂವತ್ತು ತಿಂಗಳು ಕಾಯಿಯೂದಲ್ದೆ ಖರ್ಚೂ ಕೊಟ್ಟುದವಿ. ಈಗ ನಮಗೇ ಜಾತ್ರೆ ನಾಯಕತ್ವ ಕೊಡಬಕು’ ಅಂತ ಕುಮಾರಶಿವನ ಒಕ್ಕಲಿನೋರ ಬೇಡಿಕೆ.

‘ನೀವೊಬ್ಬರೇ ತ್ಯಾಗ ಮಾಡಿಲ್ಲ. ನಾವೂ ಕಾಸು ಕೊಟ್ಟಿದ್ದೀವಿ’ ಅಂತ ಬ್ಯಾರೆ ಒಕ್ಕಲಿನೋರೂ ಬಾಯಿ ತೆಗಿದ್ರು.

ರಾಮಸಿದ್ಧರ ಒಕ್ಕಲಿನೋರು ‘ನಾವು ಜಾತ್ರೆ ಬುಡಕುಲ್ಲ’ ಅಂತ ಪಟ್ಟು ಹಾಕ್ಯವ್ರೆ’ ಅಂದ್ರು ಕರ್ಮದರ್ಶಿಗಳು.

ಸೋನಮ್ಮ ತಾಯಿ, ರಾಗಪ್ಪ ದೇವರು ಗುಡಿ ಬುಟ್ಟು ಈಚೆಗೇ ಹೊಂಡಲ್ಲ. ಕರಗಯ್ಯ ಮಾತ್ರ ನನಗೆ ಹೇಳಕ್ಕೆ ಏನೂ ಇಲ್ಲ. ಅಮಿಕ್ಕಬಲ್ ಸೆಟಲ್ಮೆಂಟಾತದೆ ತಡೀರಿ ಅಂತ ಹೇಳ್ತಾ ಅದೆ. ಇದರ ಮಧ್ಯೆ ನಂದೆಲ್ಲಿಕ್ಕನ ಅಂತ ಜಾತ್ರೆ ಕಮಿಟಿ ನೆಂಬರಾಗಕ್ಕೆ ಆತುರಗೆಟ್ಟೋರು ಓಡಾಡ್ತಿದ್ರು. ಇವರ ಆಟಗುಳಿ ಕಂಡು ಜನ, ‘ಕೆಲಸವಿಲ್ಲದೋನ ಥರ ನಮ್ಮ ಬ್ಯಾಕು ತಟ್ಟುತಾವ್ರಲ್ಲ ಇವರು’ ಅಂತ ಮುಸಿಮುಸಿ ನಗ್ತಿದ್ರು. ಅಷ್ಟರಲ್ಲಿ ಕಾರಣಿಕ ಸುರುವಾತು.

ಈ ಗಲಾಟೇಲಿ ಕರಗಯ್ಯ ನುಡಿದ ಕಾರಣಿಕವ ಯಾರ್‍ಯಾರು ಕೇಳಿಸಿಗಂಡ್ರೋ ಗೊತ್ತಿಲ್ಲ. ಕುಮಾರಶಿವನ ಒಕ್ಕಲೋರು ಅದ್ಯಾಕೋ ‘ನಾವೇ ಬ್ಯಾರೆ ಜಾತ್ರೆ ನಡುಸುಮಾ ಬಲ್ಲಿರ್ಲಾ’ ಅಂತ ಎದ್ದೋದ್ರು.

ಸಂಗತ

ಸಲಿಂಗ ಪ್ರೇಮ: ಪೂರ್ವಗ್ರಹಗಳೇ ಹೆಚ್ಚು

ಸಲಿಂಗ ಪ್ರೇಮ ಸುಲಭ ವ್ಯಾಖ್ಯಾನಕ್ಕೆ ದಕ್ಕುವಂತಹದ್ದಲ್ಲ. ಅದರ ಕುರಿತ ಸಾರ್ವಜನಿಕ ಚರ್ಚೆಯ ಬಹುತೇಕ ಅಭಿಪ್ರಾಯಗಳು ತಿಳಿವಳಿಕೆಯ ಕೊರತೆಯಿಂದ ಕೂಡಿವೆ.

• ನಡಹಳ್ಳಿ ವಸಂತ್

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆಯವರು ‘ಯಕ್ಷಗಾನದಲ್ಲಿ ಸಲಿಂಗಕಾಮ’ದ ಕುರಿತು ಆಡಿದ ಮಾತಿನಲ್ಲಿ ಕೆಲವು ತಪ್ಪು ತಿಳಿವಳಿಕೆಗಳಿವೆ. ಅವುಗಳನ್ನು ನಿವಾರಿಸುವ ಉದ್ದೇಶ ಈ ಬರಹದ್ದು.

‘ಕಾಮ’ ಎನ್ನುವ ಶಬ್ದಕ್ಕೆ ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಒಂದು ಮಟ್ಟದ ಕಳಂಕವನ್ನು ಅಂಟಿಸುತ್ತಾ ಬರಲಾಗಿದೆ. ಮೈಥುನ ಮೇಲ್ನೋಟಕ್ಕೆ ಒಂದು ದೈಹಿಕ ಕ್ರಿಯೆ ಎನ್ನುವುದೇನೋ ನಿಜ. ಆದರೆ, ಮಾನವರ ಲೈಂಗಿಕ ಪ್ರಪಂಚ ಬರೀ ಮೈಥುನ ಕ್ರಿಯೆಗೆ ಸೀಮಿತವಾಗಿರದೆ, ಅತ್ಯಂತ ಅನೂಹ್ಯವಾದ ಆಯಾಮಗಳನ್ನು ಒಳಗೊಂಡಿದೆ. ಇದರ ಆಳ ಅಗಲಗಳು ಸರಳ ವಿವರಣೆಗೆ ದಕ್ಕುವುದಿಲ್ಲ. ಹಾಗಾಗಿ, ಸಲಿಂಗಕಾಮದ ಬದಲಾಗಿ ‘ಸಲಿಂಗ ಪ್ರೇಮ’ ಎನ್ನುವ ಶಬ್ದವನ್ನು ಬಳಸುವುದು ಸೂಕ್ತ.

‘ಯಕ್ಷಗಾನದಲ್ಲಿ ಹೋಮೋಸೆಕ್ಸ್ ಬೆಳೆತದೆ’ ಎನ್ನುವ ಮಾತುಗಳು ಯಾವುದೇ ವೈಜ್ಞಾನಿಕ ಮಾನದಂಡಗಳಿಗೆ ಹೊಂದುವುದಿಲ್ಲ. ಯಕ್ಷಗಾನ ಕಲಾವಿದರು ವರ್ಷದಲ್ಲಿ 6–8 ತಿಂಗಳು ತಮ್ಮ ಕುಟುಂಬದಿಂದ ದೂರವಿರುತ್ತಾರೆ. ಹಾಗಾಗಿ, ತಮ್ಮ ಲೈಂಗಿಕ ಒತ್ತಡವನ್ನು ನಿವಾರಿಸಿಕೊಳ್ಳಲು ಸಲಿಂಗ ಪ್ರೇಮಕ್ಕೆ ಮೊರೆಹೋಗುತ್ತಾರೆ ಎನ್ನುವುದು ಬಿಳಿಮಲೆ ಅವರ ಹೇಳಿಕೆಯಲ್ಲಿ ಮೇಲುನೋಟಕ್ಕೆ ಕಾಣಿಸುತ್ತದೆ. ಆದರೆ, ಸಲಿಂಗ ಪ್ರೇಮ ಎನ್ನುವುದು ಸಾಂದರ್ಭಿಕವಾಗಿರುವುದಿಲ್ಲ. ಪ್ರವೃತ್ತಿಯಿಂದ ಸಲಿಂಗ ಪ್ರೇಮಿಯಾದವರು ಮಾತ್ರ ತನ್ನದೇ ಲಿಂಗದ ವ್ಯಕ್ತಿಗಳೊಡನೆ ಲೈಂಗಿಕ ಸಂಪರ್ಕ ಹೊಂದಬಲ್ಲರು. ಕೆಲವರು ಹೆಣ್ಣು ಮತ್ತು ಗಂಡು ಇಬ್ಬರ ಕಡೆಗೂ ಸಮಾನವಾದ ಲೈಂಗಿಕ ಆಸಕ್ತಿ ಹೊಂದಿರಬಹುದು. ಇವರನ್ನು ದ್ವಿಲಿಂಗ ಪ್ರೇಮಿಗಳು ಎನ್ನುತ್ತಾರೆ. ಉಳಿದಂತೆ ಹೆಚ್ಚಿನವರು ಭಿನ್ನಲಿಂಗ ಪ್ರೇಮಿಗಳೇ. ಇಂಥವರಿಗೆ ಭಿನ್ನಲಿಂಗದ ಸಂಗಾತಿ ಸಿಗದಿದ್ದಾಗ ಸಲಿಂಗ ಪ್ರೇಮಕ್ಕೆ ಮೊರೆಹೋಗುತ್ತಾರೆ ಎನ್ನುವುದು ಸತ್ಯವಲ್ಲ. ಹಾಗಾಗಿ ಸಲಿಂಗ ಪ್ರೇಮ, ದ್ವಿಲಿಂಗ ಪ್ರೇಮ ಅಥವಾ ಭಿನ್ನಲಿಂಗ ಪ್ರೇಮಗಳೆಲ್ಲಾ ಸಾಂದರ್ಭಿಕವಲ್ಲ. ಅದು ಆಯಾ ವ್ಯಕ್ತಿಯ ಮೂಲಭೂತ ಪ್ರವೃತ್ತಿ ಮಾತ್ರ ಆಗಿರುತ್ತದೆ.



ಮಾನವರಲ್ಲಿ ಎಷ್ಟು ಜನ ಸಲಿಂಗ ಪ್ರೇಮಿಗಳಿರಬಹುದು ಮತ್ತು ದ್ವಿಲಿಂಗ ಪ್ರೇಮಿಗಳಿರಬಹುದು ಎನ್ನುವುದನ್ನು ನಿಖರವಾಗಿ ಹೇಳಲಾಗುವುದಿಲ್ಲ. ಬೇರೆ ಬೇರೆ ದೇಶದ ಸಮೀಕ್ಷೆಗಳಲ್ಲಿ ಭಿನ್ನ ಭಿನ್ನ ಅಂಕಿಸಂಖ್ಯೆಗಳು ಕಂಡುಬಂದಿವೆ. ಜೊತೆಗೆ ಗಂಡೋ ಹೆಣ್ಣೋ ಎನ್ನುವುದರ ಆಧಾರದ ಮೇಲೆಯೂ ಈ ಅಂಕಿಸಂಖ್ಯೆಗಳಲ್ಲಿ ವ್ಯತ್ಯಾಸವಾಗುತ್ತದೆ. ಆದರೆ, ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ 4ರಷ್ಟು ಸಲಿಂಗ ಪ್ರೇಮಿಗಳಿರಬಹುದು ಮತ್ತು ಇನ್ನೂ ಶೇ 4ರಷ್ಟು ಜನ ದ್ವಿಲಿಂಗ ಪ್ರೇಮಿಗಳಾಗಿರಬಹುದು ಎನ್ನುವುದು ಒಂದು ಅಂದಾಜು. ದ್ವಿಲಿಂಗ ಪ್ರೇಮಿಗಳ ಒಂದು ಭಾಗದ ಜನಸಂಖ್ಯೆ ಸಲಿಂಗ ಪ್ರೇಮಿಗಳ ಅಂಕಿಸಂಖ್ಯೆಯಲ್ಲಿಯೂ ಬೆರೆತುಹೋಗುವ ಸಾಧ್ಯತೆಗಳಿವೆ. ಬರೀ ಭಿನ್ನಲಿಂಗದವರೊಡನೆ ಲೈಂಗಿಕ ಆಸಕ್ತಿ ಹೊಂದಿಲ್ಲದ (ವಿಭಿನ್ನ ಲೈಂಗಿಕ ಪ್ರವೃತ್ತಿ ಹೊಂದಿರುವವರು) ಎಲ್ಲರನ್ನೂ ಒಟ್ಟಾಗಿ ಸೇರಿಸಿ ‘ಎಲ್‌ಜಿಬಿಟಿಕ್ಯೂ’ ಎಂದು ವರ್ಗೀಕರಿಸಲಾಗುತ್ತದೆ. ಹೊಸ ಹೊಸ ಮಾಹಿತಿಗಳು ದೊರೆತಂತೆ ಈ 5 ಅಕ್ಷರಗಳಿಗೆ ಹೊಸ ಹೊಸ ಅಕ್ಷರಗಳು ಸೇರಿಕೊಳ್ಳುತ್ತಾ ಹೋಗುತ್ತಿವೆ. ಹಾಗಾಗಿ, ಕೆಲವು ದೇಶಗಳಲ್ಲಿ ಮುಂದೆ ಗುರುತಿಸಬಹುದಾದ ವಿಭಿನ್ನ ಲೈಂಗಿಕ ಆಸಕ್ತಿ ಹೊಂದಿರುವವರನ್ನೆಲ್ಲಾ ಸೇರಿಸಿ ‘ಎಲ್‌ಜಿಬಿಟಿಕ್ಯೂ + ’ ಎಂದು ಕರೆಯಲಾಗುತ್ತದೆ. ಇಂತಹವರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ 10ರಷ್ಟು ಇರಬಹುದು ಎನ್ನುವುದು ಸಾಮಾನ್ಯವಾಗಿ ಒಪ್ಪುವ ಮಾತು.

ಯಕ್ಷಗಾನ ಕಲಾವಿದರಲ್ಲಿಯೂ ಇಂತಹ ಶೇ 10ರಷ್ಟು ಜನರು ಇದ್ದೇ ಇರುತ್ತಾರೆ. ಇಂಥವರು ಒಂದು ಮೇಳದ ಅಧಿಕಾರ ಸ್ಥಾನದಲ್ಲಿದ್ದಾಗ, ಸಹಕಲಾವಿದರಿಗೆ ಲೈಂಗಿಕ ಕಿರುಕುಳ ನೀಡಿರುವ ಸಾಧ್ಯತೆಗಳನ್ನೂ ಒಪ್ಪಿಕೊಳ್ಳಬಹುದು. ಅಂತಹ ಸಂದರ್ಭಗಳಲ್ಲಿ ಸಹಕಲಾವಿದರು ಲೈಂಗಿಕ ಹಿಂಸಾಚಾರವನ್ನು ಅನುಭವಿಸಿರುತ್ತಾರೆ. ಹೀಗೆ ಹಿಂಸಾಚಾರಕ್ಕೆ ಒಳಗಾದವರು ಸಿದ್ಧರಾಗಿದ್ದರೆ ಕಾನೂನಿನ ದೃಷ್ಟಿಯಿಂದ ಪರಿಹಾರ ಹುಡುಕಬಹುದು. ಆದರೆ, 6–8 ತಿಂಗಳು ಕುಟುಂಬದಿಂದ ದೂರವಿರುವ ಕಾರಣಕ್ಕಾಗಿ ‘ಯಕ್ಷಗಾನದಲ್ಲಿ ಹೋಮೋಸೆಕ್ಸ್ ಬೆಳೆತದೆ’ ಎನ್ನುವುದು ತಪ್ಪು ತಿಳಿವಳಿಕೆಗೆ ಎಡೆಮಾಡಿಕೊಡುತ್ತದೆ.

ಬಿಳಿಮಲೆ ಅವರ ಹೇಳಿಕೆಗೆ ಬಂದ ಉಗ್ರವಾದ ಪ್ರತಿಕ್ರಿಯೆ, ಎಫ್‌ಐಆರ್– ಎಲ್ಲವೂ ಸಲಿಂಗ ಪ್ರೇಮದ ಕುರಿತು ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ತಪ್ಪುಗ್ರಹಿಕೆಗಳ ಮತ್ತು ಹೀನಭಾವಗಳ ಪ್ರದರ್ಶನವೇ ಆಗಿವೆ. ಬಹುಸಂಖ್ಯಾತ ಭಿನ್ನಲಿಂಗ ಪ್ರೇಮಿಗಳು ಧರ್ಮ–ಸಂಸ್ಕೃತಿಗಳ ಹಣೆಪಟ್ಟಿಯಲ್ಲಿ ವಿಭಿನ್ನ ಲೈಂಗಿಕ ಆಸಕ್ತಿ ಹೊಂದಿರುವವರನ್ನು ಸಾಮಾಜಿಕ ಕಳಂಕಕ್ಕೆ ಒಳಪಡಿಸುತ್ತಲೇ ಬಂದಿದ್ದಾರೆ. ಸಲಿಂಗ ಪ್ರೇಮ ಒಂದು ಕಾಯಿಲೆ, ಅದನ್ನು ಗುಣಪಡಿಸಿಕೊಡುತ್ತೇವೆ ಎಂದು ಹೇಳುವ ಧಾರ್ಮಿಕ ಮುಖಂಡರು, ನಕಲಿ ವೈದ್ಯರು ನಮ್ಮ ನಡುವೆಯೇ ಸಕ್ರಿಯರಾಗಿದ್ದಾರೆ.

ಸರ್ಕಾರದ ಕಾನೂನುಗಳು, ನ್ಯಾಯಾಲಯದ ಆದೇಶಗಳು ಜನಸಾಮಾನ್ಯರಲ್ಲಿ ಶತಶತಮಾನಗಳಿಂದ ಬೇರೂರಿರುವ ತಪ್ಪುಗ್ರಹಿಕೆಗಳನ್ನು ದೂರಮಾಡಲು ಸಾಧ್ಯವಾಗುತ್ತಿಲ್ಲ. ‘ಎಲ್‌ಜಿಬಿಟಿಕ್ಯೂ + ’ ಸಮುದಾಯದ ಕುರಿತಾಗಿ ಈಗಾಗಲೇ ಇರುವ ಹೀನಭಾವವನ್ನು ಹೋಗಲಾಡಿಸಲು ಬಿಳಿಮಲೆಯವರ ಅಸಾಂದರ್ಭಿಕ ಹಾಗೂ ಅಪೂರ್ಣವಾದ ಹೇಳಿಕೆಗಳು ಯಾವುದೇ ರೀತಿಯ ಸಹಾಯ ಮಾಡುವುದಿಲ್ಲ. ಸಲಿಂಗ ಪ್ರೇಮದ ವಿಚಾರವನ್ನು ಆ ಕ್ಷೇತ್ರದ ತಜ್ಞರಿಗೆ ಮತ್ತು ಅವರನ್ನು ಸಮಾಜದ ಮುಖ್ಯಧಾರೆಗೆ ತರಲು ಶ್ರಮಿಸುತ್ತಿರುವವರಿಗೆ ಬಿಟ್ಟರೆ ಅಂತಹ ಪ್ರಯತ್ನಗಳಿಗೆ ಸಹಾಯ ಮಾಡಿದಂತಾಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸ್ಫುರದ್ರೂಪಿ ನಟನ ಸಿನಿ ನೆನಪಿನ ಪುಟ





ಪುತ್ರ ಸನ್ನಿ ಜೊತೆ

• ವಿಶಾಖ ಎನ್.

ಪಂಜಾಬ್‌ನ ನಸ್ರಾಲಿ ಎಂಬ ಹಳ್ಳಿ. ಧರ್ಮೇಂದ್ರ ಕೇವಲ್ ಕೃಷನ್ ಡಿಯೋಲ್ ಎಂಬ ಹುಡುಗ ಸೈಕಲ್ ಏರಿ ಮನೆಯಿಂದ ಹೊರಟರೆ, ಗೋಡೆ ಮೇಲೆ ಸಿನಿಮಾ ಪೋಸ್ಟರ್ ಕಂಡೊಡನೆ ನಿಂತುಬಿಡುತ್ತಿದ್ದ. ಎವೆಯಿಕ್ಕದೆ ಒಂದಿಷ್ಟು ಕ್ಷಣ ಪೋಸ್ಟರ್ ಕಣ್ತುಂಬಿಕೊಂಡು ರಾತ್ರಿ ಉಂಡು ಮಲಗಿದರೆ, ಬೀಳುತ್ತಿದ್ದುದು ಸಿನಿಮಾ ಕನಸು.

ದಿಲೀಪ್ ಕುಮಾರ್ ಅಭಿನಯದ 'ಶಹೀನ್' ಸಿನಿಮಾ 1948ರಲ್ಲಿ ತೆರೆಕಂಡಿತ್ತು. ಅದನ್ನು ನೋಡಿದ ಮೇಲಂತೂ ಹುಡುಗನ ತಲೆಯೊಳಗೆ ಸಿನಿಮಾ ಗುಂಗುಹುಳ. ಬೆಳಿಗ್ಗೆ ಎದ್ದು ಕನ್ನಡಿ ಮುಂದೆ ನಿಂತು ಹಲವು ಭಂಗಿಗಳಲ್ಲಿ ತನ್ನನ್ನು ತಾನೇ ನೋಡಿಕೊಂಡು, 'ನಾನೂ ದಿಲೀಪ್ ಜೀ ಅವರಂತೆ ನಟನಾಗಬಲ್ಲೆನೇ' ಎಂದು ಪ್ರಶ್ನೆ ಹಾಕಿಕೊಂಡು ಸ್ವಗತಕ್ಕಿಳಿಯುತ್ತಿದ್ದ. 1962ರಲ್ಲಿ 'ಪಾರಿ' ಎಂಬ ಬಂಗಾಳಿ ಚಿತ್ರದಲ್ಲಿ, ತಾನು ಆರಾಧಿಸುತ್ತಿದ್ದ ದಿಲೀಪ್ ಕುಮಾರ್ ಜೊತೆಯಲ್ಲೇ ಅಭಿನಯಿಸುವ ಅವಕಾಶ ಹುಡುಕಿಕೊಂಡು ಬಂತು. ಆ ಕ್ಷಣದಿಂದ ಧರ್ಮೇಂದ್ರ ಬಾಯಲ್ಲಿ 'ದಿಲೀಪ್ ಜೀ' ಎನ್ನುವುದು 'ದಿಲೀಪ್ ಭಯ್ಯಾ' ಎಂದಾಯಿತು. 1972ರಲ್ಲಿ 'ಪಾರಿ' ಚಿತ್ರವು 'ಅನೋಖಾ ಮಿಲನ್' ಹೆಸರಿನಲ್ಲಿ ಹಿಂದಿಗೆ ರೀಮೇಕ್ ಆಯಿತು. ನೆಚ್ಚಿನ ನಟನೊಟ್ಟಿಗೆ ಮತ್ತಷ್ಟು ಸಮಯ ಕಳೆಯುವ ಅವಕಾಶ. ತಾನು ದೀರ್ಘಾವಧಿ ಕಂಡಿದ್ದ ಕನಸು ಈ ಮಟ್ಟಿಗೆ ನನಸಾಗುತ್ತದೆ ಎಂದು ಭಾವಿಸಿಯೇ ಇರಲಿಲ್ಲ ಎಂದು ಧರ್ಮೇಂದ್ರ ಅನೇಕ ಸಲ ಹೇಳಿಕೊಂಡಿದ್ದರು.

ಮುಂಬೈಗೆ ವಲಸೆ: ಕಟ್ಟುಮಸ್ತು ಶರೀರ, ಎತ್ತರದ ನಿಲುವು ಇದ್ದ ಧರ್ಮೇಂದ್ರ ಸಿನಿಮಾ ನಟನಾಗುವ ಕನಸು ಹೊತ್ತು ಚಿಕ್ಕಪ್ರಾಯದಲ್ಲೇ ಮುಂಬೈಗೆ ವಲಸೆ ಹೋದದ್ದು ಸಿನಿಮೀಯ. 1958ರಲ್ಲಿ 'ಫಿಲ್ಮ್‌ಫೇರ್' ನಿಯತಕಾಲಿಕೆಯವರು ನಡೆಸಿದ ಸ್ಪರ್ಧೆಯೊಂದರಲ್ಲಿ ಗೆದ್ದಾಗ ಸಿನಿಮಾ ಅಭಿನಯದ ಅವಕಾಶ ಸಿಕ್ಕೀತು ಎಂದು ಚಾತಕಪಕ್ಷಿಯಾದರು. ಆ ಸ್ಪರ್ಧೆಯಲ್ಲಿ ಗೆದ್ದವರನ್ನು ಹಾಕಿಕೊಂಡೇ ಸಿನಿಮಾ ಮಾಡಲಾಗುತ್ತದೆ ಎಂದು ಘೋಷಿಸಿದ್ದೇ ಅದಕ್ಕೆ ಕಾರಣ. ಆದರೆ, ಆ ಸಿನಿಮಾ ಸೆಟ್ಟೇರಲೇ ಇಲ್ಲ.

ತುತ್ತಿನ ಚೀಲ ತುಂಬಿಸಿಕೊಳ್ಳಲು ಮುಂಬೈನಲ್ಲಿ ಡ್ರಿಲ್ಲಿಂಗ್ ಮಷಿನ್ ಆಪರೇಟರ್ ಆಗಿ ಸಣ್ಣ ಕೈಗಾರಿಕೆಯಲ್ಲಿ ಕೆಲಸಕ್ಕೆ ಸೇರಿದರು. ತಿಂಗಳಿಗೆ ₹200 ಸಂಬಳ. ಹೆಚ್ಚಿನ ಅವಧಿ ಕೆಲಸ ಮಾಡಿದರೆ ಇನ್ನಷ್ಟು ಹಣ ಸಿಗುತ್ತಿತ್ತೆಂಬ ಕಾರಣಕ್ಕೆ ದೇಹವನ್ನು ಅದಕ್ಕಾಗಿಯೇ ದಂಡಿಸುತ್ತಿದ್ದರು. ಬಿಡುವಿನ ವೇಳೆಯಲ್ಲಿ ದೂರಕ್ಕೆ ನಡೆದೇ ಸಾಗಿ, ನಿರ್ಮಾಪಕರಲ್ಲಿ ಅವಕಾಶ ಕೇಳುತ್ತಿದ್ದರು. ದೇಹಕ್ಕೆ ಪೋಷಕಾಂಶ ಕಡಿಮೆಯಾಗಬಾರದು ಎಂದು ಕಡಲೇಕಾಳು ತಿನ್ನುವುದನ್ನು ಕಷ್ಟಕಾಲದಲ್ಲಿ ರೂಢಿ ಮಾಡಿಕೊಂಡಿದ್ದರು.

ಮೊದಲ ಸಿನಿಮಾ ಸಂಭಾವನೆ ₹51: 1960ರಲ್ಲಿ ಅರ್ಜುನ್ ಹಿಂಗೋರಾನಿ ನಿರ್ದೇಶನದ 'ದಿಲ್ ಭಿ ತೇರಾ ಹಮ್ ಭಿ ತೇರೆ' ಚಿತ್ರದಲ್ಲಿ ನಟಿಸುವಂತೆ ಮೂವರು ನಿರ್ಮಾಪಕರು ಮೊದಲಿಗೆ ಧರ್ಮೇಂದ್ರ ಅವರೊಟ್ಟಿಗೆ ಕರಾರು ಮಾಡಿಕೊಂಡರು. ಬಲರಾಜ್ ಸಾಹ್ನಿ, ಕುಂಕುಮ್, ಉಷಾ ಕಿರಣ್ ಅವರೊಟ್ಟಿಗೆ ತೆರೆ ಹಂಚಿಕೊಳ್ಳುವ ಅವಕಾಶ ಸಿಕ್ಕಿತು. ಮೂವರೂ ನಿರ್ಮಾಪಕರೂ ಸೇರಿ ಆಗ ನೀಡಿದ ಸಂಭಾವನೆ ಕೇವಲ ₹51. ಡ್ರಿಲ್ಲಿಂಗ್ ಮಾಡುವ ಕೆಲಸಕ್ಕೆ ಸಿಕ್ಕ ಸಂಬಳವೇ ಅದಕ್ಕಿಂತ ಹೆಚ್ಚಾಗಿತ್ತು.

ಆನಂತರ ಅವಕಾಶಗಳ ದಿಡ್ಡಿ ಬಾಗಿಲು ತೆರೆದುಕೊಂಡಿತು. 'ಅನ್‌ಪಢ್', 'ಬಂದಿನಿ', 'ಅನುಪಮಾ', 'ಆಯಾ ಸಾವನ್ ಝೂಮ್ ಕೆ' ಹಿಂದಿ ಸಿನಿಮಾಗಳಲ್ಲಿ ಅಭಿನಯದ ಸಾಣೆಗೆ ಒಡ್ಡಿಕೊಂಡರು. 1966ರಲ್ಲಿ 'ಫೂಲ್ ಔರ್ ಪತ್ಥರ್' ಚಿತ್ರದಲ್ಲಿ ಧರ್ಮೇಂದ್ರ ಅಂಗಿ ಕಳಚಿದ ಅವತಾರದಲ್ಲಿ ತೆರೆಮೇಲೆ ಕಾಣಿಸಿಕೊಂಡರು. 'ಗ್ರೀಕ್ ಗಾಡ್', 'ಗರಮ್ ಧರಮ್' ಎಂದೆಲ್ಲ ಬಿರುದಾವಳಿಗಳು ಸಂದವು.

1960 ಹಾಗೂ 70ರ ದಶಕದಲ್ಲಿ ಧರ್ಮೇಂದ್ರ ತಮ್ಮ ದೇಹಾಕಾರವೇ ಬಂಡವಾಳ ಎನ್ನುವುದನ್ನು ಅರಿತರು. 'ಹೀ ಮ್ಯಾನ್' ಎನ್ನುವ ಇಂಗ್ಲಿಷ್ ಪದದಿಂದ ಅನೇಕರು ಹೊಗಳಿದ್ದನ್ನೇ ಕಣ್ಣಿಗೊತ್ತಿಕೊಂಡರು. ಸಾಹಸ ಪ್ರಧಾನ ಸಿನಿಮಾಗಳಲ್ಲಿ ಭವಿಷ್ಯ ಹುಡುಕಿದರು. ಅವುಗಳಲ್ಲಿ ಚಪ್ಪಾಳೆ ಗಿಟ್ಟಿಸಿಕೊಳ್ಳುವಂಥ ಸಂಭಾಷಣೆ ಇರಬೇಕು ಎನ್ನುವ ಕಡೆ ನಿಗಾ ವಹಿಸಿದರು. ಜನಪ್ರಿಯ ಚಿತ್ರಗಳಿಗೆ ಸೂತ್ರಬದ್ಧವಾದ ಮೆಲೋಡ್ರಾಮಾ ಇರುತ್ತದಲ್ಲ; ಅದನ್ನೂ ಅಳವಡಿಸಿಕೊಂಡರು.

'ಗ್ರೀಕ್ ಗಾಡ್ ಎಂದರೇನು ಎಂದೇ ನನಗೆ ಆಗ ಗೊತ್ತಿರಲಿಲ್ಲ. ನನ್ನ ಅಂಗಸೌಷ್ಟವ ನೋಡಿ ಪ್ರೇಕ್ಷಕರು ಹಾಗೆ ಹೇಳಿದ್ದರು' ಎಂದೊಮ್ಮೆ ಧರ್ಮೇಂದ್ರ ಪ್ರತಿಕ್ರಿಯಿಸಿದ್ದರು. ಹೃತಿಕ್ ರೋಷನ್ ಸ್ಟಾರ್ ಆದಮೇಲೆ ಅವರಿಗೆ 'ಗ್ರೀಕ್ ಗಾಡ್' ಎಂಬ ಬಿರುದನ್ನು ಅಭಿಮಾನಿಗಳು ಮತ್ತೆ ನೀಡಿದರು.

'ಗರಮ್ ಧರಮ್' ಢಾಬಾ: 'ಗರಮ್ ಧರಮ್' ಎಂಬ ಗುಣವಿಶೇಷಣವನ್ನೇ ಅವರು ಬ್ರ್ಯಾಂಡ್ ಆಗಿಸಿಕೊಂಡು, ಆ ಹೆಸರಿನ ಢಾಬಾಗಳನ್ನು ಶುರುಮಾಡಿದರು. ಮುಂಬೈನಲ್ಲಿ ಬದುಕಲು 'ಸೈಕಲ್ ಹೊಡೆಯುತ್ತಿದ್ದ' ಸ್ಫುರದ್ರೂಪಿ ವ್ಯಕ್ತಿಗೆ ಬೆಳ್ಳಿತೆರೆ ತಂದುಕೊಟ್ಟಿದ್ದ ಆತ್ಮವಿಶ್ವಾಸ ಅಂಥದ್ದಾಗಿತ್ತು.

ಧರ್ಮೇಂದ್ರ ತೆರೆಮೇಲೆ ಬ್ಯಾಂಕ್ ಮ್ಯಾನೇಜರ್ ಆದರು. ಸೆಡವು ತೋರುವ ತರುಣನಾದರು. ಕವನ ಬರೆಯುವ ಸೂಕ್ಷ್ಮಮತಿಯಾದರು. 'ಶೋಲೆ' ಚಿತ್ರದಲ್ಲಿ ನೀರಿನ ಟ್ಯಾಂಕ್ ಏರಿ ಪ್ರೇಮ ನಿವೇದನೆ ಮಾಡುವ ಹದಿನಾರಾಣೆ ಪ್ರಿಯಕರನಾದರು. ಮೈತೋರಿದರು. ಹೊಡೆದಾಡಿದರು. ಕಚಗುಳಿ ಇಟ್ಟರು. ಹೇಮಾ ಮಾಲಿನಿ ಅಭಿನಯದ 'ಸೀತಾ ಔರ್ ಗೀತಾ', 'ಡ್ರೀಮ್ ಗರ್ಲ್' ಸಿನಿಮಾಗಳಲ್ಲಿ ನಾಯಕಿಗೇ ಪ್ರಾಧಾನ್ಯ ನೀಡಲೂ ತಾವು ಸಿದ್ಧರೆನ್ನುವುದನ್ನು ತೋರಿದರು. ಸಂಜೀವ್ ಕುಮಾರ್, ಅಮಿತಾಭ್ ಬಚ್ಚನ್ ಅವರಂಥ ದಿಗ್ಗಜರ ಜೊತೆಗೆ ತಾವೂ ಅಭಿನಯದ ನಿಕಷಕ್ಕೆ ಒಡ್ಡಿಕೊಂಡರು. 'ಗಂಧದ ಗುಡಿ', 'ತಾಯಿಗೆ ತಕ್ಕ ಮಗ', 'ಹುಲಿ ಹೆಬ್ಬುಲಿ' ಕನ್ನಡ ಚಿತ್ರಗಳ ರೀಮೇಕ್‌ಗಳಲ್ಲಿ ಕೂಡ ನಟಿಸಿದರು.

ಹೇಮಾ ಪರಿಣಯ: ಹೇಮಾಮಾಲಿನಿ ಜೊತೆ ಸರಣಿ ಸಿನಿಮಾಗಳಲ್ಲಿ ಅಭಿನಯಿಸುವ ಹೊತ್ತಿಗೆ ಇಬ್ಬರ ನಡುವೆ ಪ್ರೇಮಾಂಕುರವಾಗಿರುವ ಸುದ್ದಿಗೆ ರೆಕ್ಕೆಪುಕ್ಕ ಮೂಡಿತ್ತು. ಚಿತ್ರರಂಗಕ್ಕೆ ಕಾಲಿಡುವ ಮೊದಲೇ ಪ್ರಕಾಶ್ ಕೌರ್ ಎಂಬವರನ್ನು ಧರ್ಮೇಂದ್ರ ಮದುವೆಯಾಗಿದ್ದರು. ಅದಾಗಲೇ ಸನ್ನಿ ಡಿಯೋಲ್, ಬಾಬಿ ಡಿಯೋಲ್ ಮಕ್ಕಳು ಹುಟ್ಟಿದ್ದರು. ಅಜೀತಾ, ವಿಜೇತಾ ಎಂಬ ಇನ್ನೂ ಇಬ್ಬರು ಹೆಣ್ಣುಮಕ್ಕಳ ತಂದೆಯೂ ಆಗಿದ್ದರು. ಮುಂದೆ ಹೇಮಾಮಾಲಿನಿ ಅವರನ್ನೂ ಮದುವೆಯಾದರು. ಹೇಮಾ ಅವರಿಗೆ ಇಶಾ ಡಿಯೋಲ್, ಅಹಾನಾ ಡಿಯೋಲ್ ಎಂಬಿಬ್ಬರು ಹೆಣ್ಣುಮಕ್ಕಳು ಹುಟ್ಟಿದರು.

1983ರಲ್ಲಿ ವಿಜಯತಾ ಫಿಲ್ಮ್ಸ್ ಎಂಬ ನಿರ್ಮಾಣ ಸಂಸ್ಥೆ ಸ್ಥಾಪಿಸಿದ ಈ 'ಹೀ ಮ್ಯಾನ್', ಮಗ ಸನ್ನಿ ಡಿಯೋಲ್ ಅವರನ್ನೇ ನಾಯಕನನ್ನಾಗಿಸಿ 'ಬೇತಾಬ್' ಚಿತ್ರ ನಿರ್ಮಿಸಿದರು. ಬಾಬಿ ಡಿಯೋಲ್ ನಾಯಕರಾಗಿದ್ದ 'ಬರ್‌ಸಾತ್' ಚಿತ್ರ ನಿರ್ಮಿಸಿದ್ದೂ ಇದೇ ಸಂಸ್ಥೆ.

ಬಿಜೆಪಿಯಿಂದ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು, 2004ರಿಂದ 2009ರ ಅವಧಿಗೆ ಬೀಕಾನೇರ್ ಕ್ಷೇತ್ರದ ಸಂಸದರಾಗಿಯೂ ಆಯ್ಕೆಯಾಗಿದ್ದರು. 'ರಾಜಕೀಯ ನನ್ನ ಉಸಿರುಗಟ್ಟಿಸಿತ್ತು' ಎಂದು ಹೇಳಿ ಆನಂತರ ಆ ಕ್ಷೇತ್ರದಿಂದ ದೂರವೇ ಉಳಿದರು.

'ಮೇರಾ ಗಾಂವ್ ಮೇರಾ ದೇಶ್', 'ಯಾದೋಂಕಿ ಬಾರಾತ್', 'ಚುಪ್ಕೆ ಚುಪ್ಕೆ', 'ಶೋಲೆ' ಸಿನಿಮಾಗಳ ಪಾತ್ರಗಳ ಮೂಲಕ ಇಂದಿಗೂ ಧರ್ಮೇಂದ್ರ ಕಾಡುತ್ತಾರೆ; 'ಹುಕೂಮತ್' ರೀತಿಯ ಹೊಡಿ–ಬಡಿ ಪಾತ್ರಗಳಿಂದ ಅಲ್ಲ.



ಅಮಿತಾಭ್ ಆಲಿಂಗನ

ಜನಪ್ರಿಯತೆಯ ಚೌಕಟ್ಟು ಮೀರಿದ್ದು...

ಅಭಿನಯದ ತರಬೇತಿಗೆ ಒಳಪಡದ ಧರ್ಮೇಂದ್ರ, ಕಥನದ ಸಂದರ್ಭಕ್ಕೆ ಆ ಕ್ಷಣದಲ್ಲಿ ಪ್ರತಿಕ್ರಿಯಿಸುವುದೇ ನಟನೆ ಎಂದು ನಂಬಿದ್ದರು. 'ಮಾ, ಮುಝೆ ನೌಕರಿ ಮಿಲ್ ಗಯೀ' (ಅಮ್ಮಾ... ನನಗೆ ಕೆಲಸ ಸಿಕ್ಕಿತು) ಎನ್ನುವ ಸಂಭಾಷಣೆಯನ್ನೂ ರಾಗವಾಗಿ ದಾಟಿಸಿದ್ದ ನಟ ಅವರು. ಹೃಷಿಕೇಶ್ ಮುಖರ್ಜಿ ಅವರಂತಹ ನವಿರು ಹಾಸ್ಯದ ಕಥಾನಕಗಳನ್ನು ಕೊಟ್ಟ ನಿರ್ದೇಶಕರ ಗರಡಿಯಲ್ಲಿ 'ಗುಡ್ಡಿ', 'ಚುಪ್ಕೆ ಚುಪ್ಕೆ' ರೀತಿಯ ಸಿನಿಮಾಗಳಲ್ಲೂ ಅಭಿನಯಿಸಿ, ಎಂದಿನ ಜನಪ್ರಿಯತೆಯ ಚೌಕಟ್ಟಿನಿಂದ ತುಸು ಹೊರಬಂದರು. 'ಬ್ಲ್ಯಾಕ್‌ಮೇಲ್' ಹಿಂದಿ ಸಿನಿಮಾದ 'ಪಲ್ ಪಲ್ ದಿಲ್ ಕೆ ಪಾಸ್' ಎಂಬ ಕಿಶೋರ್‌ಕುಮಾರ್ ಕಂಠದ ಸುಶ್ರಾವ್ಯ ಹಾಡಿಗೆ ಅವರ ತುಟಿಚಲನೆ ನೋಡಿದಾಗ, ಧರ್ಮೇಂದ್ರ ಅವರಿಗೆ ಇಂತಹ ಸಾಮರ್ಥ್ಯವೂ ಇತ್ತೇ ಎಂಬ ಉದ್ಗಾರ ಹೊರಡುತ್ತದೆ. 'ಬಸಂತಿ... ಇನ್ ಕುತ್ತೋಂ ಕೆ ಸಾಮ್ನೆ ಮತ್ ನಾಚ್ನಾ' ಎಂಬ ಸಂಭಾಷಣೆ ಚಿರಸ್ಥಾಯಿಯಾಗಿದೆ.

ಬಸು ಚಟರ್ಜಿ ನಿರ್ದೇಶನದ 'ದಿಲ್ಲಗಿ' ಸಿನಿಮಾದಲ್ಲಿ ಮೆಲುದನಿಯಲ್ಲಿ ಮಾತನಾಡಿ ಅಧ್ಯಾಪಕನಾಗಿ ಕಾಣಿಸಿಕೊಂಡಿದ್ದ ಅವರು, ತಮ್ಮೊಳಗಿನ ತುಂಟತನ ಹಾಗೂ ಹಾಸ್ಯದ ಟೈಮಿಂಗ್ ಅನ್ನು ತೆರೆಮೇಲೆ ಕಾಣಿಸಿದ್ದರು.

ಪೂರ್ಣವಿರಾಮವಿಲ್ಲದ ವೃತ್ತಿಬದುಕು

250ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದರೂ ಧರ್ಮೇಂದ್ರ ಅವರು ಎಂದಿಗೂ ಅಭಿನಯಕ್ಕೆ ಪೂರ್ಣವಿರಾಮ ಹಾಕಲಿಲ್ಲ. ₹100 ಕೋಟಿಯಷ್ಟು ಬೆಲೆ ಬಾಳುವ ಫಾರ್ಮ್‌ಹೌಸ್‌ನಲ್ಲಿ ತಾವು ಮಾಡುತ್ತಿದ್ದ ಕೃಷಿ ಚಟುವಟಿಕೆಯ ವಿಡಿಯೊಗಳನ್ನೂ ಅವರು ಚಿತ್ರೀಕರಿಸಿ, ಸಾಮಾಜಿಕ ಮಾಧ್ಯಮದಲ್ಲೂ ಸಕ್ರಿಯರಾಗಿದ್ದರು. 2007ರಲ್ಲಿ 'ಜಾನಿ ಗದ್ದಾರ್' ಚಿತ್ರದಲ್ಲಿ ನಟಿಸಿದ್ದ ಅವರು, ಎರಡು ವರ್ಷಗಳ ಹಿಂದೆ ತೆರೆಕಂಡ 'ರಾಕಿ ಔರ್ ರಾಣಿ ಕೀ ಪ್ರೇಮ್ ಕಹಾನಿ'ಯಲ್ಲೂ ತೆರೆಮೇಲೆ ಕಾಣಿಸಿಕೊಂಡಿದ್ದರು. 'ಇಕ್ಕೀಸ್' ಅವರ ಅಭಿನಯದ ಕೊನೆಯ ಸಿನಿಮಾ. ಅದು ಇದೇ ಡಿಸೆಂಬರ್‌ನಲ್ಲಿ ತೆರೆಕಾಣಲಿದೆ.



ಕಪ್ಪು–ಬಿಳುಪು ಕಾಲದ 'ಹೀ ಮ್ಯಾನ್'



ಹೇಮಾ, ಧರ್ಮೇಂದ್ರ... ಜನಪ್ರಿಯ ಜೋಡಿ



ಕಟ್ಟುಮಸ್ತು ಮೈಕಟ್ಟು

ಹಿರಿಯ ನಟ ಮತ್ತು ಲೋಕಸಭೆಯ ಮಾಜಿ ಸದಸ್ಯ ಧರ್ಮೇಂದ್ರ ಅವರ ನಿಧನವು ಭಾರತೀಯ ಸಿನಿಮಾಗೆ ದೊಡ್ಡ ನಷ್ಟ. ಜನಪ್ರಿಯ ನಟರಲ್ಲಿ ಒಬ್ಬರಾಗಿದ್ದ ಅವರು ದಶಕಗಳಷ್ಟು ಸುದೀರ್ಘವಾದ ನಟನಾ ವೃತ್ತಿಯಲ್ಲಿ ನೆನಪಿನಲ್ಲಿ ಉಳಿಯುವಂತಹ ಹಲವಾರು ಪಾತ್ರಗಳನ್ನು ನಿರ್ವಹಿಸಿದ್ದಾರೆ. ಭಾರತೀಯ ಚಿತ್ರರಂಗದ ಅತ್ಯುನ್ನತ ವ್ಯಕ್ತಿಯಾಗಿ ಅವರು ಬಿಟ್ಟುಹೋಗಿರುವ ಪರಂಪರೆಯು ಯುವಪೀಳಿಗೆಯ ಕಲಾವಿದರಿಗೆ ಸ್ಫೂರ್ತಿಯಾಗಲಿದೆ

ದ್ರೌಪದಿ ಮುರ್ಮು, ರಾಷ್ಟ್ರಪತಿ ('ಎಕ್ಸ್'ನಲ್ಲಿ)

ಧರ್ಮೇಂದ್ರ ಜೀವನದ ಹಾದಿ

1935 ಡಿ.8: ಪಂಜಾಬ್‌ನ ಲೂಧಿಯಾನಾ ಜಿಲ್ಲೆಯ ನಸ್ರಾಲಿ ಎಂಬ ಹಳ್ಳಿಯ ಜಾಟ್ ಸಿಖ್ ಕುಟುಂಬದಲ್ಲಿ ಜನನ; ತಂದೆ ಕೇವಲ್ ಕೃಷನ್ ಡಿಯೋಲ್, ಶಾಲಾ ಶಿಕ್ಷಕರು; ತಾಯಿ ಸತ್ವಂತ್ ಕೌರ್

ತಂದೆ ಶಿಕ್ಷಕರಾಗಿದ್ದ ಲೂಧಿಯಾನದ ಸಹ್ನೇವಾಲ್ ಗ್ರಾಮದಲ್ಲಿ ಬಾಲ್ಯಜೀವನ; ಲಾಲ್‌ಟನ್ ಕಲಾಲ್‌ನಲ್ಲಿರುವ ಸರ್ಕಾರಿ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ; 1952ರಲ್ಲಿ ಮೆಟ್ರಿಕ್ಯುಲೇಷನ್

1954: 19ನೇ ವಯಸ್ಸಿನಲ್ಲಿ ಮೊದಲ ಮದುವೆ; ಪತ್ನಿ ಪ್ರಕಾಶ್ ಕೌರ್

1960: 'ದಿಲ್ ಭಿ ತೇರಾ ಹಮ್ ಭಿ ತೇರೆ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶ

1961: 'ಶೋಲಾ ಔರ್ ಶಬ್ನಮ್' ಚಿತ್ರದ ಮೂಲಕ ಮೊದಲ ಯಶಸ್ಸಿನ ರುಚಿ

1964: 'ಹಕೀಕತ್' ಚಿತ್ರದಲ್ಲಿ ನಟನೆ; ಚಿತ್ರಕ್ಕೆ ವ್ಯಾಪಕ ಮೆಚ್ಚುಗೆ

1966: 'ಫೂಲ್ ಔರ್ ಪತ್ಥರ್' ಚಿತ್ರದಲ್ಲಿ ನಟನೆ; ಚಿತ್ರದ ಯಶಸ್ಸಿನಿಂದ ವೃತ್ತಿಜೀವನದಲ್ಲಿ ತಿರುವು

1969: ಸಾಮಾಜಿಕ ಕಥಾಹಂದರದ 'ಸತ್ಯಕಾಮ್' ಚಿತ್ರದಲ್ಲಿ ಅತ್ಯುತ್ತಮ ಅಭಿನಯ; ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿಯ ಗರಿ

1971: 'ಮೇರಾ ಗಾಂವ್, ಮೇರಾ ದೇಶ್' ಚಿತ್ರದ ಮೂಲಕ ಆ್ಯಕ್ಷನ್ ಹೀರೊ ಆಗಿ ಸ್ಥಾನ ಭದ್ರ

1975: 'ಶೋಲೆ' ಚಿತ್ರದಲ್ಲಿ ನಟನೆ; ಅದುವರೆಗಿನ ಅತಿ ಹೆಚ್ಚು ಗಳಿಕೆಯ ಚಿತ್ರವಾಗಿ ದಾಖಲೆ ಸೃಷ್ಟಿ; ಚಿತ್ರಮಂದಿರದಲ್ಲಿ ಸತತ ಐದು ವರ್ಷ ಪ್ರದರ್ಶನ ಕಂಡ ಚಿತ್ರ. ಅದೇ ವರ್ಷ 'ಚುಪ್ಕೆ ಚುಪ್ಕೆ' ಹಾಸ್ಯ ಚಿತ್ರದಲ್ಲಿ ನಟನೆ

1977: 'ಧರ್ಮ ವೀರ್' ಚಿತ್ರದಲ್ಲಿ ನಟನೆ; ಬ್ಲಾಕ್‌ಬಸ್ಟರ್ ಆದ ಸಿನಿಮಾ

1980: ಎರಡನೇ ವಿವಾಹ; ನಟಿ ಹೇಮಾಮಾಲಿನಿ ಅವರೊಂದಿಗೆ ಮದುವೆ

1983: 'ಬೇತಾಬ್' ಚಿತ್ರ ನಿರ್ಮಾಣ; ಹಿರಿಯ ಮಗ ಸನ್ನಿ ಡಿಯೋಲ್ ಚಿತ್ರರಂಗ ಪ್ರವೇಶ

1990: ಪುತ್ರ ಸನ್ನಿ ಡಿಯೋಲ್ ನಟನೆಯ 'ಘಾಯಲ್' ಚಿತ್ರ ನಿರ್ಮಾಣ; ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿಯ ಗೌರವ

1997: ಫಿಲ್ಮ್‌ಫೇರ್ ಜೀವಮಾನ ಸಾಧಕ ಪ್ರಶಸ್ತಿಯ ಮನ್ನಣೆ

2004: ರಾಜಕೀಯ ಪ್ರವೇಶ; ರಾಜಸ್ಥಾನದ ಬೀಕಾನೇರ್ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಗೆಲುವು

2007: 'ಲೈಫ್ ಇನ್ ಎ... ಮೆಟ್ರೊ', 'ಅಪ್ನೆ' ಚಿತ್ರಗಳ ಮೂಲಕ ನಟನೆಗೆ ವಾಪಸ್

2011: ಮಕ್ಕಳೊಂದಿಗೆ 'ಯಮ್ಲಾ ಪಗ್ಲಾ ದೀವಾನಾ' ಚಿತ್ರದಲ್ಲಿ ನಟನೆ

2012: ಪದ್ಮಭೂಷಣ ಮನ್ನಣೆ

2023: ಕರಣ್ ಜೋಹರ್ ನಿರ್ದೇಶನದ 'ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ' ಚಿತ್ರದಲ್ಲಿ ಪೋಷಕ ಪಾತ್ರ

2024: 'ತೇರಿ ಬಾತೋಮೆ ಐಸಾ ಉಲ್ಝಾ ಜಿಯಾ' ಚಿತ್ರದಲ್ಲಿ ನಟನೆ; ಅವರು ಜೀವಂತ ಇರುವಾಗ ಬಿಡುಗಡೆಯಾದ ಅವರ ನಟನೆಯ ಕೊನೆಯ ಚಿತ್ರ

2025 ನ.24: 89ನೇ ವಯಸ್ಸಿನಲ್ಲಿ ಮುಂಬೈನಲ್ಲಿ ನಿಧನ

ಧರ್ಮೇಂದ್ರ ಅವರ ನಿಧನದೊಂದಿಗೆ ಭಾರತೀಯ ಸಿನಿಮಾದ ಒಂದು ಯುಗ ಕೊನೆಗೊಂಡಿದೆ. ಅವರು ಸಿನಿಮಾ ಕ್ಷೇತ್ರದ ಅಪ್ರತಿಮ ವ್ಯಕ್ತಿಯಾಗಿದ್ದರು. ತಾವು ನಿರ್ವಹಿಸಿದ ಪ್ರತಿಯೊಂದು ಪಾತ್ರಕ್ಕೂ ಹೊಸ ರೂಪ ಮತ್ತು ಜೀವ ತುಂಬಿದ ಶ್ರೇಷ್ಠ ನಟ. ಧರ್ಮೇಂದ್ರ ಅವರು ತಮ್ಮ ಸರಳತೆ, ವಿನಮ್ರತೆ ಮತ್ತು ಆತ್ಮೀಯತೆಯಿಂದ ಎಲ್ಲರ ಗೌರವಕ್ಕೂ ಪಾತ್ರರಾಗಿದ್ದರು

ನರೇಂದ್ರ ಮೋದಿ, ಪ್ರಧಾನಿ ('ಎಕ್ಸ್'ನಲ್ಲಿ)

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪಾಕಿಸ್ತಾನದ ವಿರುದ್ಧ ನಡೆಸಲಾದ 'ಆಪರೇಷನ್ ಸಿಂಧೂರ'ದಲ್ಲಿ ಭಾರತದ ಸೇನೆಗೆ ಆದ ನಷ್ಟದ ಬಗ್ಗೆ ಬಾಲಿವುಡ್ ನಟಿ ಐಶ್ವರ್ಯಾ ರೈ ಬಚ್ಚನ್ ಅವರು ಇತ್ತೀಚೆಗೆ ಪುಟ್ಟಪರ್ತಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸಿದ್ದಾರೆ ಎಂದು ಹೇಳಿಕೊಳ್ಳುತ್ತಾ, ಐಶ್ವರ್ಯಾ ರೈ ಅವರು ಮಾತನಾಡುತ್ತಿರುವ ವಿಡಿಯೊ ತುಣುಕೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. 'ಪಾಕಿಸ್ತಾನ ನಡೆಸಿದ ದಾಳಿಯಲ್ಲಿ ನಾವು ಆರು ವಿಮಾನಗಳನ್ನು ಏಕೆ ಕಳೆದುಕೊಂಡೆವು? ನಾಲ್ಕು ರಫೇಲ್‌ಗಳನ್ನು ಕಳೆದುಕೊಂಡಿದ್ದಾದರೂ ಏಕೆ? ಎರಡು ಎಸ್–400 ವ್ಯವಸ್ಥೆಗಳು, 300 ಸೈನಿಕರು ಮತ್ತು ಕಾಶ್ಮೀರ, ರಾಜಸ್ಥಾನದಲ್ಲಿ ನಮ್ಮ ಭೂಮಿ ಕಳೆದುಕೊಳ್ಳಲು ಕಾರಣವೇನು' ಎಂದು ಐಶ್ವರ್ಯಾ ರೈ ಪ್ರಶ್ನಿಸುತ್ತಿರುವುದು ವಿಡಿಯೊದಲ್ಲಿದೆ. ಇದು ಸುಳ್ಳು.

ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಡಿದಾಗ ಆ ವಿಡಿಯೊ ತುಣುಕು, ಪುಟ್ಟಪರ್ತಿಯಲ್ಲಿ ಇದೇ 19ರಂದು ನಡೆಸಿದ್ದ ಸತ್ಯ ಸಾಯಿ ಬಾಬಾ ಅವರ ಶತಮಾನೋತ್ಸವ ಸಮಾರಂಭದಲ್ಲಿ ಐಶ್ವರ್ಯಾ ರೈ ಅವರ ಭಾಷಣಕ್ಕೆ ಸಂಬಂಧಿಸಿದ್ದು ಎಂಬುದು ಖಚಿತವಾಯಿತು. ಆ ಸಮಾರಂಭದ ಪೂರ್ಣ ವಿಡಿಯೊ ಸಾಯಿಬಾಬಾ ಅವರ ಸಂಸ್ಥೆಗೆ ಸಂಬಂಧಿಸಿದ ಯೂಟ್ಯೂಬ್ ಚಾನೆಲ್‌ನಲ್ಲಿ ನೇರಪ್ರಸಾರವಾಗಿತ್ತು. ಪ್ರಧಾನಿ ಮೋದಿ ಸೇರಿದಂತೆ ಹಲವು ಗಣ್ಯರು ಅದರಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಐಶ್ವರ್ಯಾ ರೈ ಅವರು ಮಾಡಿದ ಭಾಷಣವನ್ನು ಕೇಳಿದಾಗ, ಅವರೆಲ್ಲೂ ಆಪರೇಷನ್ ಸಿಂಧೂರ ವಿಚಾರದಲ್ಲಿ ಮೋದಿ ಅವರನ್ನು ಪ್ರಶ್ನಿಸಿದ್ದು ಕಂಡುಬರಲಿಲ್ಲ. ಅನುಮಾನ ಬಂದು ವಿಡಿಯೊ ತುಣುಕಿನಲ್ಲಿನ ಧ್ವನಿಯನ್ನು ರಿಸೆಂಬಲ್ ಎಐ ಎಂಬ ಎಐ ಪತ್ತೆ ಟೂಲ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ, ಅದು ತಿರುಚಿದ ಧ್ವನಿ ಎಂಬುದು ದೃಢಪಟ್ಟಿತು. ಡೀಪ್‌ಫೇಕ್ ತಂತ್ರಜ್ಞಾನದ ಮೂಲಕ ಐಶ್ವರ್ಯಾ ರೈ ಅವರ ಭಾಷಣವನ್ನು ತಿರುಚಿ ತಪ್ಪಾದ ವಿಡಿಯೊ ಹಂಚಿಕೊಳ್ಳಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಪ್ರತಿಯೊಬ್ಬರಲ್ಲೂ ಸಾಮರ್ಥ್ಯವಿದೆ

ನುಡಿ ಬೆಳಗು



ದೀಪಾ ಹಿರೇಗುತ್ತಿ

ಕಾಡೊಂದರಲ್ಲಿ ಎಲ್ಲ ಪ್ರಾಣಿಗಳ ಜತೆ ಇಲಿಯೊಂದು ವಾಸಿಸುತ್ತಿತ್ತು. ಸ್ನೇಹಮಯಿಯಾಗಿದ್ದ ಹಾಗೂ ಚುರುಕಾಗಿದ್ದ ಇಲಿಯ ಸಮಸ್ಯೆ, ಅದರ ನಾಚಿಕೆಯ ಸ್ವಭಾವ. ಜಾಣ ಮೊಲ, ಇಂಪಾಗಿ ಹಾಡುವ ರಾಬಿನ್ ಹಕ್ಕಿ, ಬುದ್ಧಿವಂತ ಗೂಬೆ ಇವರೇ ಇಲಿಯ ಸ್ನೇಹಿತರಾಗಿದ್ದರು; ಮಾತಾಡುತ್ತಿದ್ದರು, ಒಟ್ಟಿಗೆ ತಿಂಡಿ ತಿನ್ನುತ್ತಿದ್ದರು. ಇಲಿಗೆ ಸ್ನೇಹಿತರನ್ನು ಭೇಟಿ ಮಾಡುವುದು, ಅವರ ಜತೆ ಸಮಯ ಕಳೆಯುವುದು ತುಂಬಾ ಇಷ್ಟ. ಆದರೆ ನಾಲ್ವರೂ ಒಟ್ಟಾಗಿ ಏನಾದರೂ ಸಾಹಸ ಮಾಡಹೊರಟರೆ ಇಲಿ ಹಿಂಜರಿಯುತ್ತಿತ್ತು. ತಾನು ಬಹಳ ಸಣ್ಣ ದೇಹ ಹೊಂದಿದ್ದೇನೆ, ತನ್ನಿಂದ ಏನು ಮಾಡಲು ಸಾಧ್ಯ ಎನ್ನುವುದು ಅದರ ಆಲೋಚನೆಯಾಗಿತ್ತು.

ಅವರ ಕಾಡಿನಲ್ಲಿ ಪ್ರತೀವರ್ಷ ಹಬ್ಬ ಜರುಗುತ್ತಿತ್ತು. ಆಟಗಳು, ಹಾಡು, ನೃತ್ಯ, ಪುಷ್ಕಳ ಭೋಜನ ಎಲ್ಲವೂ ಇರುತ್ತಿತ್ತು. ಕಾಡಿನ ಮಧ್ಯೆ ಇರುವ ಉದ್ದನೆಯ ಮರವೊಂದನ್ನು ಅಲಂಕರಿಸುವುದರಲ್ಲಿ ಎಲ್ಲರೂ ತೊಡಗಿದ್ದರು. ಆದರೆ ಒಂದು ಸಮಸ್ಯೆ ಇತ್ತು. ಆ ಉದ್ದನೆಯ ಮರದ ತುತ್ತತುದಿಯಲ್ಲಿ ಹೊಳೆವ ರಿಬ್ಬನ್ ಸಿಕ್ಕಿಹಾಕಿಕೊಂಡಿತ್ತು. ಅದನ್ನು ತೆಗೆಯಬೇಕಿತ್ತು. ಮೊಲಕ್ಕೆ ಅಷ್ಟು ಎತ್ತರ ಹೋಗಲಾಗದು, ರಾಬಿನ್ ಹಕ್ಕಿ ಅಷ್ಟು ಎತ್ತರ ಹಾರಿದರೂ ರಿಬ್ಬನ್ ತೆಗೆಯುವಾಗ ಗಾಳಿ ಬಂದರೆ ಕಷ್ಟ. ಎಲ್ಲ ಪ್ರಾಣಿಗಳೂ ಏನು ಮಾಡುವುದೆಂದು ಯೋಚನೆ ಮಾಡುವಾಗ ಮೊದಲ ಬಾರಿಗೆ ಇಲಿಗೆ ತಾನೂ ಏನಾದರೂ ಮಾಡಬೇಕು ಅನ್ನಿಸಿ ಹಿಂಜರಿಯುತ್ತಲೇ ಮುಂದೆ ಬಂದು 'ನಾನು ಹೋಗ್ತೀನಿ' ಅಂದಿತು. ಎಲ್ಲ ಪ್ರಾಣಿಗಳು ಆಶ್ಚರ್ಯದಿಂದ ನೋಡುತ್ತಿರುವಂತೆಯೇ ಅಳಿಲು ಹೇಳಿತು. 'ಹೇಯ್ ಮರದ ಕೊನೆಯ ಕೊಂಬೆ ಬಹಳ ತೆಳುವಾಗಿದೆ, ನೋಡು ವಿಚಾರ ಮಾಡು'. ಆದರೂ ಇಲಿ ತಲೆ ಅಲ್ಲಾಡಿಸಿ ಮರ ಹತ್ತಲು ಪ್ರಾರಂಭಿಸಿತು. ನಿಧಾನಕ್ಕೆ ಮೇಲೆ ಹತ್ತಿ, ಹಗೂರಕ್ಕೆ ರಿಬ್ಬನ್ ತೆಗೆದು ಅದನ್ನು ಜಾಗರೂಕತೆಯಿಂದ ಕೆಳಗೆ ತಂದಿತು. ಇಲಿ ಕೆಳಗೆ ಬಂದಾಗ ಎಲ್ಲ ಪ್ರಾಣಿಗಳೂ ಅದನ್ನು ಮುಕ್ತಕಂಠದಿಂದ ಹೊಗಳಿದವು. 'ಅರೇ ವಾ, ಏನಾದರೂ ಮಾಡೋಣ ಅಂದಾಗ ಹಿಂದೆ ಉಳಿಯುತ್ತಿದ್ದೆ, ಇವತ್ತು ದೊಡ್ಡ ಸಾಹಸ ಮಾಡಿಬಿಟ್ಟೆಯಲ್ಲ, ಸೂಪರ್' ಅಂದರು ಗೆಳೆಯರು.


ಬುದ್ಧಿವಂತ ಗೂಬೆ ಹೇಳಿತು: 'ನಿಜವಾದ ಶೌರ್ಯ ದೇಹದ ಗಾತ್ರದ ಮೇಲೆ ನಿರ್ಧಾರವಾಗುವುದಿಲ್ಲ. ನಮ್ಮನ್ನು ನಾವು ನಂಬುವುದರಿಂದ, ಭಯವಿದ್ದರೂ ಧೈರ್ಯ ತಂದುಕೊಂಡು ಮುನ್ನಡೆಯುವುದರಿಂದ ಅದ್ಭುತಗಳು ನಡೆಯುತ್ತವೆ. ಈಗ ತಾನೇ ನೀನು ಮಾಡಿದೆಯಲ್ಲ ಹಾಗೆ'.

ಅಂದಿನಿಂದ ಇಲಿ ತನ್ನ ಗಾತ್ರದ ಬಗ್ಗೆ ಕೀಳರಿಮೆ ವ್ಯಕ್ತಪಡಿಸಲಿಲ್ಲ. ಪ್ರತೀ ಜೀವಿಯಲ್ಲಿಯೂ ಒಂದಲ್ಲ ಒಂದು ವಿಶೇಷ ಇರುತ್ತದೆ ಎಂಬುದನ್ನು ಅದು ಈಗ ಅರ್ಥ ಮಾಡಿಕೊಂಡಿತ್ತು.

ನಮ್ಮ ಬದುಕಿನಲ್ಲೂ ನಮ್ಮಿಂದ ಇದು ಸಾಧ್ಯವಿಲ್ಲ ಅಂದುಕೊಂಡು ಪ್ರಯತ್ನಿಸುವುದಕ್ಕೆ ಮೊದಲೇ ಸೋಲನ್ನು ಒಪ್ಪಿಕೊಂಡಿರುತ್ತೇವೆ. ಬೇರೆಯವರು ಬುದ್ಧಿವಂತರು ಹಾಗಾಗಿ ಅವರಿಂದ ಸಾಧ್ಯವಾಯಿತು, ನಮ್ಮಿಂದ ಆಗದು ಎಂದು ನಂಬಿಕೊಂಡಿರುತ್ತೇವೆ. ಇತರರು ಹಿಂಜರಿಯದೇ ಪ್ರಯತ್ನಿಸಿದ್ದರಿಂದ, ಬಿದ್ದರೂ ಎದ್ದು ಮುನ್ನಡೆದಿದ್ದರಿಂದ ಸಾಧಿಸಿದರು ಅನ್ನುವುದನ್ನು ಮರೆತುಬಿಡುತ್ತೇವೆ. ಶೌರ್ಯ ಎಂದರೆ ನಮ್ಮಿಂದ ಅತ್ಯುತ್ತಮವಾದುದು ಏನು ಸಾಧ್ಯವೋ ಅದನ್ನು ಮಾಡುವುದು, ಸ್ವನಂಬಿಕೆಯಿಂದ ಮುಂದುವರಿಯುವುದು. ಕೀಳರಿಮೆಯನ್ನು ಬಿಟ್ಟು ಕೊಂಚ ಆತ್ಮವಿಶ್ವಾಸ, ಚಿಟಿಕೆ ಉತ್ಸಾಹ, ಸ್ವಲ್ಪ ಛಲದಿಂದ ಮುನ್ನಡೆದರೆ ಎಲ್ಲರಿಂದಲೂ ಸಾಧನೆ ಸಾಧ್ಯ.

ಪದಬಂಧ 6234

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಪ್ರಾಚೀನ ಕಾಲದ ವಿದ್ಯಾಭ್ಯಾಸ ಕೇಂದ್ರ (4)
3.ಒಪ್ಪವಾಗಿ ಬಂದಿರುವ ಪ್ರೀತಿ (4)
5.ಗಡಿಯಲ್ಲಿರುವ ವ್ಯಾಯಾಮ ಶಾಲೆ (3)
6.ಭ್ರಮೆಯನ್ನು ಹೀಗೂ ಹೇಳುವರು (4)
7.ಕನ್ನಡಿಗ ನೀಡಿದ ಇನ್‌ಕಮ್ ಟ್ಯಾಕ್ಸ್! (7)
10.ವೇದಾದಿಗಳನ್ನು ಅಧ್ಯಯನ ಮಾಡಿದವನು (4)
11.ಸರ ತರಲು ಹಚ್ಚಿದ ಪಾಳಿ! (3)
14.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
15.ಉಗುಳುವ ಪಾತ್ರೆ (4)

ಮೇಲಿಂದ ಕೆಳಕ್ಕೆ

1.ಅಗೆದು ಮಾಡಿದ ಗುಣಿ (2)
2.ವರ ಪಡೆದುಕೊಂಡಿರುವ ಮಗ (3)
4.ವಿಷ್ಣುವಿನ ವಾಹನ (3)
5.ಗಡಕ್ಕನೆ ಬಂದೆರಗಿದ ಗಂಡು ಬೆಕ್ಕು (3)
6.ಹಣ ನೀಡಿ ತಂದಿರುವ ಸೊಡರು (3)
8.ಮಾವನಿಗೆದುರು ಬಂದಿರುವ ಸ್ತ್ರೀ (3)
9.ಗೆಳೆಯನ ಜೊತೆಗಿರುವ ಸ್ನೇಹಿತೆ (3)
10.ಅಂಗ ಹೀನ ವ್ಯಕ್ತಿ (3)
12.ರಸ ಸ್ವಾದನೆಯನ್ನು ಬಲ್ಲವನು (3)
13.ವಿಜ್ಞಾನಿಯೊಡನೆ ತಿಳಿದವನು ಇದ್ದಾನೆ (2)

6233ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಡಿ 2.ಕನಸು 5.ಪರ 6.ಮಕರಂದ 8.ವಸತಿ 10.ನಾಟಕ 12.ಶಕಟ 13.ಕುಯುಕ್ತಿ 15.ಚಿಲುಕ 18.ದಿನಕರ 20.ಆಮೆ 21.ಹಾವಸೆ 22.ಜಾಣ

ಮೇಲಿಂದ ಕೆಳಕ್ಕೆ: 1.ಅನುಭವ 2.ಕರ 3.ಸುಮ 4.ಸಂದಣಿ 5.ಪದಾತಿ 7.ಕರಟ 9.ಸರಕು 10.ನಾಟ 11.ಕಡಲು 12.ಶಕ್ತಿ 14.ಯುವಕ 15.ಚಿಲುಮೆ 16.ಕಡಿವಾಣ 17.ಮಂದಿರ 19.ರಹಾ 20.ಆಸೆ

ಸುಡೊಕು 6618

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	3			6				2
6		2	4		9		1	
						6		9
3		7	2			4		
		8		4			3	7
4					3	2		8
		9	8					4
8					4		2	
		3		2		7		6

6617 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

25 ನವೆಂಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಪಂಚಮಿ ಗಂ. 22-58 ನಕ್ಷತ್ರ: ಉತ್ತರಾಷಾಢ ಗಂ. 23-58 ಯೋಗ: ಗಂಡ ಗಂ. 12-50 ಕರಣ: ಬವ ಗಂ 10-13 ವೃಶ್ಚಿಕ ಮಾಸದ 10 ನೇ ದಿನ. ಮಳೆ ನಕ್ಷತ್ರ : ಅನುರಾಧ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-38 ಸೂರ್ಯಾಸ್ತ : 05-57, ಮುಸ್ಲಿಂ ದಿನಾಂಕ : 3 ಜುಮಾದುಸ್ಸಾನಿ, ಅದೃಷ್ಟ ಸಂಖ್ಯೆ : 11, 2

ಮೇಷ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಬುದ್ಧಿವಂತಿಕೆಯ ನಡೆ-ನುಡಿಯಿಂದ ಎಲ್ಲ ಸಮಸ್ಯೆಗಳು ಹಿಮದಂತೆ ಕರಗಲಿವೆ.

ವೃಷಭ: ಸ್ವಯಂಕೃತ ಅಪರಾಧದ ಬಗ್ಗೆ ಎಚ್ಚರವಿರಲಿ. ಸರಿ ತಪ್ಪುಗಳ ನಿರ್ಣಯವು ಕಷ್ಟಕರ ಎನಿಸುವುದು. ಪರಿಶ್ರಮದಿಂದ ಬಹುದಿನಗಳ ಅಥವಾ ಹಿರಿಯರ ಕನಸು ನನಸಾಗಿಸುವಿರಿ. ಉತ್ತಮ ಸಂಗೀತ ಕೇಳಿ.

ಮಿಥುನ: ವರಿಷ್ಠ ಅಧಿಕಾರಿಗಳಿಗೆ ವಿಶೇಷ ಸ್ಥಾನಮಾನ, ಅಧಿಕಾರಗಳು ಪ್ರಾಪ್ತವಾಗಲಿವೆ. ಮಳೆಯ ಕಾರಣದಿಂದ ಮನೆಯ ದುರಸ್ತಿಯ ಕೆಲಸಗಳನ್ನು ಮಾಡಿಸುವ ಅನಿವಾರ್ಯ ಬರಲಿದೆ.

ಕರ್ಕಾಟಕ: ಸುತ್ತಮುತ್ತದ ವಾತಾವರಣವು ಶಾಂತಿ ಕೆಡಿಸುವ ಕೆಲಸವನ್ನು ಮಾಡುವುದು. ಅನಾರೋಗ್ಯದ ಸಮಯದಲ್ಲೂ ಲವಲವಿಕೆಯ ಓಡಾಟ ಇತರರ ಅಸೂಯೆಗೆ ಕಾರಣವಾಗುತ್ತದೆ.

ಸಿಂಹ: ಮಾತುಗಳಿಂದ ಬಹುಜನರಲ್ಲಿ ನಿಷ್ಠುರ ಮಾಡಿಕೊಂಡಿರುವ ವಿಶ್ವಾಸ ಪುನಃ ಸಂಪಾದಿಸಬೇಕಾಗುವುದು. ತಾಂತ್ರಿಕ ಕ್ಷೇತ್ರದಲ್ಲಿನ ಸಾಧನೆಗಾಗಿ ಕೆಲವರಿಗೆ ಪ್ರಶಸ್ತಿ ಲಭಿಸುವಂತೆ ಆಗುವುದು.

ಕನ್ಯಾ: ವಿದ್ಯಾರ್ಜನೆ ಎಂಬ ಹೆಸರಿನಲ್ಲಿ ಕುಟುಂಬಕ್ಕೆ ಹೊರೆಯಾಗುವ ರೀತಿಯಲ್ಲಿ ನಡೆದುಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಪರಾಮರ್ಶಿಸಿ. ಉತ್ಸಾಹದಿಂದ ಕೆಲಸ ಆರಂಭಿಸಿದರೆ ಸಮಸ್ಯೆಗಳು ಪರಿಹಾರಗೊಳ್ಳಲಿವೆ.

ತುಲಾ: ಕೆಲಸದ ಒತ್ತಡದಿಂದ ದೂರಾಗಿ ಮಿತ್ರರೊಡನೆ ಉಲ್ಲಾಸದಿಂದ ಕಾಲ ಕಳೆಯುವಿರಿ. ರಂಗಿನ ಲೋಕದ ಕನಸನ್ನು ನನಸು ಮಾಡಿಕೊಳ್ಳುವ ಭರದಲ್ಲಿ ಹಣವನ್ನು ಹಾಳು ಮಾಡಿಕೊಳ್ಳದಿರಿ. ತಂಗಿಯ ದುಃಖಕ್ಕೆ ಹೆಗಲಾಗಿ ನಿಲ್ಲುವಿರಿ.

ವೃಶ್ಚಿಕ: ಏನನ್ನಾದರೂ ಸಾಧಿಸಲೇಬೇಕು ಎಂಬ ಆಸೆ-ಆಕಾಂಕ್ಷೆಗೆ ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಅರಣ್ಯದಲ್ಲಿ ಕಾರ್ಯದ ನಿಮಿತ್ತ ಸಂಚರಿಸುವವರಿಗೆ ವಿಷಜಂತುಗಳ ಕಾಟ ಇರಬಹುದು.

ಧನು: ತಂತಿವಾದಕರ ಹೊಸ ರೀತಿಯ ಪ್ರಯೋಗವು ಸಂಗೀತ ರಸಿಕರ ಮನಸೂರೆಗೊಳಿಸುತ್ತದೆ. ಯೋಜನೆಗಳು ಕಾರ್ಯಗತಗೊಳ್ಳಲು ಪ್ರಯತ್ನ ನಡೆಸಬೇಕಾಗುವುದು. ಉದ್ರೇಕಕ್ಕೆ ಒಳಗಾಗದೆ ಕೆಲಸವನ್ನು ಮಾಡಿ.


ಮಕರ: ಸಂಜೆಯ ಸಮಯದಲ್ಲಿ ಆರಾಮವಾಗಿ ಪ್ರಕೃತಿಯ ಸೌಂದರ್ಯ ಅನುಭವಿಸುವಿರಿ. ಕರ್ತವ್ಯದ ಕೊರತೆಯು ಮೇಲಧಿಕಾರಿಗೆ ಎದ್ದು ಕಾಣಲಿದೆ. ಮಗನಿಗೆ ಉದ್ಯೋಗ ದೊರೆತು ಸಂತೋಷವಾಗುತ್ತದೆ.

ಕುಂಭ: ಅಪರೂಪದ ಅಳಿವಿನಂಚಿನಲ್ಲಿರುವ ಕಲಿತ ವಿದ್ಯೆಯ ಬಗ್ಗೆ ಸಂದರ್ಶನವನ್ನು ಕೊಡುವಂತೆ ಪತ್ರಿಕೆ ಅಥವಾ ದೂರದರ್ಶನ ಮಾಧ್ಯಮದವರು ನಿಮ್ಮಲ್ಲಿಗೆ ಬರುವರು. ಸಂಬಂಧಗಳು ಗಟ್ಟಿಗೊಳ್ಳಲಿವೆ.

ಮೀನ: ನ್ಯಾಯಾಲಯದಲ್ಲಿರುವ ಪ್ರಕರಣಗಳು ವಿರುದ್ಧವಾಗಿ ತಿರುಗುವಂತೆ ಷಡ್ಯಂತ್ರ ನಡೆಯಬಹುದು. ಜವಾಬ್ದಾರಿಯನ್ನು ಅಪ್ಪಿ ತಪ್ಪಿಯು ಬೇರೆಯವರಿಗೆ ಒಪ್ಪಿಸದಿರಿ. ಮಧುರ ಖಾದ್ಯಗಳ ಭೋಜನ ನಿಮ್ಮದಾಗುವುದು.

ಗುಂಡಣ್ಣ





ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 26,068
ಇಂದಿನ ಅಂತ್ಯ: 25,959
ದಿನದ ಕನಿಷ್ಠ: 25,912
108

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹675
12 ಕ್ಕೆ ₹96
ಮೈಸೂರು: 100 ಕ್ಕೆ ₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹181.50
ಆರ್‌ಎಸ್‌ಎಸ್-5 ₹176.50
ಗುಡ್ ಲಾಟ್ ₹164

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹505-795
ದ್ವಿತಳಿ (ಬಿ.ವಿ) ₹622-893

ಮುದ್ರೆಮನೆ ಕಾಫಿ (50 ಕೆಜಿಗೆ)
ಎಪಿ ₹28750
ಎಸಿ ₹15540
ಆರ್‌ಪಿ ₹18900
ಆರ್‌ಸಿ ₹10590

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1530 (1520)
ಸೋಯಾ (ರಿಫೈನ್ಡ್) ₹1265 (1275)
ಸೂರ್ಯಕಾಂತಿ (ರಿಫೈನ್ಡ್) ₹1470 (1475)
ಪಾಮೋಲಿನ್ ₹1245 (1250)

ಅಡಿಕೆ ಧಾರಣೆ

ಕುಮಟಾ		ಕೆಂಪುಗೋಟು	36316-40499		
ಚಿಪ್ಪು	24029-34999	ರಾಶಿ	48000-61770	ಚಾಲಿ	44599-49399
ಕೋಕ	12019-30099	ಸಿಪ್ಪೆಗೋಟು	14199-23089	ಕೆಂಪುಗೋಟು	32050-39189
ಫ್ಯಾಕ್ಟರಿ	7190-23629	**ಶಿವಮೊಗ್ಗ**		ರಾಶಿ	55909-60699
ಹೊಸಚಾಲಿ	34989-37115	ಬೆಟ್ಟೆ	58669-71300	**ಯಲ್ಲಾಪುರ**	
ಪುತ್ತೂರು		ಗೊರಬಲು	19000-42300	ಆಪಿ	64821-74095
ಕೋಕ	20000-34500	ಹೊಸತು	44500-59296	ಬಿಳಿಗೋಟು	15009-34869
ಹೊಸತು	26000-40000	ರಾಶಿ	44869-59296	ಚಾಲಿ	38059-49099
ಹಳತು	45000-54000	ಸರಕು	72655-91396	ಕೋಕ	10210-29710
ಸಾಗರ		**ಶಿರಸಿ**		ಕೆಂಪುಗೋಟು	22000-34699
ಬಿಳಿಗೋಟು	14599-34558	ಬೆಟ್ಟೆ	42550-52899	ರಾಶಿ	53795-64795
ಚಾಲಿ	22290-42719	ಬಿಳಿಗೋಟು	26611-39418	ತಟ್ಟಿಬೆಟ್ಟೆ	38809-48999
ಕೋಕ	15199-35999				

ಎಚ್‌ಎಎಲ್ ಷೇರಿನ ಮೌಲ್ಯ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಷೇರಿನ ಮೌಲ್ಯ ಸೋಮವಾರದ ವಹಿವಾಟಿನಲ್ಲಿ ಶೇ 3.35ರಷ್ಟು ಕುಸಿದಿದೆ. ಪ್ರತಿ ಷೇರಿನ ಮೌಲ್ಯ ₹4,440.90 ಆಗಿದೆ.

ಎಚ್‌ಎಎಲ್ ನಿರ್ಮಿಸಿದ ತೇಜಸ್ ಯುದ್ಧ ವಿಮಾನವು ಕಳೆದ ವಾರ ದುಬೈನಲ್ಲಿ ನಡೆದ ವೈಮಾನಿಕ ಪ್ರದರ್ಶನದಲ್ಲಿ ಅಪಘಾತಕ್ಕೆ ಒಳಗಾಯಿತು.

ಇದರಿಂದಾಗಿ ಸೋಮವಾರದ ವಹಿವಾಟಿನಲ್ಲಿ ಕಂಪನಿಯ ಷೇರಿನ ಮೌಲ್ಯ ಇಳಿದಿದೆ. ವಹಿವಾಟಿನ ನಡುವಿನಲ್ಲಿ ಶೇ 8.48ರವರೆಗೂ ಷೇರುಮೌಲ್ಯ ಕುಸಿದಿತ್ತು.

ಎಫ್‌ಟಿಎ ಮಾತುಕತೆ ಮತ್ತೆ ಶುರು

ಮುಕ್ತ ವ್ಯಾಪಾರ ಒಪ್ಪಂದದ ವಿಚಾರವಾಗಿ ಕೆನಡಾ ಜೊತೆ ಮತ್ತೆ ಮಾತುಕತೆ



ಒಪ್ಪಂದ ಸಾಧ್ಯವಾದರೆ, ಅದು ಎರಡೂ ದೇಶಗಳ ಹೂಡಿಕೆದಾರರಲ್ಲಿ ಹಾಗೂ ಉದ್ಯಮಿಗಳಲ್ಲಿ ವಿಶ್ವಾಸ ಮೂಡಿಸಲಿದೆ

ಪೀಯೂಷ್ ಗೋಯಲ್, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸಂಬಂಧಿಸಿದ ಮಾತುಕತೆಗಳನ್ನು ಮತ್ತೆ ಆರಂಭಿಸಲು ಭಾರತ ಮತ್ತು ಕೆನಡಾ ಒಪ್ಪಿವೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

'ಮಹತ್ವಾಕಾಂಕ್ಷೆಯ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ (ಸಿಇಪಿಎ) ಮಾತುಕತೆ ಆರಂಭಿಸಲು ನಾವು ಒಪ್ಪಿದ್ದೇವೆ. ಎರಡೂ ದೇಶಗಳ ನಡುವಿನ ವ್ಯಾಪಾರ ವಹಿವಾಟಿನ ಮೊತ್ತವನ್ನು 2030ರೊಳಗೆ ದುಪ್ಪಟ್ಟು-ಗೊಳಿಸಲು ಕೂಡ ಒಪ್ಪಿದ್ದೇವೆ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. ಭಾರತ ಮತ್ತು ಕೆನಡಾ ಸಹಜ ಪಾಲುದಾರರು, ಎರಡೂ ದೇಶಗಳು ಪರಸ್ಪರ ಸ್ಪರ್ಧಿಗಳಲ್ಲ ಎಂದಿದ್ದಾರೆ.

ಕೆನಡಾ ದೇಶವು ಭಾರತದ ಜೊತೆಗಿನ ಎಫ್‌ಟಿಎ ಮಾತುಕತೆಗೆ 2023ರಲ್ಲಿ ವಿರಾಮ ಘೋಷಿಸಿತ್ತು. ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದಲ್ಲಿ ಭಾರತದ ಪಾತ್ರ ಇರಬಹುದು ಎಂದು ಕೆನಡಾ ದೇಶದ ಹಿಂದಿನ ಪ್ರಧಾನಿ ಜಸ್ಟಿನ್ ಟ್ರುಡೊ ಅವರು 2023ರಲ್ಲಿ ಆರೋಪಿಸಿದ ನಂತರದಲ್ಲಿ ಎರಡೂ ದೇಶಗಳ ನಡುವಿನ ಸಂಬಂಧವು ಹಳಸಿತ್ತು. ಟ್ರುಡೊ ಆರೋಪವನ್ನು ಭಾರತವು ಅಲ್ಲಗಳೆದಿದೆ.

2023-24ಕ್ಕೆ ಹೋಲಿಸಿದರೆ 2024-25ರಲ್ಲಿ ಭಾರತದಿಂದ ಕೆನಡಾಕ್ಕೆ ಆಗುವ ರಫ್ತಿನ ಪ್ರಮಾಣವು ಶೇ 8ರಷ್ಟು ಹೆಚ್ಚಾಗಿದೆ. ಕೆನಡಾದಲ್ಲಿ ಭಾರತ ಮೂಲದ 29 ಲಕ್ಷ ಮಂದಿ ನೆಲಸಿದ್ದಾರೆ. ಅಲ್ಲದೆ, ಭಾರತದ 4.27 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರನ್ನು ಜೊಹಾನಸ್‌ಬರ್ಗ್‌ನಲ್ಲಿ ಜಿ20 ಶೃಂಗಸಭೆಯ ಸಂದರ್ಭದಲ್ಲಿ ಭೇಟಿ ಮಾಡಿದ ನಂತರ ಗೋಯಲ್ ಅವರು ಮಾತುಕತೆ ಪುನರಾರಂಭದ ವಿಷಯ ಪ್ರಕಟಿಸಿದ್ದಾರೆ.

2026ರ ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡುವಂತೆ ಮೋದಿ ಅವರು ನೀಡಿರುವ ಆಹ್ವಾನವನ್ನು ಕಾರ್ನಿ ಅವರು ಸ್ವೀಕರಿಸಿದ್ದಾರೆ ಎಂದು ಕೆನಡಾ ಪ್ರಧಾನಿಯ ಕಚೇರಿ ಭಾನುವಾರ ಹೊರಡಿಸಿರುವ ಪ್ರಕಟಣೆ ತಿಳಿಸಿದೆ. ಕಾರ್ನಿ ಅವರ ಭಾರತ ಭೇಟಿಯು ಎರಡೂ ದೇಶಗಳ ನಡುವೆ ಎಫ್‌ಟಿಎ ಮಾತುಕತೆಗೆ ಹೊಸ ಶಕ್ತಿ ನೀಡುವ ನಿರೀಕ್ಷೆ ಇದೆ.

ಸುದ್ದಿ 2 ನಿಮಿಷ

ಜಿಡಿಪಿ ಪ್ರಗತಿ ಶೇ 6.5: ಅಂದಾಜು

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.5ರಷ್ಟು ಮತ್ತು 2026-27ರಲ್ಲಿ ಶೇ 6.7ರಷ್ಟಾಗಬಹುದು ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ರೇಟಿಂಗ್ ಸಂಸ್ಥೆ ಅಂದಾಜಿಸಿದೆ.

ಜಿಎಸ್‌ಟಿ ದರ ಇಳಿಕೆಯು ಮಧ್ಯಮ ವರ್ಗದ ಜನರಲ್ಲಿ ಖರೀದಿ ಸಾಮರ್ಥ್ಯ ಹೆಚ್ಚಿಸಲಿದೆ. ಕೇಂದ್ರ ಸರ್ಕಾರವು ಆದಾಯ ತೆರಿಗೆ ವಿನಾಯಿತಿಯನ್ನು ಹೆಚ್ಚು ಮಾಡಿರುವುದು ಮತ್ತು ಆರ್‌ಬಿಐ ರೆಪೊ ದರ ಇಳಿಕೆ ಮಾಡಿರುವುದು ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿಸಲು ಉತ್ತೇಜನ ನೀಡಲಿವೆ. ಇವು ಜಿಡಿಪಿ ಹೆಚ್ಚಳಕ್ಕೆ ಕಾರಣವಾಗಲಿವೆ ಎಂದು ಸೋಮವಾರ ಹೇಳಿದೆ.

ಗ್ರಾಹಕರು ಸರಕುಗಳನ್ನು ಖರೀದಿಸುವ ಮಟ್ಟವು ಚೆನ್ನಾಗಿಯೇ ಇದೆ. ಇದರಿಂದ, ದೇಶದ ಬೆಳವಣಿಗೆ ಉತ್ತಮವಾಗಿದೆ ಎಂದು ತನ್ನ ಏಷ್ಯಾ-ಪೆಸಿಫಿಕ್ ಆರ್ಥಿಕ ಮುನ್ನೋಟದ ವರದಿಯಲ್ಲಿ ಹೇಳಿದೆ.

ಭಾರತ ಮತ್ತು ಅಮೆರಿಕದ ನಡುವೆ ವ್ಯಾಪಾರ ಒಪ್ಪಂದ ಸಾಧ್ಯವಾದರೆ ಅನಿಶ್ಚಿತತೆ ಕಡಿಮೆ ಆಗಲಿದೆ. ಇದು ಹೂಡಿಕೆದಾರರಲ್ಲಿ ಭರವಸೆ ಹೆಚ್ಚಿಸುವುದಲ್ಲದೆ, ಕಾರ್ಮಿಕ ಕೇಂದ್ರಿತ ವಲಯಗಳಿಗೆ ಉತ್ತೇಜನ ನೀಡಲಿದೆ ಎಂದು ತಿಳಿಸಿದೆ.



ಜೂನ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 7.8ರಷ್ಟು ದಾಖಲಾಗಿತ್ತು. ಇದು 15 ತಿಂಗಳ ಅಧಿಕವಾಗಿತ್ತು.

'ಫ್ಲೆಕ್ಸಿ ಕ್ಯಾಪ್ ಫಂಡ್‌ಗೆ ಆದ್ಯತೆ'

ಕೋಲ್ಕತ್ತ (ಪಿಟಿಐ): ಬಂಡವಾಳ ಮಾರುಕಟ್ಟೆಯಲ್ಲಿ ಏರಿಳಿತವಿದ್ದರೂ, ಫ್ಲೆಕ್ಸಿ ಕ್ಯಾಪ್ ಫಂಡ್‌ಗಳಿಗೆ ಹೂಡಿಕೆದಾರರು ಆದ್ಯತೆ ನೀಡುತ್ತಿದ್ದಾರೆ. ಕಳೆದ ವರ್ಷದ ಅಕ್ಟೋಬರ್‌ಗೆ ಹೋಲಿಸಿದರೆ ಈ ಅಕ್ಟೋಬರ್ ವೇಳೆಗೆ ಫ್ಲೆಕ್ಸಿ ಕ್ಯಾಪ್‌ಗಳಲ್ಲಿ ಹೂಡಿಕೆ ಆಗಿರುವ ಮೊತ್ತದ ಸರಾಸರಿ ಮೌಲ್ಯ (ಎಎಯುಎಂ) ಶೇ 21.3ರಷ್ಟು ಬೆಳವಣಿಗೆ ದಾಖಲಿಸಿದೆ ಎಂದು ಬಂಧನ್ ಲೈಫ್ ಇನ್ಶೂರೆನ್ಸ್ ಸೋಮವಾರ ತಿಳಿಸಿದೆ.

ಫ್ಲೆಕ್ಸಿ ಕ್ಯಾಪ್ ಫಂಡ್‌ಗಳು, ಲಾರ್ಜ್‌ಕ್ಯಾಪ್, ಮಿಡ್‌ಕ್ಯಾಪ್ ಮತ್ತು ಸ್ಮಾಲ್‌ಕ್ಯಾಪ್ ಷೇರುಗಳಲ್ಲಿ ಹಣ ಹೂಡಿಕೆ ಮಾಡುತ್ತವೆ. ಮಾರುಕಟ್ಟೆಯ ಏರಿಳಿತವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಇದು ಅವಕಾಶ ನೀಡುತ್ತದೆ ಎಂದು ತಿಳಿಸಿದೆ.

'ಫ್ಲೆಕ್ಸಿ ಕ್ಯಾಪ್ ಫಂಡ್‌ಗಳು ಫಂಡ್ ಮ್ಯಾನೇಜರ್‌ಗಳಿಗೆ, ಮಾರುಕಟ್ಟೆಯಲ್ಲಿ ಹೂಡಿಕೆಗೆ ಹೆಚ್ಚಿನ ಸ್ವಾತಂತ್ರ್ಯ ನೀಡುತ್ತವೆ. ಈ ಅನುಕೂಲವು ಮಾರುಕಟ್ಟೆಯ ಏರಿಕೆ ಮತ್ತು ಇಳಿಕೆಗೆ ತಕ್ಕಂತೆ ಫಂಡ್‌ಗಳನ್ನು ನಿರ್ವಹಣೆ ಮಾಡಲು ಸಹಾಯ ಮಾಡುತ್ತದೆ' ಎಂದು ಬಂಧನ್ ಲೈಫ್ ಇನ್ಶೂರೆನ್ಸ್‌ನ ಈಕ್ವಿಟಿ ವಿಭಾಗದ ಮುಖ್ಯಸ್ಥ ಅವಿನಾಶ್ ಅಗರ್‌ವಾಲ್ ಹೇಳಿದ್ದಾರೆ.

ಕೇಂದ್ರ ದೂರಸಂಪರ್ಕ ಇಲಾಖೆಯಿಂದ ಸ್ಪಷ್ಟನೆ

ಸಿಮ್ ದುರ್ಬಳಕೆ: ಮಾಲೀಕರೂ ಹೊಣೆ

ನವದೆಹಲಿ (ಪಿಟಿಐ): ಮೊಬೈಲ್ ಸಿಮ್ ಕಾರ್ಡ್‌ಗಳನ್ನು ಸೈಬರ್ ಅಪರಾಧ ಚಟುವಟಿಕೆಗಳಿಗೆ ಅಥವಾ ಇತರ ಅಪರಾಧ ಕೃತ್ಯಗಳಿಗೆ ದುರ್ಬಳಕೆ ಮಾಡಿಕೊಂಡರೆ, ಆ ಸಿಮ್ ಕಾರ್ಡ್ ಯಾರ ಹೆಸರಿನಲ್ಲಿದೆಯೋ ಅವರನ್ನು ಹೊಣೆ ಮಾಡುವ ಸಾಧ್ಯತೆ ಇದೆ ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ.



ನಾಗರಿಕರು ಎಚ್ಚರಿಕೆಯಿಂದ ಇರಬೇಕು, ಮೊಬೈಲ್ ಫೋನ್‌ನ ಐಎಂಇಐ ಸಂಖ್ಯೆಯನ್ನು ಬದಲಾಯಿಸಿದ್ದರೆ ಅಂತಹ ಮೊಬೈಲ್ ಫೋನ್ ಬಳಕೆ ಸೂಕ್ತವಲ್ಲ ಎಂದು ಕೇಂದ್ರ ದೂರಸಂಪರ್ಕ ಇಲಾಖೆಯ ಪ್ರಕಟಣೆ ಹೇಳಿದೆ.

ನಕಲಿ ದಾಖಲೆಗಳನ್ನು ಬಳಸಿ ಸಿಮ್ ಕಾರ್ಡ್ ಖರೀದಿಸಬಾರದು, ಗ್ರಾಹಕರು ತಮ್ಮ ಹೆಸರಿನಲ್ಲಿ ಖರೀದಿಸಿದ ಸಿಮ್ ಕಾರ್ಡ್‌ಗಳನ್ನು ಅದನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುವ ಇತರರಿಗೆ ನೀಡಬಾರದು ಎಂದು ಕೂಡ ಇಲಾಖೆಯು ಎಚ್ಚರಿಸಿದೆ.

ಸಂಚಾರ ಸಾರಥಿ ಪೋರ್ಟಲ್ ಪರಿಶೀಲಿಸಿ

ಐಎಂಇಐ ವಿವರಗಳನ್ನು ನಾಗರಿಕರು ಸಂಚಾರ ಸಾರಥಿ ಪೋರ್ಟಲ್ ಅಥವಾ ಸಂಚಾರ ಸಾರಥಿ ಮೊಬೈಲ್ ಆ್ಯಪ್ ಮೂಲಕ ಪರಿಶೀಲಿಸಬೇಕು ಎಂದು ಇಲಾಖೆಯು ಸಲಹೆ ನೀಡಿದೆ.

ಈ ಪೋರ್ಟಲ್ ಮೂಲಕ ಮೊಬೈಲ್‌ನ ಬ್ರ್ಯಾಂಡ್ ಹೆಸರು, ತಯಾರಿಕಾ ಕಂಪನಿಯ ಹೆಸರನ್ನು ಪರಿಶೀಲಿಸಬಹುದು.

'ಮಾರ್ಪಾಡು ಮಾಡಿರುವ ಐಎಂಇಐ ಸಂಖ್ಯೆ ಹೊಂದಿರುವ ಸಾಧನಗಳನ್ನು ಬಳಕೆ ಮಾಡುವುದು, ಕಾನೂನಿಗೆ ವಿರುದ್ಧವಾದ ರೀತಿಯಲ್ಲಿ ಸಿಮ್ ಕಾರ್ಡ್ ಪಡೆದುಕೊಳ್ಳುವುದು, ಸೈಬರ್ ವಂಚನೆಯ ಕೆಲಸಗಳಿಗೆ ಸಿಮ್ ಕಾರ್ಡ್ ಬಳಕೆ ಮಾಡುವವರಿಗೆ ತಮ್ಮ ಸಿಮ್ ಕಾರ್ಡ್ ಒದಗಿಸುವುದರಿಂದ ಗಂಭೀರ ಸ್ವರೂಪದ ಕಾನೂನು ಪರಿಣಾಮಗಳಿಗೆ ಗುರಿಯಾಗಬೇಕಾದೀತು. ಒಬ್ಬರ ಹೆಸರಿನಲ್ಲಿ ಖರೀದಿಯಾದ ಸಿಮ್ ಕಾರ್ಡ್ ನಂತರದಲ್ಲಿ ದುರ್ಬಳಕೆ ಆದರೆ, ಮೂಲ ವ್ಯಕ್ತಿಯನ್ನು ಕೂಡ ಅಪರಾಧಿ ಎಂದು ಪರಿಗಣಿಸಬಹುದು' ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಮೊಬೈಲ್ ಐಎಂಇಐ ಸಂಖ್ಯೆ ಸೇರಿದಂತೆ ದೂರಸಂಪರ್ಕ ಕ್ಷೇತ್ರದಲ್ಲಿ ಬಳಕೆ ಮಾಡುವ ಸಾಧನಗಳ ಗುರುತುಗಳಲ್ಲಿ ಬದಲಾವಣೆ ಮಾಡಿದರೆ, ಅಂಥವರಿಗೆ ಭಾರಿ ದಂಡ ವಿಧಿಸಲು ದೂರಸಂಪರ್ಕ ಕಾಯ್ದೆ – 2023ರಲ್ಲಿ ಅವಕಾಶ ಇದೆ. ಕಾಯ್ದೆಯನ್ನು ಉಲ್ಲಂಘಿಸಿದವರಿಗೆ ಮೂರು ವರ್ಷಗಳ ಜೈಲು ಶಿಕ್ಷೆ ಅಥವಾ ₹50 ಲಕ್ಷದವರೆಗೆ ದಂಡ ಅಥವಾ ಅವೆರಡನ್ನೂ ವಿಧಿಸಲು ಅವಕಾಶ ಇದೆ.

ದೂರಸಂಪರ್ಕ ನಿಯಮಗಳು – 2024ರಲ್ಲಿನ ಅಂಶಗಳು, ಐಎಂಇಐ ಸಂಖ್ಯೆಯನ್ನು ಬದಲಾಯಿಸುವುದನ್ನು ನಿರ್ಬಂಧಿಸಿವೆ.

ಹೂಡಿಕೆ: ಬ್ರಿಟನ್ ಕಂಪನಿಗಳ ಜೊತೆ ಎಂ.ಬಿ ಪಾಟೀಲ ಮಾತುಕತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನೇತೃತ್ವದ ನಿಯೋಗವು ಸೋಮವಾರದಿಂದ ಮೂರು ದಿನಗಳ ಕಾಲ ಇಂಗ್ಲೆಂಡ್ ಪ್ರವಾಸ ಕೈಗೊಂಡಿದ್ದು, ಮೊದಲ ದಿನ ಮಾರ್ಟಿನ್ ಬೇಕರ್ ಸಹಿತ ಏಳು ಕಂಪನಿಗಳ ಜತೆ ಹೂಡಿಕೆ ಸಂಬಂಧ ಮಾತುಕತೆ ನಡೆಸಿದೆ.


ಎಂ.ಬಿ. ಪಾಟೀಲ

ಮಾರ್ಟಿನ್ ಬೇಕರ್ ಕಂಪನಿಯ ಪರವಾಗಿ ಹಿರಿಯ ಉಪಾಧ್ಯಕ್ಷ ಆ್ಯಂಡ್ರೂ ಮಾರ್ಟಿನ್, ಸಿಎಫ್‌ಒ ರಾಬರ್ಟ್ ಮಾರ್ಗನ್, ವಾಣಿಜ್ಯ ವ್ಯವಹಾರಗಳ ಮುಖ್ಯಸ್ಥ ಬ್ರಿಯಾನ್ ಪೋವೆಲ್ ಭಾಗವಹಿಸಿದ್ದರು. ಇದಲ್ಲದೇ ಎಸ್.ಸಿ.ಐ ಸೆಮಿಕಂಡಕ್ಟರ್ಸ್, ಸ್ಯಾಮ್ಕೊ ಹೋಲ್ಡಿಂಗ್ಸ್, ಎ.ಆರ್.ಎಂ, ಲ್ಯಾಟೋಸ್ ಗ್ರೂಪ್, ವಿಯರ್ ಮತ್ತು ಎಡ್ವರ್ಡಿಯನ್ ಹೋಟೆಲ್ ಗ್ರೂಪ್ ಪ್ರಮುಖರನ್ನು ಭೇಟಿ ಮಾಡಿದರು ಎಂದು ಪ್ರಕಟಣೆ ತಿಳಿಸಿದೆ.

'ವೈಮಾಂತರಿಕ್ಷ ಕ್ಷೇತ್ರದಲ್ಲಿ ಹೆಸರಾಗಿರುವ ಮಾರ್ಟಿನ್ ಬೇಕರ್ ಕಂಪನಿಯ ಪ್ರತಿನಿಧಿಗಳ ಜತೆಗಿನ ಮಾತುಕತೆ ಸಕಾರಾತ್ಮಕವಾಗಿತ್ತು. ರಾಜ್ಯದಲ್ಲಿ ಅವರ ತಯಾರಿಕಾ ಘಟಕ ಸ್ಥಾಪಿಸುವಂತೆ ಚರ್ಚಿಸಲಾಗಿದೆ. ಅವರು ತಮ್ಮ ಕಂಪನಿಯ ಪರಂಪರೆ, ಅದು ಜಾಗತಿಕ ಮಟ್ಟದಲ್ಲಿ ಹೊಂದಿರುವ ಸ್ಥಾನವನ್ನು ವಿವರಿಸಿದ್ದಾರೆ. ಕರ್ನಾಟಕದಲ್ಲಿನ ಕೈಗಾರಿಕಾ ವ್ಯವಸ್ಥೆ, ಮಾನವ ಸಂಪನ್ಮೂಲ ಮತ್ತು ಏರೋಸ್ಪೇಸ್ ಹಾಗೂ ರಕ್ಷಣಾ ವಲಯಗಳಿಗೆ ನೀಡಿರುವ ಮೂಲಸೌಕರ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ' ಎಂದು ಪಾಟೀಲ ಅವರು ಹೇಳಿದ್ದಾರೆ.

ರಾಜ್ಯದಲ್ಲಿ ಕೈಗಾರಿಕೆಗಳಿಗೆ ಪೂರಕವಾದ ಪರಿಸರ, ಮೂಲಸೌಕರ್ಯ, ಭೂಮಿಯ ಲಭ್ಯತೆ, ವಿಷನ್ ಗ್ರೂಪ್ ಚಿಂತನೆ, ಇನ್ವೆಸ್ಟ್ ಕರ್ನಾಟಕ ಫೋರಂನ ಉದ್ದೇಶ, ರಫ್ತುಕೇಂದ್ರಿತ ಕೈಗಾರಿಕಾ ನೀತಿ, ವಿನಾಯಿತಿ ಮತ್ತು ಉತ್ತೇಜನ ಕುರಿತು ಮಾಹಿತಿ ನೀಡಲಾಗಿದೆ ಎಂದು ಪಾಟೀಲ ತಿಳಿಸಿದ್ದಾರೆ.



ಪಾಕಿಸ್ತಾನದ ಪೆಶಾವರದಲ್ಲಿ ನಡೆದ ಆತ್ಮಾಹುತಿ ದಾಳಿಯ ಸ್ಥಳದಲ್ಲಿ ಭದ್ರತಾ ಸಿಬ್ಬಂದಿ ಪರಿಶೀಲನೆ ನಡೆಸಿದರು ಎಪಿ ಚಿತ್ರ

ಪಾಕ್ ಅರೆಸೇನಾ ಪಡೆ ಕಚೇರಿಯಲ್ಲಿ ಆತ್ಮಾಹುತಿ ದಾಳಿ: 3 ಜನ ಸಾವು

ಪೆಶಾವರ (ಪಿಟಿಐ): ಪಾಕಿಸ್ತಾನದ ಪೆಶಾವರದಲ್ಲಿರುವ ಅರೆಸೇನಾ ಪಡೆಯ ಪ್ರಧಾನ ಕಚೇರಿಯಲ್ಲಿ ಸೋಮವಾರ ನಡೆದ ಆತ್ಮಾಹುತಿ ದಾಳಿಯಲ್ಲಿ ಕನಿಷ್ಠ ಮೂವರು ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಫೆಡರಲ್ ಕಾನ್‌ಸ್ಟಾಬ್ಯುಲರಿ (ಎಫ್.ಸಿ) ಪ್ರಧಾನ ಕಚೇರಿಗೆ ನುಗ್ಗಲು ಯತ್ನಿಸಿದ ಮೂವರು ಆತ್ಮಹತ್ಯಾ ಬಾಂಬರ್‌ಗಳು ಸಹ ಪ್ರತಿದಾಳಿಯಲ್ಲಿ ಮೃತರಾಗಿದ್ದಾರೆ ಎಂದು ನಗರ ಪೊಲೀಸ್ ಮುಖ್ಯಸ್ಥ ಮಿಯಾನ್ ಸಯೀದ್ ತಿಳಿಸಿದ್ದಾರೆ.

'ಒಬ್ಬ ದಾಳಿಕೋರ ಮುಖ್ಯ ದ್ವಾರದಲ್ಲಿ ತನ್ನನ್ನು ತಾನು ಸ್ಫೋಟಿಸಿಕೊಂಡರೆ, ಇನ್ನಿಬ್ಬರು ಆವರಣ ಪ್ರವೇಶಿಸಿದರು. ಎಫ್.ಸಿ ಸಿಬ್ಬಂದಿ ಅವರನ್ನು ಹೊಡೆದುರುಳಿಸಿದರು ಮತ್ತು ಇಬ್ಬರೂ ಸ್ಥಳದಲ್ಲೇ ಮೃತಪಟ್ಟರು' ಎಂದು ಸಯೀದ್ ಹೇಳಿದ್ದಾರೆ.

'ಎಫ್.ಸಿ ಪ್ರಧಾನ ಕಚೇರಿಯ ಮುಖ್ಯ ದ್ವಾರದಲ್ಲಿ ಮತ್ತು ಆವರಣದೊಳಗಿನ ಬೈಕ್ ಸ್ಟ್ಯಾಂಡ್ ಬಳಿ ಆತ್ಮಹತ್ಯಾ ಸ್ಫೋಟಗಳು ಸಂಭವಿಸಿವೆ' ಎಂದು ಖೈಬರ್ ಪಖ್ತುಂಖ್ವಾ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಜುಲ್ಫಿಕರ್ ಹಮೀದ್ ಹೇಳಿದ್ದಾರೆ.

ದಾಳಿಯಲ್ಲಿ ಮೂವರು ನಾಗರಿಕರು ಸೇರಿದಂತೆ ಐದು ಜನರು ಗಾಯಗೊಂಡಿದ್ದಾರೆ ಎಂದು ವೈದ್ಯಾಧಿಕಾರಿ ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

24-11-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7900-8000
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1540 (1530)
ಒಂದು ವಾರದ ಡೆಲಿವರಿ	1535 (1525)
ಪಾಮ್ ವಾರದ ಡೆಲಿವರಿ	1243 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1400 (1405)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,23,100 (1,23,200)
ಬೆಳ್ಳಿ ಕೆ.ಜಿಗೆ	1,54,000 (1,53,800)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಬ್ಬರ್ ಬೆಳೆಗಾರರ ಸಮ್ಮೇಳನ 29ಕ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ರಬ್ಬರ್ ಧಾರಣೆ ಕುಸಿತದತ್ತ ಸಾಗಿದ್ದು, ರಾಜ್ಯ ಸರ್ಕಾರ ಬೆಳೆಗಾರರ ನೆರವಿಗೆ ಬರಬೇಕು ಎಂದು ಒತ್ತಾಯಿಸಲು 'ಕರ್ನಾಟಕ ರಬ್ಬರ್ ಬೆಳೆಗಾರರ ಸಮ್ಮೇಳನ'ವನ್ನು ನವೆಂಬರ್ 29ರಂದು ಬೆಳ್ತಂಗಡಿ ತಾಲ್ಲೂಕಿನ ಉಜಿರೆಯಲ್ಲಿ ಆಯೋಜಿಸಲಾಗಿದೆ ಎಂದು ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀಧರ್ ಭಿಡೆ ಮುಂಡಾಜೆ ಹೇಳಿದರು.

ಕರ್ನಾಟಕ ರಾಜ್ಯ ರಬ್ಬರ್ ಬೆಳೆಗಾರರ ಹಿತರಕ್ಷಣಾ ವೇದಿಕೆ, ಬೆಳ್ತಂಗಡಿ ತಾಲ್ಲೂಕು ರಬ್ಬರ್ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರಿ ಸಂಘ ಹಾಗೂ ರಾಜ್ಯದ ರಬ್ಬರ್ ವ್ಯವಹಾರ ನಡೆಸುವ ಸಹಕಾರ ಸಂಘಗಳ ಆಶ್ರಯದಲ್ಲಿ ಸಮ್ಮೇಳನ ನಡೆಯಲಿದೆ.

'ರಬ್ಬರ್‌ನ ಆಮದು ಹೆಚ್ಚಿದ್ದರಿಂದ ಆಂತರಿಕ ಧಾರಣೆ ಕುಸಿದಿದೆ. ಕೇರಳದಲ್ಲಿ ನವೆಂಬರ್ 1ರಿಂದ ರಬ್ಬರ್ ಬೆಲೆಯನ್ನು ಕೆ.ಜಿ.ಗೆ ₹200ಕ್ಕೆ ನಿಗದಿಪಡಿಸಲಾಗಿದೆ. ಕರ್ನಾಟಕದಲ್ಲಿ ಸರ್ಕಾರ ಮಾರುಕಟ್ಟೆ ಮಧ್ಯ ಪ್ರವೇಶ ಮಾಡಿಲ್ಲ. ಸದ್ಯ ಇಲ್ಲಿ ಕೆ.ಜಿ.ಗೆ ಸರಾಸರಿ ₹182 ದರ ಸಿಗುತ್ತಿದೆ' ಎಂದು ಹೇಳಿದರು.

ರಾಜ್ಯದಲ್ಲಿ ವಾರ್ಷಿಕ 8.75 ಲಕ್ಷ ಟನ್ ರಬ್ಬರ್ ಉತ್ಪಾದನೆ ಆಗುತ್ತಿದ್ದು, 14.12 ಲಕ್ಷ ಟನ್ ಬೇಡಿಕೆ ಇದೆ. 6 ಲಕ್ಷ ಟನ್ ರಬ್ಬರ್ ಆಮದು ಮಾಡಿಕೊಳ್ಳಲಾಗುತ್ತಿದೆ. ರಬ್ಬರ್ ಆಮದು ಮೇಲಿನ ಸುಂಕ ಹೆಚ್ಚಿಸಬೇಕು ಎಂಬುದು ಪ್ರಮುಖ ಬೇಡಿಕೆಗಳಾಗಿವೆ ಎಂದರು.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹17000-20400
ತಿಪಟೂರು	₹26500-27700

ಪರಂಪರೆಯನ್ನು ಬಿಟ್ಟಿರಲಿಲ್ಲ: ಅಕ್ಷತಾ ಮೂರ್ತಿ

ಲಂಡನ್ (ಪಿಟಿಐ): 'ನನ್ನ ಪತಿ ಯುನೈಟೆಡ್ ಕಿಂಗ್‌ಡಮ್ ಚಾನ್ಸಲರ್ ಆಗಿದ್ದಾಗ ಮತ್ತು ನಂತರ ಬ್ರಿಟನ್‌ನ ಪ್ರಧಾನಿಯಾಗಿದ್ದಾಗ ಅಧಿಕೃತ ನಿವಾಸದಲ್ಲೂ (ಡೌನಿಂಗ್ ಸ್ಟ್ರೀಟ್) ಸಾಂಸ್ಕೃತಿಕ ಆಚರಣೆಯನ್ನು ಮುಂದುವರಿಸಿದ್ದೆವು ಮತ್ತು ಎಂದಿಗೂ ಪರಂಪರೆಯಿಂದ ದೂರ ಸರಿದಿರಲಿಲ್ಲ' ಎಂದು ಬ್ರಿಟನ್‌ನ ಭಾರತ ಮೂಲದ ಮೊದಲ ಪ್ರಧಾನಿ ಎಂದೇ ಹೆಸರಾದ ರಿಷಿ ಸುನಕ್ ಅವರ ಪತ್ನಿ, ಉದ್ಯಮಿ ಅಕ್ಷತಾ ಮೂರ್ತಿ ಹೇಳಿದ್ದಾರೆ.



ಅಕ್ಷತಾ ಮೂರ್ತಿ ಮತ್ತು ರಿಷಿ ಸುನಕ್ (ಎಎಫ್‌ಪಿ ಸಂಗ್ರಹ ಚಿತ್ರ)

ವಾರಾಂತ್ಯದಲ್ಲಿ ಯುನೈಟೆಡ್ ಕಿಂಗ್‌ಡಮ್‌ನ ಭಾರತೀಯ ವಿದ್ಯಾ ಭವನದಲ್ಲಿ ನಡೆದ ದೀಪಾವಳಿ ವಾರ್ಷಿಕ ನಿಧಿ ಸಂಗ್ರಹಣೆಯ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ, ಪರಂಪರೆಯನ್ನು ಮುಂದುವರಿಸುವಲ್ಲಿ ಭಾರತೀಯ ವಿದ್ಯಾ ಭವನ ಮಹತ್ವದ ಪಾತ್ರ ವಹಿಸಿದೆ ಎಂದು ಅವರು ಹೇಳಿದ್ದಾರೆ.

2020 ಮತ್ತು 2024ರಲ್ಲಿ ರಿಷಿ ಸುನಕ್ ಅವರು ಯುನೈಟೆಡ್ ಕಿಂಗ್‌ಡಂನ ಚಾನ್ಸಲರ್ ಆಗಿದ್ದಾಗ ಮತ್ತು ನಂತರ ದೇಶದ ಪ್ರಧಾನಿಯಾಗಿದ್ದಾಗಲೂ ಡೌನಿಂಗ್ ಸ್ಟ್ರೀಟ್‌ನ ಪ್ರಖ್ಯಾತ ಕಪ್ಪು ಬಾಗಿಲಿನ ಮುಂದೆ ದೀಪಗಳನ್ನು ಬೆಳಗಿಸಿದ್ದು, ರಂಗೋಲಿ ಬಿಡಿಸಿದ್ದು ಮತ್ತು ಮೇಲಿನ ಮಹಡಿಯ ಅಡುಗೆ ಮನೆಯಲ್ಲಿ ರಸಂ ಸಿದ್ಧ ಮಾಡಿದ್ದನ್ನು ಅಕ್ಷತಾ ಮೂರ್ತಿ ನೆನಪಿಸಿಕೊಂಡಿದ್ದಾರೆ.

ಕಾರ್ಯಕ್ರಮದಲ್ಲಿ ಅವರ ತಂದೆ, ಇನ್ಫೊಸಿಸ್ ಸಹ-ಸಂಸ್ಥಾಪಕ ನಾರಾಯಣ ಮೂರ್ತಿ ಮತ್ತು ಅತ್ತೆ-ಮಾವ ಯಶ್, ಉಷಾ ಸುನಕ್ ಇದ್ದರು.

ರೆಗೆ ಗಾಯಕ ಜಿಮ್ಮಿ ಕ್ಲಿಫ್ ನಿಧನ

ನ್ಯೂಯಾರ್ಕ್ (ಎಪಿ): ಜನಪ್ರಿಯ 'ರೆಗೆ' (ಜಮೈಕಾ ಮೂಲದ ಸಂಗೀತ ಪ್ರಕಾರ) ಗಾಯಕ ಮತ್ತು ನಟ ಜಿಮ್ಮಿ ಕ್ಲಿಫ್ (81) ಅವರು ನಿಧನರಾದರು.


ಜಿಮ್ಮಿ ಕ್ಲಿಫ್

'ನ್ಯುಮೋನಿಯಾ ಬಳಿಕ ಕಾಣಿಸಿಕೊಂಡ ಮೂರ್ಛೆ ಸಮಸ್ಯೆಯಿಂದ ಅವರು ಮೃತಪಟ್ಟರು' ಎಂದು ಜಿಮ್ಮಿ ಅವರ ಕುಟುಂಬಸ್ಥರು ಸೋಮವಾರ ಸಾಮಾಜಿಕ ಮಾಧ್ಯಮದ ಮೂಲಕ ತಿಳಿಸಿದ್ದಾರೆ.

'ನಿಮ್ಮ ಬೆಂಬಲವೇ ಅವರ ವೃತ್ತಿ ಜೀವನಕ್ಕೆ ಶಕ್ತಿಯಾಗಿತ್ತು. ಪ್ರತಿಯೊಬ್ಬರ ಪ್ರೀತಿ ಮತ್ತು ಬೆಂಬಲಕ್ಕೆ ಅವರು ಆಭಾರಿಯಾಗಿದ್ದರು' ಎಂದು ತಿಳಿಸಿದ್ದಾರೆ.

ಜಮೈಕಾ ಮೂಲದ ಸಂಗೀತ ಪ್ರಕಾರವನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಜಿಮ್ಮಿ ಅವರಿಗೆ ಸಲ್ಲುತ್ತದೆ.

ಟ್ರಂಪ್, ಜಿನ್‌ಪಿಂಗ್ ಚರ್ಚೆ

ವಾಷಿಂಗ್ಟನ್ (ಎಪಿ): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಸೋಮವಾರ ದೂರವಾಣಿ ಮೂಲಕ ವ್ಯಾಪಾರ, ತೈವಾನ್ ಹಾಗೂ ಉಕ್ರೇನ್ ಕುರಿತು ಚರ್ಚಿಸಿದ್ದಾರೆ ಎಂದು ಶ್ವೇತಭವನ ಹೇಳಿದೆ.


ಡೊನಾಲ್ಡ್ ಟ್ರಂಪ್

'ಯುದ್ಧಾನಂತರ ಚೀನಾಕ್ಕೆ ತೈವಾನ್ ಸೇರ್ಪಡೆಗೊಳ್ಳಬೇಕು ಎನ್ನುವುದು ಅಂತರರಾಷ್ಟ್ರೀಯ ಆದೇಶದ ಪ್ರಮುಖ ಅಂಶವಾಗಿದೆ' ಎಂದು ಷಿ ಅವರು ಟ್ರಂಪ್ ಅವರಿಗೆ ತಿಳಿಸಿದ್ದಾರೆಂದು ಚೀನಾದ ಅಧಿಕೃತ ಸುದ್ದಿ ಸಂಸ್ಥೆ 'ಷಿನ್ಹುವಾ' ವರದಿ ಮಾಡಿದೆ.

'ತೈವಾನ್ ತನ್ನ ಭೂಪ್ರದೇಶ ಎಂದು ಹೇಳಿಕೊಂಡು ಚೀನಾ ಅದರ ಮೇಲೆ ದಾಳಿ ನಡೆಸಿದರೆ, ಆಗ ಜಪಾನ್ ಸೇನೆಯು ಹಸ್ತಕ್ಷೇಪಕ್ಕೆ ಮುಂದಾಗಬಹುದು' ಎಂದು ಜಪಾನ್ ಪ್ರಧಾನಿ ಸನೇ ತಕೈಚಿ ಇತ್ತೀಚೆಗೆ ಹೇಳಿಕೆ ನೀಡಿದ್ದರು.

ಎಫ್‌ಪಿಒಗಳಿಂದ ನೇರ ಖರೀದಿಗೆ ಸಲಹೆ

ನವದೆಹಲಿ (ಪಿಟಿಐ): ಹೋಟೆಲ್‌ಗಳು ಹಾಗೂ ರೆಸ್ಟಾರೆಂಟ್‌ಗಳು ತಮಗೆ ಅಗತ್ಯವಿರುವ ಉತ್ಪನ್ನಗಳನ್ನು ರೈತ ಉತ್ಪಾದಕ ಸಂಘಗಳಿಂದ (ಎಫ್‌ಪಿಒ) ನೇರವಾಗಿ ಖರೀದಿಸಬೇಕು ಎಂದು ಕೇಂದ್ರ ಕೃಷಿ ಕಾರ್ಯದರ್ಶಿ ದೇವೇಶ್ ಚತುರ್ವೇದಿ ಸೋಮವಾರ ಸಲಹೆ ನೀಡಿದ್ದಾರೆ.

ಹೀಗೆ ಮಾಡುವುದರಿಂದ ಬೆಳೆಗಾರರಿಗೆ ಉತ್ತಮ ಬೆಲೆ ಸಿಗುತ್ತದೆ, ಪೂರೈಕೆ ವ್ಯವಸ್ಥೆಯಲ್ಲಿ ಮಧ್ಯವರ್ತಿಗಳ ಪಾತ್ರವನ್ನು ನಿವಾರಿಸಲು ಆಗುತ್ತದೆ ಎಂದು ಅವರು ಹೇಳಿದ್ದಾರೆ.

'ದೇಶದಲ್ಲಿ ಹೋಟೆಲ್, ರೆಸ್ಟೊ ರೆಂಟ್‌ಗಳ ಸಂಖ್ಯೆ ದೊಡ್ಡದಿದೆ. ಅವರು ಸ್ಥಳೀಯ ರೈತರ ಜೊತೆ ಪಾಲುದಾರಿಕೆ ಹೊಂದಲು ಸಾಧ್ಯವಾದರೆ ಅವರಿಗೂ ರೈತರಿಗೂ ಒಳ್ಳೆಯದಾಗುತ್ತದೆ' ಎಂದು ಚತುರ್ವೇದಿ ಅವರು ಕಾರ್ಯಕ್ರಮವೊಂದರಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಕೇಂದ್ರ ಸರ್ಕಾರವು ವೆಬ್ ಆಧಾರಿತ ವೇದಿಕೆಯೊಂದನ್ನು ಆರಂಭಿಸುವ ಉದ್ದೇಶ ಹೊಂದಿದ್ದು, ಅದರ ಮೂಲಕ ಎಫ್‌ಪಿಒಗಳು ತಮ್ಮಲ್ಲಿ ಹೆಚ್ಚುವರಿಯಾಗಿ ಲಭ್ಯವಿರುವ ಉತ್ಪನ್ನಗಳ ಬಗ್ಗೆ ಮಾಹಿತಿ ನೀಡಬಹುದು. ಆ ಉತ್ಪನ್ನಗಳನ್ನು ಉದ್ದಿಮೆಗಳು, ಹೋಟೆಲ್‌ಗಳು, ರೆಸ್ಟೊರೆಂಟ್‌ಗಳು ನೇರವಾಗಿ ಖರೀದಿಸಬಹುದು ಎಂದು ಅವರು ತಿಳಿಸಿದ್ದಾರೆ.

ಟೊರಾಂಟೊ: ಭಾರತ ಮೂಲದ ವ್ಯಕ್ತಿ ಸೆರೆ

ಒಟ್ಟಾವಾ (ಪಿಟಿಐ): 'ಕೆನಡಾದ 25 ಕುಖ್ಯಾತ ಅಪರಾಧಿಗಳ ಪಟ್ಟಿ'ಯಲ್ಲಿದ್ದ ಭಾರತ ಮೂಲದ ವ್ಯಕ್ತಿಯೊಬ್ಬರನ್ನು ಟೊರಂಟೊ ಪೊಲೀಸರು ಬಂಧಿಸಿದ್ದಾರೆ.



ಪೆರೋಲ್ ನಿಯಮ ಉಲ್ಲಂಘಿಸಿದ ಆರೋಪದಡಿ ನಿಕೋಲಸ್ ಸಿಂಗ್ (24) ಬಂಧನಕ್ಕೆ ವಾರಂಟ್ ಹೊರಡಿಸಲಾಗಿತ್ತು. ಶುಕ್ರವಾರ ಆತನನ್ನು ಬಂಧಿಸಲಾಗಿದೆ. ಆರೋಪಿ ಬಳಿಯಿದ್ದ ಬಂದೂಕು, ಮದ್ದುಗುಂಡುಗಳು ಮತ್ತು ಮ್ಯಾಗಝೀನ್‌ವೊಂದನ್ನು ವಶಕ್ಕೆ ಪಡೆಯಲಾಗಿದೆ ಎಂದು ಟೊರಾಂಟೊ ಪೊಲೀಸರು ತಿಳಿಸಿದ್ದಾರೆ.

ಮಾರ್ಕ್ ಕಾರ್ನಿಗೆ ಆಹ್ವಾನ ನೀಡಿದ ಪ್ರಧಾನಿ ನರೇಂದ್ರ ಮೋದಿ

ಭಾರತದ ಭೇಟಿಗೆ ಕೆನಡಾ ಪ್ರಧಾನಿ ಸಮ್ಮತಿ

ಜೊಹಾನಸ್‌ಬರ್ಗ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರ ಆಹ್ವಾನವನ್ನು ಸ್ವೀಕರಿಸಿದ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರು ಭಾರತಕ್ಕೆ ಭೇಟಿ ನೀಡಲು ಒಪ್ಪಿಕೊಂಡಿದ್ದಾರೆ.

'ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ ಜಿ20 ಶೃಂಗದಲ್ಲಿ ಭಾನುವಾರ ದ್ವಿಪಕ್ಷೀಯ ಮಾತುಕತೆ ನಡೆಸಿದ ಬಳಿಕ ಮೋದಿ ಅವರು ನೀಡಿದ ಆಹ್ವಾನವನ್ನು ಒಪ್ಪಿಕೊಂಡಿರುವ ಕಾರ್ನಿ ಅವರು 2026ರ ಆರಂಭದಲ್ಲಿ ಭೇಟಿ ನೀಡುವುದಾಗಿ ತಿಳಿಸಿದ್ದಾರೆ' ಎಂದು ಕೆನಡಾ ಪ್ರಧಾನಿ ಕಚೇರಿಯ ಪ್ರಕಟಣೆ ತಿಳಿಸಿದೆ.

'ವ್ಯಾಪಾರ, ಹೂಡಿಕೆ, ತಂತ್ರಜ್ಞಾನ ಮತ್ತು ಇಂಧನ ಕ್ಷೇತ್ರದಲ್ಲಿ ಸಹಕಾರವನ್ನು ವೃದ್ಧಿಪಡಿಸುವುದರ ಜೊತೆಗೆ ರಕ್ಷಣೆ ಮತ್ತು ಬಾಹ್ಯಾಕಾಶ ವಲಯದಲ್ಲೂ ಸಹಕಾರವನ್ನು ಬಲಪಡಿಸಿಕೊಳ್ಳಲು ಮೋದಿ ಮತ್ತು ಕಾರ್ನಿ ಸಮ್ಮತಿಸಿದ್ದಾರೆ. ಸಮಗ್ರ ಆರ್ಥಿಕ ಪಾಲುದಾರಿಕೆಯ ಒಪ್ಪಂದ-ದ(ಸಿಇಪಿಎ) ಬಗ್ಗೆಯೂ ಮಾತುಕತೆ ಆರಂಭಿಸಲು ಉಭಯ ನಾಯಕರು ನಿರ್ಧರಿಸಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.


ಪ್ರಧಾನಿ ನರೇಂದ್ರ ಮೋದಿ ಅವರು ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಅವರ ಜೊತೆ ಮಾತುಕತೆ ನಡೆಸಿದರು ಪಿಟಿಐ ಚಿತ್ರ

ಕಾನೂನು ಜಾರಿಗೆ ಸಂಬಂಧಿಸಿ ಉಭಯ ದೇಶಗಳ ನಡುವಿನ ಮಾತುಕತೆಯಲ್ಲಿನ ಪ್ರಗತಿಯ ಬಗ್ಗೆ ಕಾರ್ನಿ ಹರ್ಷ ವ್ಯಕ್ತಪಡಿಸಿದರು.

ಖಾಲಿಸ್ತಾನಿ ಉಗ್ರ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡವಿದೆ ಎಂದು 2023ರಲ್ಲಿ ಕೆನಡಾದ ಆಗಿನ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಆರೋಪಿಸಿದ್ದರಿಂದ ಉಭಯ ದೇಶಗಳ ನಡುವಿನ ಸಂಬಂಧ ತೀವ್ರ ಹದಗೆಟ್ಟಿತ್ತು.

ಪೌರತ್ವ ಕಾಯ್ದೆ ತಿದ್ದುಪಡಿಗೆ ಮುಂದಾದ ಕೆನಡಾ

ಒಟ್ಟಾವ (ಪಿಟಿಐ): ಕೆನಡಾ ಸರ್ಕಾರವು ಪೌರತ್ವ ಕಾಯ್ದೆ ತಿದ್ದುಪಡಿಗೆ ಮುಂದಾಗಿದ್ದು, ಅಲ್ಲಿ ವಾಸಿಸುತ್ತಿರುವ ಭಾರತ ಮೂಲದವರಿಗೆ ಇದರಿಂದ ಅನುಕೂಲವಾಗಲಿದೆ ಎನ್ನಲಾಗುತ್ತಿದೆ.

'ಪೌರತ್ವ ಕಾಯ್ದೆ (2025) ತಿದ್ದುಪಡಿಗೆ ಅಲ್ಲಿನ ರಾಜ ಒಪ್ಪಿಗೆ ನೀಡಿದ್ದಾರೆ. ಎಲ್ಲರನ್ನೂ ಒಳಗೊಳ್ಳುವ ನಿಟ್ಟಿನಲ್ಲಿ ಈ ಕಾಯ್ದೆಯು ಮಹತ್ವದ ಮೈಲುಗಲ್ಲಾಗಲಿದೆ' ಎಂದು ಕೆನಡಾ ಸರ್ಕಾರ ಇತ್ತೀಚೆಗೆ ಹೇಳಿಕೆ ಬಿಡುಗಡೆ ಮಾಡಿದೆ.

ನೂತನ ಕಾಯ್ದೆ ಅಸ್ತಿತ್ವಕ್ಕೆ ಬಂದ ನಂತರ, ವಿಧೇಯಕವು ಜಾರಿಗೆ ಬರುವ ಮೊದಲು ಜನಿಸಿದ ಮಕ್ಕಳಿಗೂ ಕೆನಡಾದ ಪೌರತ್ವವನ್ನು ನೀಡಲಾಗುತ್ತದೆ ಎಂದು ಅದು ತಿಳಿಸಿದೆ.

2009ರ ಕಾಯ್ದೆಯ ಅನುಸಾರ, ಕೆನಡಾದ ಪೌರತ್ವ ಹೊಂದಿರುವ ಪೋಷಕರ ಮಕ್ಕಳು ಕೆನಡಾದಿಂದ ಹೊರಗಡೆ ಜನಿಸಿದರೆ ಅಥವಾ ದತ್ತು ಪಡೆದವರಾಗಿದ್ದರೆ ಅವರಿಗೆ ವಂಶಪಾರಂಪರ್ಯವಾಗಿ ಕೆನಡಾ ಪೌರತ್ವ ಲಭಿಸುತ್ತಿರಲಿಲ್ಲ. ಇದರಿಂದಾಗಿ ದೇಶದ ಹೊರಗೆ ಜನಿಸಿದ ಮಗುವನ್ನು ಹೊಂದಿದ ಭಾರತ ಮೂಲದ ಹಲವರಿಗೆ ಸಮಸ್ಯೆಯಾಗುತ್ತಿತ್ತು.

ಮುನ್ನಡೆ ಪಡೆಯುವಲ್ಲಿ ಕರ್ನಾಟಕ ಯಶಸ್ವಿ

ಬೆಂಗಳೂರು: ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ ಎಲೈಟ್ ಸಿ ಗುಂಪಿನ ಪಂದ್ಯದ ಎರಡನೇ ದಿನವಾದ ಸೋಮವಾರ ಹಿಮಾಚಲ ಪ್ರದೇಶದ ವಿರುದ್ಧ 35 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಪಡೆಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಹಿಮಾಚಲ ಪ್ರದೇಶ ತಂಡದ 162 ರನ್‌ಗಳಿಗೆ ಉತ್ತರವಾಗಿ ಕರ್ನಾಟಕ 197 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಹಿಮಾಚಲ ಪ್ರದೇಶ: 162 ಮತ್ತು 27 ಓವರುಗಳಲ್ಲಿ 2 ವಿಕೆಟ್‌ಗೆ 69 (ವಾಸ್ತವ್ ಆರ್. ಗಾರ್ಗ್ 28, ಅರ್ಪಿತ್ ಸಿಂಗ್ 30); ಕರ್ನಾಟಕ: 76.2 ಓವರುಗಳಲ್ಲಿ 197 (ಆದೇಶ್ ಡಿ ಅರಸ್ 61, ಧ್ರುವ್ ಕೃಷ್ಣನ್ 38; ಅಕ್ಷಯ್ ಪಿ. 37ಕ್ಕೆ4, ನೌನಿಹಾಲ್ 48ಕ್ಕೆ3).

ಒಂದೇ ತಂಡದಲ್ಲಿ ಮೆಡ್ವೆಡೇವ್, ಬೋಪಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಷ್ಯಾದ ತಾರೆ ಡೇನಿಯಲ್ ಮೆಡ್ವೆಡೇವ್ ಮತ್ತು ಭಾರತದ ಡಬಲ್ಸ್ ತಾರೆ ರೋಹನ್ ಬೋಪಣ್ಣ ಅವರು ಡಿ. 17 ರಿಂದ 20ರ ವರೆಗೆ ನಗರದಲ್ಲಿ ನಡೆಯಲಿರುವ ವಿಶ್ವ ಟೆನಿಸ್ ಲೀಗ್‌ನಲ್ಲಿ ಒಂದೇ ತಂಡದಲ್ಲಿ (ಗೇಮ್ ಚೇಂಜರ್ಸ್ ಫಾಲ್ಕನ್) ಆಡಲಿದ್ದಾರೆ. ಭಾರತದಲ್ಲಿ ಈ ಟೂರ್ನಿ ಮೊದಲ ಬಾರಿ ನಡೆಯುತ್ತಿದೆ.

ಕಬ್ಬನ್ ಪಾರ್ಕ್‌ನ ಎಸ್.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಾಲ್ಕು ದಿನಗಳ ಈ ಲೀಗ್‌ನ ಪಂದ್ಯಗಳು ನಡೆಯಲಿವೆ. ಗೇಮ್ ಚೇಂಜರ್ಸ್ ಫಾಲ್ಕನ್ಸ್ ಹಾಲಿ ಚಾಂಪಿಯನ್ ಆಗಿದೆ. ವಿಶ್ವದ ಮಾಜಿ ಆರನೇ ಕ್ರಮಾಂಕದ ಆಟಗಾರ, ಫ್ರಾನ್ಸ್‌ನ ಗೇಲ್ ಮಾನ್ಫಿಲ್ಸ್ ಮತ್ತು ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಎಒಎಸ್ ಈಗಲ್ಸ್ ತಂಡದಲ್ಲಿ ಆಡಲಿದ್ದಾರೆ.

ಈ ಬಾರಿಯ ಆವೃತ್ತಿಯಲ್ಲಿ ಅಂತರರಾಷ್ಟ್ರೀಯ ಮತ್ತು ಭಾರತದ ಆಟಗಾರರು ಸೇರಿ ಒಟ್ಟು 16 ಮಂದಿ ಭಾಗವಹಿಸಲಿದ್ದಾರೆ. ಇವರು ನಾಲ್ಕು ತಂಡಗಳಲ್ಲಿ ಹಂಚಿಹೋಗಿದ್ದಾರೆ. ಶಪವಲೋವ್ ಅವರು ಮೊದಲ ಬಾರಿ ಕಣಕ್ಕಿಳಿದಿರುವ ವೀಬಿ ರಿಯಾಲ್ಟಿ ಹಾಕ್ಸ್ ಪರ ಆಡಲಿದ್ದಾರೆ.

ಲೀಗ್‌ನ ತಂಡಗಳು ಮತ್ತು ಆಟಗಾರರು:

ಗೇಮ್ ಚೇಂಜರ್ಸ್ ಫಾಲ್ಕನ್ಸ್: ಡೇನಿಯಲ್ ಮೆಡ್ವೆಡೇವ್, ರೋಹನ್ ಬೋಪಣ್ಣ, ಮಗ್ದಾ ಲಿನೆಟ್ ಮತ್ತು ಸಹಜಾ ಯಮಲಪಲ್ಲಿ.

ವೀಬಿ ರಿಯಾಲ್ಟಿ ಹಾಕ್ಸ್: ಡೆನಿಸ್ ಶಪೊವಲೋವ್, ಯುಕಿ ಭಾಂಬ್ರಿ, ಎಲಿನಾ ಸ್ವಿಟೋಲಿನಾ ಮತ್ತು ಮಾಯಾ ರೇವತಿ.

ಆಸ್ಸೀ ಮಾವೆರಿಕ್ಸ್ ಕೈಟ್ಸ್: ನಿಕ್ ಕಿರ್ಗಿಯೋಸ್, ದಕ್ಷಿಣೇಶ್ವರ್ ಸುರೇಶ್, ಮಾರ್ತಾ ಕೊಸ್ಟಿಯುಕ್ ಮತ್ತು ಅಂಕಿತಾ ರೈನಾ.

ಎಒಎಸ್ ಈಗಲ್ಸ್: ಗೇಲ್ ಮಾನ್ಫಿಲ್ಸ್, ಸುಮಿತ್ ನಗಾಲ್, ಪೌಲಾ ಬಡೋಸಾ ಮತ್ತು ಶ್ರೀವಲ್ಲಿ ಭಮಿಡಿಪಾಟಿ.


ಬೃಂದಾ ಆಚಾರ್ಯ

ನ.27ಕ್ಕೆ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ತೆರೆಗೆ

ಕಳೆದ ಶುಕ್ರವಾರ (ನ.21) ತೆರೆಕಾಣಬೇಕಿದ್ದ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ' ಸಿನಿಮಾ ಮುಂದೂಡಿಕೆಯಾಗಿದ್ದು, ಇದೇ ಗುರುವಾರ(ನ.27) ಚಿತ್ರ ರಿಲೀಸ್ ಆಗಲಿದೆ ಎಂದು ಚಿತ್ರತಂಡ ತಿಳಿಸಿದೆ.

ಕೆಲ ತಾಂತ್ರಿಕ ಕೆಲಸಗಳ ವಿಳಂಬದಿಂದಾಗಿ ಸಿನಿಮಾವನ್ನು ಮುಂದೂಡಬೇಕಾಯಿತು ಎಂದಿದ್ದಾರೆ ನಿರ್ಮಾಪಕ ಎಚ್.ಕೆ.ಪ್ರಕಾಶ್. 'ಪಿನಾಕ' ಎಂಬ ವಿಎಫ್ಎಕ್ಸ್ ಸ್ಟುಡಿಯೊ ನಡೆಸುತ್ತಿರುವ ಅಭಿಷೇಕ್ ಎಂ. ನಿರ್ದೇಶನದ ಚೊಚ್ಚಲ ಸಿನಿಮಾ ಇದಾಗಿದೆ. ಬ್ಯಾಂಕ್ ದರೋಡೆಯ ಕಥೆಯನ್ನು ಹೊಂದಿರುವ ಈ ಚಿತ್ರದಲ್ಲಿ ದೀಕ್ಷಿತ್ ಶೆಟ್ಟಿ ಹಾಗೂ ಬೃಂದಾ ಆಚಾರ್ಯ ಮುಖ್ಯಭೂಮಿಕೆಯಲ್ಲಿದ್ದಾರೆ.


'ರಂಗಿತರಂಗ' ಸಿನಿಮಾ ನಿರ್ಮಾಣ ಮಾಡಿದ್ದ ಎಚ್.ಕೆ.ಪ್ರಕಾಶ್ ನಿರ್ಮಾಣ ಮಾಡುತ್ತಿರುವ ಆರನೇ ಸಿನಿಮಾ ಇದಾಗಿದೆ. ಸಿನಿಮಾದಲ್ಲಿ ಸಾಧು ಕೋಕಿಲ, ಗೋಪಾಲಕೃಷ್ಣ ದೇಶಪಾಂಡೆ, ಶ್ರೀವತ್ಸ, ಉಷಾ ಭಂಡಾರಿ, ಭರತ್, ವಿಶ್ವನಾಥ್, ಹರೀಶ್ ಸಮಷ್ಟಿ ಮುಂತಾದವರು ನಟಿಸಿದ್ದಾರೆ. 'ಟೈಗರ್' ಎನ್ನುವ ಪಾತ್ರದಲ್ಲಿ ದೀಕ್ಷಿತ್ ಕಾಣಿಸಿಕೊಂಡಿದ್ದಾರೆ.

ಅಪರಿಚಿತೆ ಟ್ರೇಲರ್ ಬಿಡುಗಡೆ

ಈ ಹಿಂದೆ 'ತಾಯವ್ವ' ಎಂಬ ಸಿನಿಮಾದಲ್ಲಿ ನಟಿಸಿದ್ದ ಗೀತಪ್ರಿಯ ಸುರೇಶ್ ಕುಮಾರ್ ಮುಖ್ಯಭೂಮಿಕೆಯಲ್ಲಿರುವ 'ಅಪರಿಚಿತೆ' ಸಿನಿಮಾದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದೆ.

ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಟ್ರೇಲರ್ ಬಿಡುಗಡೆ ಮಾಡಿದರು. ನಟಿ ತಾರಾ ಅವರು ಚಿತ್ರದ ಹಾಡೊಂದನ್ನು ಇದೇ ವೇಳೆ ರಿಲೀಸ್ ಮಾಡಿದರು. ಸಿನಿಮಾ ಕುರಿತು ಮಾತನಾಡಿದ ಗೀತಪ್ರಿಯ, 'ನನ್ನ ಪತಿ ಸುರೇಶ್ ಕುಮಾರ್ ಅವರೇ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ನಾನು ಜವಾಬ್ದಾರಿಯುತ ಶಿಕ್ಷಕಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಕಥೆ ಸಿನಿಮಾದಲ್ಲಿದೆ. ಕ್ರಿಸ್‌ಮಸ್ ವೇಳೆಗೆ ಚಿತ್ರ ಬಿಡುಗಡೆಯಾಗಲಿದೆ' ಎಂದರು. ಚಿತ್ರಕ್ಕೆ ವಿಶ್ವನಾಥ ಆ್ಯಕ್ಷನ್ ಕಟ್ ಹೇಳುತ್ತಿದ್ದು, ನಟ ಶ್ರೀನಾಥ್ ಹಾಗೂ ಶ್ರೀನಾಥ್ ಅವರ ಪುತ್ರ ರೋಹಿತ್ ಪ್ರಮುಖ ಪಾತ್ರದಲ್ಲಿದ್ದಾರೆ. ಥ್ರಿಲ್ಲರ್ ಜಾನರ್‌ನಲ್ಲಿ ಈ ಸಿನಿಮಾವಿದೆ. ❖


ಶ್ರೀನಾಥ್, ಗೀತಪ್ರಿಯ, ರೋಹಿತ್


ಶ್ರದ್ಧಾ ಕಪೂರ್

ರಾಹುಲ್ ಮೋದಿ ಜೊತೆ ಶ್ರದ್ಧಾ ಸಿನಿಮಾ

'ಆಶಿಕಿ-2', 'ಏಕ್ ವಿಲನ್', 'ಸ್ತ್ರೀ' ಖ್ಯಾತಿಯ ಬಾಲಿವುಡ್ ನಟಿ ಶ್ರದ್ಧಾ ಕಪೂರ್, ರಾಹುಲ್ ಮೋದಿ ನಿರ್ದೇಶಿಸಲಿರುವ ಹೊಸ ಸಿನಿಮಾವನ್ನು ಒಪ್ಪಿಕೊಂಡಿದ್ದಾರೆ. ನವೋದ್ಯಮಗಳ ಕುರಿತಾದ ಕಥೆಯನ್ನು ಈ ಸಿನಿಮಾ ಹೊಂದಿರಲಿದೆ ಎಂದಿದ್ದಾರೆ ಶ್ರದ್ಧಾ.

'ಪ್ಯಾರ್ ಕ ಪಂಚನಾಮ' ಹಾಗೂ 'ಪ್ಯಾರ್ ಕ ಪಂಚನಾಮ-2' ಸಿನಿಮಾಗಳಿಂದ ಗುರುತಿಸಿಕೊಂಡಿರುವ ರಾಹುಲ್ ಮೋದಿ ಸಹಾಯಕ ನಿರ್ದೇಶಕ ಹಾಗೂ ಬರಹಗಾರನಾಗಿ ಕೆಲಸ ಮಾಡಿದ್ದಾರೆ.

ಹೊಸ ಪ್ರಾಜೆಕ್ಟ್ ಕುರಿತು ಇತ್ತೀಚೆಗೆ ಇನ್‌ಸ್ಟಾಗ್ರಾಂನಲ್ಲಿ ಮಾಹಿತಿ ನೀಡಿರುವ ಶ್ರದ್ಧಾ, 'ಶೀಘ್ರದಲ್ಲೇ ಈ ಸಿನಿಮಾದ ಕುರಿತು ಅಧಿಕೃತ ಘೋಷಣೆಯಾಗಲಿದೆ' ಎಂದಿದ್ದಾರೆ. 'ಈಗಾಗಲೇ ಒಂದು ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ. ಇದು ಇನ್ನಷ್ಟೇ ಅಧಿಕೃತವಾಗಿ ಘೋಷಣೆಯಾಗಬೇಕಿದೆ. ಈ ಸಿನಿಮಾ ಕುರಿತು ಹೆಚ್ಚಿನ ಮಾಹಿತಿ ನೀಡಲು ಸಾಧ್ಯವಿಲ್ಲ. ಇದರ ಜೊತೆಗೆ ರಾಹುಲ್ ಮೋದಿ ಅವರ ನಿರ್ದೇಶಿಸುತ್ತಿರುವ ಸಿನಿಮಾ ಒಪ್ಪಿಕೊಂಡಿದ್ದೇನೆ. ಈ ಚಿತ್ರದಲ್ಲಿನ ಪಾತ್ರವು ಸವಾಲಿನಿಂದ ಕೂಡಿದ್ದು, ಹಿಂದಿನ ಸಿನಿಮಾಗಳಿಗಿಂತ ಭಿನ್ನವಾದ ಒಂದು ಪಾತ್ರ ಇದರಲ್ಲಿದೆ. ನಾನು ಸದಾ ಸವಾಲುಗಳುಳ್ಳ ಪಾತ್ರಗಳ ನಿರೀಕ್ಷೆಯಲ್ಲಿರುತ್ತೇನೆ' ಎಂದಿದ್ದಾರೆ.

2024ರಲ್ಲಿ ತೆರೆಕಂಡಿದ್ದ 'ಸ್ತ್ರೀ-2' ಸಿನಿಮಾದಲ್ಲಿ ಮಿಂಚಿದ್ದ ಶ್ರದ್ಧಾ, 'ಈಥಾ' ಎನ್ನುವ ಸಿನಿಮಾವನ್ನೂ ಒಪ್ಪಿಕೊಂಡಿದ್ದಾರೆ. ❖

ನೀ ನನ್ನವಳೇ.. ಎಂದ ನಿಹಾರ್


ನಿಹಾರ್, ರಚನಾ

'ಹೊಂದಿಸಿ ಬರೆಯಿರಿ' ಖ್ಯಾತಿಯ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್ ನಿರ್ದೇಶಿಸಿರುವ 'ಶೀರ್ಷಿಕೆರೂಪ ತಂದೆಯವರಿಗೆ' ಸಿನಿಮಾದ ಎರಡನೇ ಹಾಡು ಬಿಡುಗಡೆಯಾಗಿದೆ.

ಈ ಸಿನಿಮಾದಲ್ಲಿ ತೆಲುಗಿನ ಕಿರುತೆರೆಯಲ್ಲಿ ಹೆಸರು ಮಾಡಿರುವ ಕನ್ನಡದ ನಿಹಾರ್ ಮುಕೇಶ್ ನಾಯಕನಾಗಿ ನಟಿಸಿದ್ದು, 'ಅಕ್ಷರ' ಎಂಬ ಪಾತ್ರದಲ್ಲಿ ನಟಿ ರಚನಾ ಇಂದರ್ ಜೋಡಿಯಾಗಿದ್ದಾರೆ.

'ನೀ ನನ್ನವಳೇ...' ಎಂಬ ಈ ಹಾಡಿಗೆ ನಾಗಾರ್ಜುನ್ ಶರ್ಮಾ ಸಾಹಿತ್ಯ ಬರೆದಿದ್ದು, ರಜತ್ ಹೆಗ್ಡೆ, ಈಶಾ ಸುಚಿ ದನಿಯಾಗಿದ್ದಾರೆ. ಜೋ ಕೋಸ್ಟ್ ಸಂಗೀತ ನಿರ್ದೇಶನವಿರುವ ಹಾಡಿನಲ್ಲಿ ನಿಹಾರ್ ಹಾಗೂ ರಚನಾ ಕಾಣಿಸಿಕೊಂಡಿದ್ದಾರೆ. ಚಿತ್ರದಲ್ಲಿ ರಾಜೇಶ್ ನಟರಂಗ, ಸಿತಾರಾ, ರವೀಂದ್ರ ವಿಜಯ್, ಅಜಿತ್ ಹಂಡೆ, ಅಶ್ವಿತಾ ಹೆಗಡೆ ಸೇರಿದಂತೆ ಅನುಭವಿ ತಾರಾಬಳಗವಿದೆ. ಚಿತ್ರವು 'ಜೈ ಚಾಮುಂಡೇಶ್ವರಿ ಪ್ರೊಡಕ್ಷನ್' ಮೂಲಕ ನಿರ್ಮಾಣವಾಗಿದೆ.

ಚಿತ್ರಕ್ಕೆ ರಾಮೇನಹಳ್ಳಿ ಜಗನ್ನಾಥ್ ಅವರೇ ಕಥೆ ಬರೆದಿದ್ದು, 'ಹೊಂದಿಸಿ ಬರೆಯಿರಿ' ಚಿತ್ರ ನಿರ್ಮಾಣ ಮಾಡಿದ್ದ 'ಸಂಡೇ ಸಿನಿಮಾಸ್' ಈ ಚಿತ್ರವನ್ನು ಪ್ರಸ್ತುತಪಡಿಸುತ್ತಿದೆ. ದೀಪಕ್ ಯರಗೇರಾ ಛಾಯಾಚಿತ್ರಗ್ರಹಣ, ಸುರೇಶ್ ಆರ್ಮುಗಂ ಸಂಕಲನ, ಪ್ರಶಾಂತ್ ರಾಜಪ್ಪ ಸಂಭಾಷಣೆ ಚಿತ್ರಕ್ಕಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸ ಪೂರ್ಣಗೊಳಿಸಿರುವ ಚಿತ್ರತಂಡ ಶೀಘ್ರದಲ್ಲೇ ಬಿಡುಗಡೆ ದಿನಾಂಕ ಘೋಷಣೆ ಮಾಡಲಿದೆ. ❖



ಕಬಡ್ಡಿ ವಿಶ್ವಕಪ್ ಗೆದ್ದ ಭಾರತ ತಂಡದ ಆಟಗಾರ್ತಿಯರು ಟ್ರೋಫಿಯೊಂದಿಗೆ ಸಂಭ್ರಮಿಸಿದರು 'ಎಕ್ಸ್' ಚಿತ್ರ

ವಿಶ್ವಕಪ್ ಉಳಿಸಿಕೊಂಡ ಭಾರತ

ಮಹಿಳಾ ಕಬಡ್ಡಿ ತಂಡಕ್ಕೆ ಸತತ ಎರಡನೇ ಬಾರಿಗೆ ಕಿರೀಟ

ಢಾಕಾ (ಪಿಟಿಐ): ಭಾರತ ವನಿತೆಯರ ಕಬಡ್ಡಿ ತಂಡವು ಸೋಮವಾರ ಫೈನಲ್‌ನಲ್ಲಿ 35–28 ಅಂತರದಿಂದ ತೈವಾನ್ ತಂಡವನ್ನು ಮಣಿಸಿ ಸತತ ಎರಡನೇ ಬಾರಿಗೆ ವಿಶ್ವಕಪ್ ಕಿರೀಟವನ್ನು ಮುಡಿಗೇರಿಸಿಕೊಂಡಿತು.

11 ದೇಶಗಳು ಭಾಗವಹಿಸಿದ್ದ ಟೂರ್ನಿಯಲ್ಲಿ ಭಾರತ ಪ್ರಶಸ್ತಿಯನ್ನು ತನ್ನಲ್ಲೇ ಉಳಿಸಿಕೊಂಡಿತು. ಟೂರ್ನಿಯುದ್ದಕ್ಕೂ ಅಜೇಯವಾಗುಳಿದ ಭಾರತ ಸೆಮಿಫೈನಲ್‌ನಲ್ಲಿ 33–21ರಿಂದ ಬಲಿಷ್ಠ ಇರಾನ್ ತಂಡವನ್ನು ಮಣಿಸಿತ್ತು. ತೈವಾನ್ ತಂಡವು 25–18ರಿಂದ ಬಾಂಗ್ಲಾದೇಶ ತಂಡವನ್ನು ಮಣಿಸಿತ್ತು.

ವಿಶ್ವಕಪ್ ಗೆದ್ದ ಭಾರತ ತಂಡವನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. '2025ರ ಕಬಡ್ಡಿ ವಿಶ್ವಕಪ್ ಗೆದ್ದು ದೇಶ ಹೆಮ್ಮೆಪಡುವಂತೆ ಮಾಡಿದ ಭಾರತ ತಂಡಕ್ಕೆ ಅಭಿನಂದನೆಗಳು. ಈ ಗೆಲುವು ಅಸಂಖ್ಯಾತ ಯುವಮನಸ್ಸುಗಳು ಕಬಡ್ಡಿಯಲ್ಲಿ ತೊಡಗಿಸಿಕೊಳ್ಳಲು ಮತ್ತು ಉನ್ನತ ಗುರಿ ಸಾಧಿಸಲು ಸ್ಫೂರ್ತಿ ನೀಡಲಿದೆ' ಎಂದು 'ಎಕ್ಸ್'ನಲ್ಲಿ ಬರೆದಿದ್ದಾರೆ.

ಭಾರತ ಮಹಿಳಾ ಕಬಡ್ಡಿ ತಂಡವು ಈ ವರ್ಷದ ಮಾರ್ಚ್‌ನಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿಯೂ ಚಾಂಪಿಯನ್ ಆಗಿ ಹೊರಹೊಮ್ಮಿತ್ತು.



ಅಂಧ ಮಹಿಳೆಯರ ಚೊಚ್ಚಲ ಟಿ20 ವಿಶ್ವಕಪ್ ಗೆದ್ದು ಸೋಮವಾರ ಬೆಂಗಳೂರಿಗೆ ಬಂದ ಭಾರತ ತಂಡದ ಆಟಗಾರ್ತಿಯರು ಕೇಕ್ ಕತ್ತರಿಸಿ ಸಂಭ್ರಮಿಸಿದರು ಚಿತ್ರ: ಬಿ.ಕೆ. ಜನಾರ್ದನ

'ಅನುಕಂಪಕ್ಕಿಂತ ಅವಕಾಶ ಕಲ್ಪಿಸಿ'

ವಿಶ್ವಕಪ್ ವಿಜೇತ ಅಂಧ ಮಹಿಳಾ ತಂಡಕ್ಕೆ ಆತ್ಮೀಯ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಧ ಮಹಿಳೆಯರ ಚೊಚ್ಚಲ ಟಿ20 ವಿಶ್ವಕಪ್ ಗೆದ್ದು ಇತಿಹಾಸ ನಿರ್ಮಿಸಿದ ಭಾರತ ತಂಡವು ಸೋಮವಾರ ಶ್ರೀಲಂಕಾದಿಂದ ಬೆಂಗಳೂರಿಗೆ ಬಂದಿಳಿಯಿತು. ವಿಶ್ವವಿಜೇತ ವನಿತೆಯರನ್ನು ಹರ್ಷೋದ್ಗಾರದ ನಡುವೆ ಆರತಿ ಬೆಳಗಿ, ತಿಲಕ ಹಚ್ಚಿ ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

ಕೊಲಂಬೊದಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಭಾರತ ಏಳು ವಿಕೆಟ್‌ಗಳಿಂದ ನೇಪಾಳ ತಂಡವನ್ನು ಮಣಿಸಿ ಚಾರಿತ್ರಿಕ ಸಾಧನೆ ಮೆರೆದಿತ್ತು. 16 ಆಟಗಾರ್ತಿಯರ ತಂಡದಲ್ಲಿ ಕರ್ನಾಟಕದ ಮೂವರು ಸ್ಥಾನ ಪಡೆದಿದ್ದರು. ತುಮಕೂರಿನ ದೀಪಿಕಾ ಟಿ.ಸಿ. (ನಾಯಕಿ), ಕಾವ್ಯ ಎನ್.ಆರ್, ಶಿವಮೊಗ್ಗದ ರಿಪ್ಪನ್‌ಪೇಟೆಯ ಕಾವ್ಯ ವಿ. ಅವರು ತಂಡದಲ್ಲಿದ್ದರು.

ಭಾರತ ಅಂಧರ ಕ್ರಿಕೆಟ್ ಸಂಸ್ಥೆ (ಸಿಎಬಿಐ) ಅಧ್ಯಕ್ಷ ಮಹಾಂತೇಶ ಜಿ. ಕಿವಡಸಣ್ಣವರ ಅವರ ನೇತೃತ್ವದಲ್ಲಿ ತಂಡವು ಚೆನ್ನೈ ಮೂಲಕ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು. ಎರಡೂ ವಿಮಾನ ನಿಲ್ದಾಣಗಳಲ್ಲಿ ಚಾಂಪಿಯನ್ನರಿಗೆ ಅಧಿಕಾರಿಗಳು ಮತ್ತು ಅಭಿಮಾನಿಗಳಿಂದ ಭಾವವನಾತ್ಮಕ ಸ್ವಾಗತ ದೊರೆಯಿತು.

ಬಹುಮಾನ ಘೋಷಣೆ

ವಿಶ್ವಕಪ್ ಗೆದ್ದ ತಂಡದ ಆಟಗಾರ್ತಿಯರಿಗೆ ಚಿಂಟೆಲ್ಸ್ ಗ್ರೂಪ್ ತಲಾ ₹1 ಲಕ್ಷ ಮತ್ತು ಚಿಪ್‌ಲಾಜಿಕ್ ಟೆಕ್ ಸಂಸ್ಥೆಯು ತಲಾ ₹ 25 ಸಾವಿರ ಬಹುಮಾನ ಘೋಷಿಸಿವೆ.

'ಭಾರತದ ಆತಿಥ್ಯದಲ್ಲೇ ನಡೆದ ವಿಶ್ವಕಪ್ ಗೆಲ್ಲುವುದು ತಂಡದ ಗುರಿಯಾಗಿತ್ತು. ಅದಕ್ಕಾಗಿ ಕಠಿಣ ಅಭ್ಯಾಸ ನಡೆಸಿದ್ದೆವು. ಒಂದೇ ಕುಟುಂಬದ ಸದಸ್ಯರಂತೆ ಆಡಿ, ಏಳೂ ಪಂದ್ಯಗಳನ್ನು ಗೆದ್ದು ನಮ್ಮ ಸಾಮರ್ಥ್ಯವನ್ನು ವಿಶ್ವಕ್ಕೆ ತೋರಿದ್ದೇವೆ. ನಾವು ಜೀವನದಲ್ಲಿ ಎದುರಿಸಿದ ಸವಾಲುಗಳು, ಅವಮಾನಗಳಿಗೆ ಈ ಮೂಲಕ ಉತ್ತರಿಸಿದ್ದೇವೆ' ಎನ್ನುತ್ತಾ ದೀಪಿಕಾ ಅವರು ಮಾಧ್ಯಮ ಸಂವಾದದಲ್ಲಿ ಭಾವುಕರಾದರು.

'ತಂಡದಲ್ಲಿರುವ ಬಹುತೇಕ ಆಟಗಾರ್ತಿಯರು ಬದುಕಿನಲ್ಲಿ ಸಾಕಷ್ಟು ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಕೆಲವರ ಮನೆಯಲ್ಲಿ ಒಂದು ಹೊತ್ತಿನ ಊಟಕ್ಕೂ ತತ್ವಾರವಿದೆ. ನಮಗೆ ಅನುಕಂಪಕ್ಕಿಂತ ಅವಕಾಶ ಬೇಕು. ಸ್ವಾವಲಂಬಿ ಬದುಕು ನಡೆಸಲು ಸರ್ಕಾರದಿಂದ ಪ್ರೋತ್ಸಾಹವನ್ನು ನಿರೀಕ್ಷಿಸುತ್ತಿದ್ದೇವೆ' ಎಂದರು.

> ನಮ್ಮನ್ನು ಪ್ರೋತ್ಸಾಹಿಸಿದ ಸಮರ್ಥನಂ ಟ್ರಸ್ಟ್ ಮತ್ತು ದೇಶವನ್ನು ಕಾಯುವ ಯೋಧರಿಗೆ ಈ ಗೆಲುವನ್ನು ಅರ್ಪಿಸುತ್ತೇವೆ
> **ದೀಪಿಕಾ ಟಿ.ಸಿ.,** ಭಾರತ ತಂಡದ ನಾಯಕಿ

'ತಂಡವು ಟೂರ್ನಿಯಲ್ಲಿ ನಮ್ಮ ನಿರೀಕ್ಷೆಗೂ ಮೀರಿ ಉತ್ತಮ ಪ್ರದರ್ಶನ ನೀಡಿದೆ. ಆಟಗಾರ್ತಿಯರು ಆರ್ಥಿಕವಾಗಿ ಹಿಂದುಳಿದ ಕುಟುಂಬದಿಂದ ಬಂದಿದ್ದಾರೆ. ದೇಶವನ್ನು ಪ್ರತಿನಿಧಿಸಿ ಗೆದ್ದಿರುವ ತಂಡಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಸೂಕ್ತ ಗೌರವ ಸಿಗುವ ನಿರೀಕ್ಷೆಯಿದೆ' ಎಂದು ಸಮರ್ಥನಂ ಟ್ರಸ್ಟ್ ಅಧ್ಯಕ್ಷರೂ ಆಗಿರುವ ಮಹಾಂತೇಶ್ ತಿಳಿಸಿದರು.

'ಭಾರತ ತಂಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೇಂದ್ರ ಕ್ರೀಡಾ ಸಚಿವ ಮನ್ಸೂಖ್ ಮಾಂಡವೀಯ ತಮ್ಮ ಮನೆಗೆ ಆಹ್ವಾನಿಸಿದ್ದಾರೆ. ಈ ವೇಳೆಯಲ್ಲಿ ಪ್ರತ್ಯೇಕ ಕ್ರೀಡಾಂಗಣ, ನಗದು ಪುರಸ್ಕಾರ, ಉದ್ಯೋಗ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಡುವ ಪ್ರಯತ್ನ ಮಾಡಲಾಗುವುದು' ಎಂದು ಹೇಳಿದರು.

ಬ್ಯಾಸ್ಕೆಟ್‌ಬಾಲ್: ಸಹಕಾರನಗರ ತಂಡಕ್ಕೆ ಜಯ

ಬೆಂಗಳೂರು: ಸಂಘಟಿತ ಪ್ರದರ್ಶನ ನೀಡಿದ ಸಹಕಾರನಗರ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು 'ಸ್ಟೇಟ್ ಅಸೋಸಿಯೇಶನ್ ಕಪ್'ಗಾಗಿ ನಡೆಯುತ್ತಿರುವ ರಾಜ್ಯ ಮಟ್ಟದ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಸೋಮವಾರ 60–56ರಿಂದ ಯಂಗ್ ಬುಲ್ಸ್ ಬಿ.ಸಿ ತಂಡವನ್ನು ರೋಚಕವಾಗಿ ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆದ ಲೀಗ್ ಹಂತದ ಪಂದ್ಯದಲ್ಲಿ ಮೊದಲಾರ್ಧದಲ್ಲಿ 4 ಅಂಕಗಳ (31–27) ಅಲ್ಪ ಮುನ್ನಡೆ ಪಡೆದಿದ್ದ ಸಹಕಾರನಗರ ತಂಡಕ್ಕೆ ದ್ವಿತೀಯಾರ್ಧದಲ್ಲಿ ಸಮಬಲದ ಪೈಪೋಟಿ ಎದುರಾಯಿತು. ಆದರೂ, ಅಷ್ಟೇ ಅಂಕಗಳಿಂದ (4) ಗೆಲುವು ತಮ್ಮದಾಗಿಸಿಕೊಳ್ಳುವಲ್ಲಿ ಸಹಕಾರನಗರ ತಂಡದ ಆಟಗಾರರು ಯಶಸ್ವಿಯಾದರು.

ಫಲಿತಾಂಶಗಳು: ಎಂಸಿಎಚ್‌ಎಸ್ ತಂಡ 63–21ರಿಂದ ಸಿಜೆಸಿ ತಂಡದ ವಿರುದ್ಧ; ಬಿಸಿವೈಎ ತಂಡ 66–51ರಿಂದ ಯಲಹಂಕ ನ್ಯೂ ಟೌನ್ ತಂಡದ ವಿರುದ್ಧ; ಸಹಕಾರನಗರ ಬಿ.ಸಿ. ತಂಡ 69–38ರಿಂದ ಯಂಗ್‌ಬುಲ್ಸ್ ಬಿ.ಸಿ. ವಿರುದ್ಧ; ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ತಂಡ 67–37ರಿಂದ ಅಪ್ಪಯ್ಯ ಬಿ.ಸಿ. ವಿರುದ್ಧ; ಬೀಗಲ್ಸ್ ಬಿ.ಸಿ. ತಂಡ 73–47ರಿಂದ ಹೆಬ್ಬಾಳ ಬಿ.ಸಿ. ವಿರುದ್ಧ; ಬೆಂಗಳೂರು ವ್ಯಾನ್‌ಗಾರ್ಡ್ಸ್ 59–42ರಿಂದ ಪಟ್ಟಾಭಿರಾಮಯ್ಯ ಬಿ.ಸಿ. ವಿರುದ್ಧ; ಸಿನ್ಸಿನಾಟೀಸ್ ಬಿ.ಸಿ. 87–51ರಿಂದ ಎಸ್‌ಬಿಐ ವಿರುದ್ಧ ಹಾಗೂ ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ. ತಂಡವು 74–69ರಿಂದ ಭಾರತ್ ಸ್ಪೋರ್ಟ್ಸ್ ಯೂನಿಯನ್ ವಿರುದ್ಧ ಜಯ ಸಾಧಿಸಿದವು.

ಭಾರತಕ್ಕೆ ಮತ್ತೆ ಸೋಲಿನ ಭೀತಿ

ಎರಡನೇ ಟೆಸ್ಟ್: ಬೌಲಿಂಗ್‌ನಲ್ಲೂ ಕಾಡಿದ ಯಾನ್ಸೆನ್ • ದ. ಆಫ್ರಿಕಾಕ್ಕೆ ಭಾರಿ ಮುನ್ನಡೆ

• ಮಧು ಜವಳಿ

ಗುವಾಹಟಿ: ಭಾರತದ ಬೌಲರ್‌ಗಳು ಭಾನುವಾರ ಎರಡನೇ ದಿನದ ಆಟದಲ್ಲಿ ಬಸವಳಿದಿದ್ದರು. ಬೌಲರ್‌ಗಳಿಗೆ ಸ್ಪಂದಿಸದ ಅಸ್ಸಾಂ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದ ಪಿಚ್ ಅನ್ನು ಕುಲದೀಪ್ ಯಾದವ್ ಅವರು ರಸ್ತೆಗೆ ಹೋಲಿಸಿದ್ದರು. ಆದರೆ, ಇದೇ ಪಿಚ್‌ನಲ್ಲಿ ಸೋಮವಾರ ದಕ್ಷಿಣ ಆಫ್ರಿಕಾದ ಬೌಲರ್‌ಗಳನ್ನು ನಿಭಾಯಿಸುವಾಗ ಭಾರತದ ಬ್ಯಾಟರ್‌ಗಳು ಪರದಾಡಿದರು.

ಭಾನುವಾರ ಬ್ಯಾಟಿಂಗ್ ವೇಳೆ 97 ರನ್ ಗಳಿಸಿ ಆತಿಥೇಯ ತಂಡವನ್ನು ಹಿಗ್ಗಾಮುಗ್ಗಾ ದಂಡಿಸಿದ್ದ ಮಾರ್ಕೊ ಯಾನ್ಸೆನ್ ಮತ್ತೊಮ್ಮೆ ಕಾಡಿದರು. ಈ 'ಲಂಬೂ' ಎಡಗೈ ವೇಗಿ (48ಕ್ಕೆ6) ಕ್ರಿಕೆಟ್ ಜೀವನದಲ್ಲಿ ನಾಲ್ಕನೇ ಬಾರಿ ಐದು ವಿಕೆಟ್ ಗೊಂಚಲು ಪಡೆದರು.

ಎರಡನೇ ಟೆಸ್ಟ್‌ನಲ್ಲಿ ಸ್ಪಷ್ಟ ಮೇಲುಗೈ ಸಾಧಿಸಿರುವ ದಕ್ಷಿಣ ಆಫ್ರಿಕಾ ಈಗ 25 ವರ್ಷಗಳ ನಂತರ ಭಾರತದಲ್ಲಿ ಸರಣಿ ಜಯದ ಹೊಸ್ತಿಲಲ್ಲಿದೆ.

ಭಾನುವಾರ ವಿಕೆಟ್ ನಷ್ಟವಿಲ್ಲದೇ 9 ರನ್ ಗಳಿಸಿದ್ದ ಭಾರತ 83.5 ಓವರುಗಳಲ್ಲಿ 201 ರನ್‌ಗಳಿಗೆ ಕುಸಿಯಿತು. 288 ರನ್‌ಗಳ ಭಾರಿ ಮುನ್ನಡೆ ಪಡೆದ ಹರಿಣಗಳ ಪಡೆ, ಸೋಮವಾರ ಮೂರನೇ ದಿನದಾಟದ ಕೊನೆಗೆ ವಿಕೆಟ್ ನಷ್ಟವಿಲ್ಲದೇ 26 ರನ್ ಗಳಿಸಿದೆ. ಒಟ್ಟಾರೆ ಮುನ್ನಡೆ 314 ರನ್.

ಸ್ಪಿನ್ನರ್‌ಗಳಿಂದ ಭಾರತ ತಂಡಕ್ಕೆ 'ಸತ್ವ'ಪರೀಕ್ಷೆ ಎದುರಾಗಬಹುದೆಂದು ಊಹಿಸಲಾಗಿತ್ತು. ಆದರೆ ಬಲವಾದ ಪೆಟ್ಟು ಕೊಟ್ಟಿದ್ದು ಯಾನ್ಸೆನ್. ಮೊದಲ ಸ್ಪೆಲ್‌ನಲ್ಲಿ (7–0–21–0) ವಿಕೆಟ್ ಪಡೆಯಲು ವಿಫಲರಾದ ಅವರು ಎರಡನೇ ಸ್ಪೆಲ್‌ನಲ್ಲಿ ಆತಿಥೇಯರ ಬ್ಯಾಟಿಂಗ್ ಬೆನ್ನೆಲುಬು ಮುರಿದರು.

ಸ್ಪಿನ್ನರ್‌ಗಳು ಆರಂಭಿಕ ಆಘಾತ ನೀಡಿದ ಬಳಿಕ ಯಾನ್ಸೆನ್ ಎರಡನೇ ಸ್ಪೆಲ್‌ನ (8–1–18–4) ಮೊದಲ 25 ಎಸೆತಗಳಲ್ಲಿ ಬರೇ 11 ರನ್ನಿತ್ತು 4 ವಿಕೆಟ್‌ಗಳನ್ನು ಪಡೆದರು.

ಕೆ.ಎಲ್.ರಾಹುಲ್ ಮತ್ತು ಯಶಸ್ವಿ ಜೈಸ್ವಾಲ್ (58) ಜೋಡಿ ಬೆಳಿಗ್ಗೆ ಆರಾಮವಾಗಿ ಆಡುತ್ತಿರುವಂತೆ ಕಂಡಿತು. ಎಡಗೈ ಸ್ಪಿನ್ನರ್ ಕೇಶವ ಮಹಾರಾಜ್ ಮತ್ತು ಆಫ್ ಸ್ಪಿನ್ನರ್ ಸಿಮೊನ್ ಹಾರ್ಮರ್ ತಿರುವು ಮತ್ತು ಬೌನ್ಸ್ ಪಡೆದರು. ರಾಹುಲ್ ಎಚ್ಚರಿಕೆಗೆ ಮೊರೆಹೋದರೆ, ಜೈಸ್ವಾಲ್ ಆಕ್ರಮಣಮಿಶ್ರಿತ ಆಟಕ್ಕೆ ಮುಂದಾದರು. ಮೊದಲ ವಿಕೆಟ್‌ಗೆ 65 ರನ್‌ಗಳು ಸೇರಿದವು.

ಈ ವೇಳೆ ಮಹಾರಾಜ್ ಅವರು ದಕ್ಷಿಣ ಆಫ್ರಿಕಾಕ್ಕೆ ಅಗತ್ಯವಿದ್ದ 'ಆರಂಭ' ಒದಗಿಸಿದರು. ಅವರ ಬೌಲಿಂಗ್‌ನಲ್ಲಿ ರಾಹುಲ್ ಬ್ಯಾಟಿಗೆ ತಾಗಿದ ಚೆಂಡನ್ನು ಸ್ಲಿಪ್‌ನಲ್ಲಿದ್ದ ಏಡನ್ ಮರ್ಕರಂ ಉತ್ತಮವಾಗಿ ಹಿಡಿದರು. ಅರ್ಧಶತಕ ಬಾರಿಸಿದ ಮೇಲೆ ಜೈಸ್ವಾಲ್ ಹೆಚ್ಚುಹೊತ್ತು ನಿಲ್ಲಲಿಲ್ಲ. ಹಾರ್ಮರ್ ಅವರ ಮೂರು ವಿಕೆಟ್‌ಗಳಲ್ಲಿ ಮೊದಲನೆಯವರಾದರು. ವೈಡ್ ಆಗಿದ್ದ ಚೆಂಡನ್ನು ಕಟ್ ಮಾಡಲು ಹೋಗಿ ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿ ಯಾನ್ಸೆನ್ ಹಿಡಿದ ಉತ್ತಮ ಕ್ಯಾಚಿಗೆ ಜೈಸ್ವಾಲ್ ನಿರ್ಗಮಿಸಬೇಕಾಯಿತು. ಬಳಿಕ ಹಾರ್ಮರ್ ಅವರು ಸಾಯಿ ಸುದರ್ಶನ್ (15) ವಿಕೆಟ್ ಸಹ ಪಡೆದರು.

ಯಾನ್ಸೆನ್ ಈ ಪಿಚ್‌ನಲ್ಲಿ ಬೌನ್ಸ್ ಪಡೆಯುವಲ್ಲಿ ಯಶಸ್ಸು ಕಂಡರು. ಅವರ ಬೌಲಿಂಗ್‌ನಲ್ಲಿ ಮೂವರು ಬ್ಯಾಟರ್‌ಗಳು ಬೌನ್ಸರ್‌ಗಳನ್ನು ನಿಭಾಯಿಸುವಲ್ಲಿ ವಿಫಲರಾದರು. 1 ವಿಕೆಟ್‌ಗೆ 95 ರನ್ ಗಳಿಸಿದ್ದ ಭಾರತ ಟೀ ವೇಳೆಗೆ 102 ರನ್ ಗಳಿಸುವಷ್ಟರಲ್ಲಿ 4 ವಿಕೆಟ್ ಕಳೆದುಕೊಂಡಿತ್ತು.

ನಾಯಕ ರಿಷಭ್ ಪಂತ್ ಅವಸರ ತೋರಿದರು. ಯಾನ್ಸೆನ್ ಬೌಲಿಂಗ್‌ನಲ್ಲಿ ಬೀಸಾಟಕ್ಕೆ ಹೋದ ಅವರು ಕೀಪರ್ ವೆರೆಯನ್‌ಗೆ ಕ್ಯಾಚಿತ್ತರು. ನಿತೀಶ್ ರೆಡ್ಡಿ ಅವರು ಮರ್ಕರಂ ಒಂದೇ ಕೈಲಿ ಹಿಡಿದ ಡೈವಿಂಗ್ ಕ್ಯಾಚ್‌ಗೆ ಮರಳಬೇಕಾಯಿತು. ರವೀಂದ್ರ ಜಡೇಜ ಅವರು ಬೌನ್ಸರ್ ನಿರ್ವಹಿಸಿದರೂ, ಅದು ಅವರ ಭುಜಕ್ಕೆ ತಾಗಿ ಮರ್ಕರಂ ಮಡಿಲನ್ನು ಸೇರಿತು. ಆಗ ಮೊತ್ತ 7ಕ್ಕೆ 122. ತಂಡ 150 ದಾಟುವುದು ಅನುಮಾನವಾಗಿ ಕಂಡಿತು.



ದಕ್ಷಿಣ ಆಫ್ರಿಕಾದ ವೇಗಿ ಮಾರ್ಕೊ ಯಾನ್ಸೆನ್ ಬೌಲಿಂಗ್‌ನಲ್ಲಿ ಕೈಲ್ ವೆರೆಯನ್‌ಗೆ ಕ್ಯಾಚಿತ್ತು ಭಾರತ ತಂಡದ ನಾಯಕ ರಿಷಭ್ ಪಂತ್ ಔಟಾದ ವೇಳೆ ಸಹ ಆಟಗಾರರೊಂದಿಗೆ ಸಂಭ್ರಮಿಸಿದ ಯಾನ್ಸೆನ್ ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ: 489 (151.1 ಓವರ್‌ಗಳಲ್ಲಿ)
ಭಾರತ: 201 (83.5 ಓವರುಗಳಲ್ಲಿ)
(ಭಾನುವಾರ: ವಿಕೆಟ್ ನಷ್ಟವಿಲ್ಲದೇ 9)
ಜೈಸ್ವಾಲ್ ಸಿ ಯಾನ್ಸೆನ್ ಬಿ ಹಾರ್ಮರ್ 58 (97ಎ, 4x7, 6x1)
ರಾಹುಲ್ ಸಿ ಮರ್ಕರಂ ಬಿ ಮಹಾರಾಜ್ 22 (63ಎ, 4x2)
ಸುದರ್ಶನ್ ಸಿ ರಿಕೆಲ್ಟನ್ ಬಿ ಹಾರ್ಮರ್ 15 (40ಎ, 4x2)
ಜುರೆಲ್ ಸಿ ಮಹಾರಾಜ್ ಬಿ ಯಾನ್ಸೆನ್ 0 (11ಎ)
ಪಂತ್ ಸಿ ವೆರೆಯನ್ ಬಿ ಯಾನ್ಸೆನ್ 7 (8ಎ, 6x1)
ಜಡೇಜ ಸಿ ಮರ್ಕರಂ ಬಿ ಯಾನ್ಸೆನ್ 6 (18ಎ)
ನಿತೀಶ್ ಸಿ ಮರ್ಕರಂ ಬಿ ಯಾನ್ಸೆನ್ 10 (18ಎ, 4x1)
ಸುಂದರ್ ಸಿ ಮರ್ಕರಂ ಬಿ ಹಾರ್ಮರ್ 48 (92ಎ, 4x2, 6x1)
ಕುಲದೀಪ್ ಸಿ ಮರ್ಕರಂ ಬಿ ಯಾನ್ಸೆನ್ 19 (134ಎ, 4x3)
ಬೂಮ್ರಾ ಸಿ ವೆರೆಯನ್ ಬಿ ಯಾನ್ಸೆನ್ 5 (17ಎ, 4x1)
ಸಿರಾಜ್ ಔಟಾಗದೇ 2 (6ಎ)
ಇತರೆ: 9 (ಲೆಗ್‌ಬೈ 8, ನೋಬಾಲ್ 1)
ವಿಕೆಟ್ ಪತನ: 1–65 (ಕೆ.ಎಲ್.ರಾಹುಲ್, 21.3), 2–95 (ಯಶಸ್ವಿ ಜೈಸ್ವಾಲ್, 32.2), 3–96 (ಸಾಯಿ ಸುದರ್ಶನ್, 34.3), 4–102 (ಧ್ರುವ್ ಜುರೇಲ್, 35.3), 5–105 (ರಿಷಭ್ ಪಂತ್, 37.2), 6–119 (ನಿತೀಶ್ ಕುಮಾರ್ ರೆಡ್ಡಿ, 41.4), 7–122 (ರವೀಂದ್ರ ಜಡೇಜ, 43.3), 8–194 (ವಾಷಿಂಗ್ಟನ್ ಸುಂದರ್, 78.1), 9–194 (ಕುಲದೀಪ್ ಯಾದವ್, 81.5), 10–201 (ಜಸ್‌ಪ್ರೀತ್ ಬೂಮ್ರಾ, 83.5).
ಬೌಲಿಂಗ್: ಮಾರ್ಕೊ ಯಾನ್ಸೆನ್ 19.5–5–48–6; ವಿಯಾನ್ ಮಲ್ಡರ್ 10–5–14–0; ಕೇಶವ ಮಹಾರಾಜ್ 15–1–39–1; ಸಿಮೋನ್ ಹಾರ್ಮರ್ 27–6–64–3; ಏಡನ್ ಮರ್ಕರಂ 10–1–26–0; ಸೆನುರನ್ ಮುತ್ತುಸಾಮಿ 2–0–2–0
ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ:
ವಿಕೆಟ್ ನಷ್ಟವಿಲ್ಲದೇ 26 (8 ಓವರುಗಳಲ್ಲಿ)
ರಿಕೆಲ್ಟನ್ ಬ್ಯಾಟಿಂಗ್ 13 (25ಎ, 4x1)
ಮರ್ಕರಂ ಬ್ಯಾಟಿಂಗ್ 12 (23ಎ, 4x2)
ಇತರೆ: 1 (ಬೈ 1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 3–0–13–0; ಮೊಹಮ್ಮದ್ ಸಿರಾಜ್ 3–1–8–0; ರವೀಂದ್ರ ಜಡೇಜ 1–0–2–0; ಕುಲದೀಪ್ ಯಾದವ್ 1–0–2–0.

ಎಂಟನೇ ಕ್ರಮಾಂಕದಲ್ಲಿ ಆಡಿದ ವಾಷಿಂಗ್ಟನ್ ಸುಂದರ್ (48;92ಎ) ಈ ಬಾರಿಯೂ ಪ್ರತಿರೋಧ ತೋರಿದರು. ಬಂಡೆಯಂತೆ ಬೇರೂರಿದ ಕುಲದೀಪ್ ಯಾದವ್ (19;134ಎ) ಜೊತೆ 72 ರನ್ ಸೇರಿಸಿದರು. ಹಾರ್ಮರ್ ಅವರು ಸುಂದರ್ ವಿಕೆಟ್ ಪಡೆದ ಮೇಲೆ ಯಾನ್ಸೆನ್ ತಮ್ಮ ಕೊನೆಯ ಸ್ಪೆಲ್‌ನಲ್ಲಿ (2.5–2–5–2) ಇನಿಂಗ್ಸ್‌ಗೆ ತೆರೆ ಇಳಿದರು.

ಫಿಡೆ ಚೆಸ್ ವಿಶ್ವಕಪ್: ಇಂದು ಎರಡನೇ ಕ್ಲಾಸಿಕಲ್ ಆಟ

ವೀ– ಸಿಂದರೋವ್ ಆಟ ಡ್ರಾ

ಪಣಜಿ (ಪಿಟಿಐ): ಕಪ್ಪು ಕಾಯಿಗಳಲ್ಲಿ ಮತ್ತೊಮ್ಮೆ ಅತ್ಯುತ್ತಮವಾಗಿ ಆಡಿದ ಚೀನಾದ ಗ್ರ್ಯಾಂಡ್‌ಮಾಸ್ಟರ್ ವೀ ಯಿ ಅವರು ಉಜ್ಬೇಕಿಸ್ತಾನದ ಗ್ರ್ಯಾಂಡ್ ಮಾಸ್ಟರ್ ಜಾವೊಖಿರ್ ಸಿಂದರೋವ್ ಅವರ ಜೊತೆ ಫಿಡೆ ಚೆಸ್ ವಿಶ್ವಕಪ್ ಫೈನಲ್ ಪಂದ್ಯದ ಮೊದಲ ಕ್ಲಾಸಿಕಲ್ ಪಂದ್ಯವನ್ನು ಸೋಮವಾರ ಡ್ರಾ ಮಾಡಿಕೊಂಡರು.

ರಷ್ಯಾದ ಆ್ಯಂಡ್ರಿ ಇಸಿಪೆಂಕೊ ಅವರು ಮೂರನೇ ಸ್ಥಾನಕ್ಕಾಗಿ ನಡೆಯುತ್ತಿರುವ ಮುಖಾಮುಖಿಯಲ್ಲಿ ಉಜ್ಬೇಕಿಸ್ತಾನದ ನೊದಿರ್ಬೆಕ್ ಯಾಕುಬೊಯೇವ್ ಅವರನ್ನು 38 ನಡೆಗಳಲ್ಲಿ ಸೋಲಿಸಿ 1–0 ಮುನ್ನಡೆ ಪಡೆದರು.

ಮಂಗಳವಾರ ನಡೆಯುವ ಎರಡನೇ ಕ್ಲಾಸಿಕಲ್ ಆಟ ಡ್ರಾ ಆದರೂ ಇಸಿಪೆಂಕೊ ಅವರು ಪ್ರತಿಷ್ಠಿತ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯಲಿದ್ದಾರೆ.

ವೀ ಅವರು 'ಪೆಟ್ರೋವ್ ಡಿಫೆನ್ಸ್' ಅನುಸರಿಸಿದರು. ಸಿಂದರೋವ್ ಅವರು ಗೆಲುವಿಗಾಗಿ ಪ್ರಯತ್ನಿಸಿ ಹಿನ್ನಡೆ ಅನುಭವಿಸಿದರು. ಆದರೆ ಮೈಯೆಲ್ಲಾ ಕಣ್ಣಾಗಿದ್ದ ಉಜ್ಬೇಕ್ ಆಟಗಾರ, ಚೀನಾದ ಎದುರಾಳಿ ಅದನ್ನು ಗೆಲುವಾಗಿ ಪರಿವರ್ತಿಸದಂತೆ ಅಷ್ಟೇ ಎಚ್ಚರಿಕೆಯಿಂದ ಆಡಿ ಪಂದ್ಯವನ್ನು ಸಮಬಲದ ಸ್ಥಿತಿಗೆ ತಂದರು. 50 ನಡೆಗಳ ನಂತರ ಇಬ್ಬರೂ ಡ್ರಾಕ್ಕೆ ಒಪ್ಪಿಕೊಂಡರು.

ಮಂಗಳವಾರ ಎರಡನೇ ಕ್ಲಾಸಿಕಲ್ ಆಟವೂ ಡ್ರಾ ಆದಲ್ಲಿ ಬುಧವಾರ ಕಾಲಮಿತಿಯ ರ‍್ಯಾಪಿಡ್ ಪಂದ್ಯಗಳನ್ನು ಆಡಬೇಕಾಗುತ್ತದೆ.



ಜಾವೊಖಿರ್ ಸಿಂದರೋವ್ (ಎಡ) ಮತ್ತು ವೀ ಯಿ ಫಿಡೆ ಚಿತ್ರ

27ರಿಂದ ಪರಿಕ್ರಮ ಚಾಂಪಿಯನ್ಸ್ ಲೀಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಕ್ರಮ ಹ್ಯುಮಾನಿಟಿ ಫೌಂಡೇಷನ್‌ನ ಆಶ್ರಯದಲ್ಲಿ 13ನೇ ಆವೃತ್ತಿಯ ಪರಿಕ್ರಮ ಚಾಂಪಿಯನ್ಸ್ ಲೀಗ್ (ಪಿಸಿಎಲ್) ಫುಟ್‌ಬಾಲ್ ಟೂರ್ನಿ ಇದೇ 27ರಿಂದ 29ರವರೆಗೆ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯಲಿದೆ.



16 ವರ್ಷದೊಳಗಿನ ಅಂತರ ಶಾಲಾ ಲೀಗ್ ಇದಾಗಿದ್ದು, ಒಟ್ಟು 16 ತಂಡಗಳು ಸ್ಪರ್ಧೆಯಲ್ಲಿವೆ. ನಗರದ 13 ಶಾಲೆಗಳು ಒಳಗೊಂಡಂತೆ ಗೋವಾ, ಉದಯಪುರ ಹಾಗೂ ಒಡಿಶಾದ ತಂಡಗಳು 'ಸಮಾನತೆಯ ಕಪ್'ಗಾಗಿ ಹೋರಾಟ ನಡೆಸಲಿವೆ. ಡಿವೈಇಎಸ್ ಆಯುಕ್ತ ಆರ್.ಚೇತನ್ 27ರಂದು ಬೆಳಿಗ್ಗೆ ಟೂರ್ನಿಗೆ ಚಾಲನೆ ನೀಡುವರು.

'ಅವಕಾಶವಂಚಿತ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವ ಉದ್ದೇಶದಿಂದ 2011ರಿಂದ ಪಿಸಿಎಲ್ ಆಯೋಜಿಸಲಾಗುತ್ತಿದೆ. ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಮತ್ತು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಕೂಡಾ ಪಿಸಿಎಲ್ ಅನ್ನು ದೇಶದ ಅತ್ಯುತ್ತಮ ಟೂರ್ನಿ ಎಂದು ಗುರುತಿಸಿವೆ' ಎಂದು ಫೌಂಡೇಷನ್‌ನ ಸಂಸ್ಥಾಪಕಿ ಶುಕ್ಲಾ ಬೋಸ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬ್ಯಾಡ್ಮಿಂಟನ್: ಶೈನಾಗೆ ಸಿಂಗಲ್ಸ್, ಸುಮಿತ್‌ಗೆ ಡಬಲ್ಸ್ ಪ್ರಶಸ್ತಿ



ಕರ್ನಾಟಕದ ಶೈನಾ ಮಣಿಮುತ್ತು, ಸುಮಿತ್ ಎ.ಆರ್. ಹಾಗೂ ರುಜುಲಾ ರಾಮು

ಬೆಂಗಳೂರು: ಕರ್ನಾಟಕದ ಶಟ್ಲರ್‌ಗಳಾದ ಶೈನಾ ಮಣಿಮುತ್ತು ಮತ್ತು ಸುಮಿತ್ ಎ.ಆರ್. ಅವರು ಅರುಣಾಚಲ ಪ್ರದೇಶದ ಇಟಾನಗರದಲ್ಲಿ ಸೋಮವಾರ ಮುಕ್ತಾಯಗೊಂಡ 48ನೇ ಜೂನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್ ಷಿಪ್‌ನಲ್ಲಿ ಕ್ರಮವಾಗಿ ಬಾಲಕಿಯರ ಸಿಂಗಲ್ಸ್ ಮತ್ತು ಬಾಲಕರ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಜೂನಿಯರ್ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಶೈನಾ 17–21, 22–20, 21–13 ರಿಂದ ತನೂ ಚಂದ್ರ ಅವರನ್ನು ಸೋಲಿಸಿದರು.

ಸೆಮಿಫೈನಲ್ ತಲುಪಿದ್ದ ಕರ್ನಾಟಕದ ರುಜುಲಾ ರಾಮು ಅವರು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಸುಮಿತ್ ಅವರು ಬಾಲಕರ ಡಬಲ್ಸ್‌ನಲ್ಲಿ ಲಾಲ್ರೆಮ್‌ಸಂಘಾ ಜೊತೆಗೂಡಿ ಫೈನಲ್‌ನಲ್ಲಿ 21–13, 21–12ರಿಂದ ಆಂಧ್ರ ಪ್ರದೇಶದ ಜೋಡಿ ಭಾರ್ಗವ್ ರಾಮ್ ಅರಿಗಲೆ– ವಿಶ್ವತೇಜ್ ಗೊಬ್ಬುರು ಅವರನ್ನು ಪರಾಭವಗೊಳಿಸಿದರು.

ಬಾಲಕರ ಸಿಂಗಲ್ಸ್ ಪ್ರಶಸ್ತಿ ಉತ್ತರಾಖಂಡದ ಅನ್ಶ್ ನೇಗಿ ಪಾಲಾಯಿತು. ನೇಗಿ ಅವರು ಫೈನಲ್‌ನಲ್ಲಿ 18–21, 22–20, 21–11 ರಿಂದ ತಮ್ಮದೇ ರಾಜ್ಯದ ಸೂರ್ಯಾಕ್ಷ್ ರಾವತ್ ಅವರನ್ನು ಸೋಲಿಸಿದರು.